

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜನವರಿ 17 ಬುಧವಾರ 2024

ಸಂಪುಟ: 44 | ಸಂಚಿಕೆ: 270 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಅಯೋಧ್ಯೆಯ ರಾಮಮಂದಿರದಲ್ಲಿ ಮೈಸೂರಿನ ಯೋಗಿಯ ಕೈಯ್ಯಲ್ಲಿ ಮೂಡಿದ

ಬಾಲರಾಮನ ಪ್ರತಿಷ್ಠಾಪನೆ

●ಕರುನಾಡಿಗೂ ಅಯೋಧ್ಯೆಗೂ ನಂಟು ●ಮೈಸೂರಿನ ಹಿರಿಮೆ ಗರಿಮೆ ಇಮ್ಮಡಿಯಾಯ್ತು ●ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಘೋಷಣೆ

ಮೈಸೂರು, ಜ.16(ಬಿಎಲ್‌ಯು)– ಮರ್ಯಾದಾ ಪುರುಷ ಶ್ರೀರಾಮನ ಜನ್ಮಸ್ಥಾನ ಉತ್ತರ ಪ್ರದೇಶದ ಅಯೋಧ್ಯೆಯ ಭವ್ಯ ಮಂದಿರದ ಗರ್ಭಗುಡಿಯಲ್ಲಿ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಕೆತ್ತನೆಯ ಬಾಲರಾಮನ ಮೂರ್ತಿ ಪ್ರತಿಷ್ಠಾಪನೆಗೊಳ್ಳುತ್ತಿದೆ. ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಅಧಿಕೃತವಾಗಿ ಪ್ರಕಟಿಸಿದೆ ಈ ಮೂಲಕ ಮೈಸೂರಿನ ಮುಕುಟಕ್ಕೆ ಮತ್ತೊಂದು ಗರಿ ಸೇರ್ಪಡೆಯಾಗಿದೆ.

ಮೈಸೂರು ತಾಲೂಕು ಹೆಚ್.ಡಿ. ಕೋಟೆ ರಸ್ತೆಯಲ್ಲಿ ಬರುವ ಗುಜ್ಜೇಗೌಡನಪುರದ ಕಪ್ಪುಶಿಲೆಯನ್ನು ಬಾಲರಾಮನ ಮೂರ್ತಿಗೆ ಬಳಸಲಾಗಿದೆ. ಮೈಸೂರಿನ ಅರಣ್ ಯೋಗಿರಾಜ್ ಬಾಲರಾಮನ ಮೂರ್ತಿ ಕೆತ್ತನೆ ಮಾಡಿದ್ದಾರೆ. ಈ ಮೂಲಕ ಮೈಸೂರು ಹಾಗೂ ಅಯೋಧ್ಯೆ ನಡುವೆ ಬಲವಾದ ನಂಟು ಬೆಸೆದಿದೆ.

ಅಯೋಧ್ಯೆಯ ರಾಮಮಂದಿರದ ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸುವ ಬಾಲರಾಮನ ಮೂರ್ತಿ ಕೆತ್ತನೆಗೆ ಮೈಸೂರಿನ ಶಿಲ್ಪಿ ಯೋಗಿರಾಜ್, ಕರ್ನಾಟಕದವರೇ ಆದ ಇಡುಗುಂಜಿಯ ಪ್ರಖ್ಯಾತ ಶಿಲ್ಪಿ ಕೆ.ಎಲ್.ಭಟ್ ಹಾಗೂ ರಾಜಸ್ಥಾನದ ಸತ್ಯನಾರಾಯಣ ಪಾಂಡೆ ಆಯ್ಕೆಯಾಗಿದ್ದರು. ಇವುಗಳಲ್ಲಿ ಯಾವುದು ಅರ್ಹತೆಯ ಅಗ್ರಪಟ್ಟಿಯಲ್ಲಿರುತ್ತದೆಯೊ ಅದನ್ನು ಆಯ್ಕೆ ಮಾಡಲಾಗುವುದು ಎಂದು ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ತಿಳಿಸಿತ್ತು. ಅದರಂತೆ ಮೂವರು ಜೂನ್ ತಿಂಗಳಿಂದ ಕೆತ್ತನೆ ಆರಂಭಿಸಿ, ಡಿಸೆಂಬರ್ ಅಂತ್ಯದ ವೇಳೆಗೆ ಪೂರ್ಣಗೊಳಿಸಿದ್ದರು. ಅರುಣ್ ಯೋಗಿರಾಜ್ ಹಾಗೂ ಕೆ.ಎಲ್.ಭಟ್ ಬಾಲರಾಮನ ಮೂರ್ತಿಗೆ ಕೃಷ್ಣ ಶಿಲೆ ಬಳಸಿದ್ದರೆ, ಪಾಂಡೆ ಅವರು ಶ್ವೇತವರ್ಣದ ಅಮೃತ ಶಿಲೆ ಬಳಸಿದ್ದರು. ಈ ಮೂವರು ಶಿಲ್ಪಿಗಳು ಕೆತ್ತನೆ ಮಾಡಿದ ಬಾಲರಾಮನ ಮೂರ್ತಿ ಬಗ್ಗೆ ಅಧ್ಯಯನ ಮಾಡಿದ ಟ್ರಸ್ಟ್ ಅಂತಿಮ

●9ನೇ ಪುಟಕ್ಕೆ

ಬಾಲರಾಮನ ಕೃಷ್ಣಶಿಲೆ ಸಿಕ್ಕಿದ್ದೇಗೆ

ಅರುಣ್ ಯೋಗಿರಾಜ್ ಕೆತ್ತನೆ ಮಾಡಿರುವ ಬಾಲರಾಮನ ಮೂರ್ತಿಯ ಶಿಲೆ ಮೈಸೂರು ತಾಲೂಕಿನ ಹೆಚ್.ಡಿ.ಕೋಟೆ ರಸ್ತೆಯಲ್ಲಿ ಬರುವ ಗುಜ್ಜೇಗೌಡನಪುರದಲ್ಲಿ ದೊರಕಿತು. ಕಲ್ಲು ಗಣಿಗಾರಿಕೆ ನಡೆಸುವ ಶ್ರೀನಿವಾಸ್ ಎಂಬುವರ ಜಮೀನಿನಲ್ಲಿ ಅಪರೂಪದ ಕೃಷ್ಣಶಿಲೆ ಪತ್ತೆಯಾಯಿತು. ಬಾಲರಾಮನ ಕೆತ್ತನೆಗೆ ಇದೇ ರೀತಿಯ ಶಿಲೆಗಾಗಿ ಹುಡುಕುತ್ತಿದ್ದ ಅರುಣ್ ಯೋಗಿರಾಜ್‌ಗೆ ಈ ವಿಷಯ ಅವರ ತಂದೆಯ ಸ್ನೇಹಿತರಾದ ನಟರಾಜ್ ಎಂಬುವರಿಂದ ತಿಳಿಯಿತು. ತರುವಾಯ ಅರುಣ್ ಯೋಗಿರಾಜ್ ಈ ವಿಷಯವನ್ನು ಶಿಲ್ಪಿಗಳಾದ ಮಾನಯ್ಯ ಬಡಿಗೇರ್ ಮತ್ತು ಸುರೇಂದ್ರ ಶರ್ಮಾ ಅವರಿಗೆ ತಿಳಿಸಿದರು. ಅವರು ಕೃಷ್ಣಶಿಲೆ ಪತ್ತೆಯಾದ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ಮಾಡಿದಾಗ ಬಾಲರಾಮ ಮೂರ್ತಿಗೆ ಇದು ಹೇಳಿಮಾಡಿಸಿದ ಶಿಲೆ ಎಂಬುದನ್ನು ತಿಳಿಸಿದರು. ನಂತರ 17 ಟನ್ ತೂಕದ ಐದು ಕೃಷ್ಣಶಿಲೆಯನ್ನು 2023 ಫೆ.29ರಂದು ಅಯೋಧ್ಯೆಗೆ ಕಳುಹಿಸಲಾಯಿತು. ಇದೇ ಕಲ್ಲಿನಲ್ಲಿ ಈಗ ಸೀತಾಮಾತೆ ಹಾಗೂ ಲಕ್ಷ್ಮಣ ಮೂರ್ತಿಯನ್ನು ಕೆತ್ತನೆ ಮಾಡಲಾಗಿದೆ. ಗಣಿ ಮಾಲೀಕ ಶ್ರೀನಿವಾಸ್ ಈ ಕೃಷ್ಣ ಶಿಲೆಯನ್ನು ಹಣ ಪಡೆಯದೆ ಅಯೋಧ್ಯೆಗೆ ಕಳುಹಿಸಿಕೊಟ್ಟರು.



ಅರುಣ್ ಯೋಗಿರಾಜ್



ಮೋದಿ ಸೇರಿ ಕೆಲವರಷ್ಟೆ ಹಾಜರು

ಜನವರಿ 22ರಂದು ರಾಮಮಂದಿರದಲ್ಲಿ ಬಾಲರಾಮ ಪ್ರತಿಷ್ಠಾಪನೆಗೊಳ್ಳುವ ವೇಳೆ ಪ್ರಧಾನಿ ಮೋದಿ ಸೇರಿದಂತೆ ಕೇವಲ ಬೆರಳೆಣಿಕೆಯಷ್ಟು ಗಣ್ಯರು ಮಾತ್ರ ಹಾಜರಿರಲು ಅವಕಾಶ ಕಲ್ಪಿಸಲಾಗಿದೆ. ಆರ್ ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಉತ್ತರ ಪ್ರದೇಶದ ರಾಜ್ಯಪಾಲೆ ಆನಂದಿಬೆನ್ ಪಟೇಲ್, ದೇವಾಲಯದ ಪ್ರಧಾನ ಅರ್ಚಕ ನೃತ್ಯ ಗೋಪಾಲ ಮಹಾರಾಜ್ ಸೇರಿದಂತೆ ಟ್ರಸ್ಟ್ ಧರ್ಮದರ್ಶಿಗಳು ಹಾಜರಿರುತ್ತಾರೆ.

ಬಾಲರಾಮನಿಗೆ ಸೂರ್ಯ ರಶ್ಮಿ

ರಾಮಮಂದಿರದಲ್ಲಿ ಪ್ರತಿಷ್ಠಾಪನೆಗೊಳ್ಳುತ್ತಿರುವ ಬಾಲರಾಮನ ಮೇಲೆ ಸೂರ್ಯನ ಕಿರಣ ಬೀಳುವಂತೆ ಗರ್ಭಗುಡಿಯನ್ನು ವಿಶಿಷ್ಟ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ. ಪ್ರಸ್ತುತ 70 ವರ್ಷದಿಂದ ಇರುವ ಬಾಲರಾಮನ ಮೂರ್ತಿಯನ್ನು ಕೂಡ ಗರ್ಭಗುಡಿಯಲ್ಲಿ ಇರಿಸಲಾಗುತ್ತಿದೆ. ಇಡೀ ದೇವಾಲಯವನ್ನು ಪಾರಂಪರಿಕ ಶೈಲಿಯಲ್ಲಿ ನಿರ್ಮಾಣ ಮಾಡಲಾಗಿದ್ದು, ಕಣ್ಮನ ಸೆಳೆಯಲಿದೆ.

ಗೋವುಗಳೊಂದಿಗೆ ಪ್ರಧಾನಿ ಮೋದಿ ಸಂಕ್ರಾಂತಿ ಸಂಭ್ರಮ



ಪ್ರಧಾನಮಂತ್ರಿ ನರೇಂದ್ರ ಮೋದಿ ಸೋಮವಾರ ಮಕರ ಸಂಕ್ರಾಂತಿ ಅಂಗವಾಗಿ ನವದೆಹಲಿಯ ಲೋಕಕಲ್ಯಾಣ ಮಾರ್ಗದ ತಮ್ಮ ನಿವಾಸದಲ್ಲಿ ಗೋವುಗಳಿಗೆ ಮೇವು ತಿನ್ನಿಸುವ ಮೂಲಕ ಸಂಕ್ರಾಂತಿಯನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿದರು. ಈ ಗೋವುಗಳು ಆಂಧ್ರಪ್ರದೇಶದ ಪುಂಗನೂರು ತಳಿಯಾಗಿವೆ. ಸಾಮಾನ್ಯವಾಗಿ ಸಂಕ್ರಾಂತಿಯಂದು ಗೋವುಗಳನ್ನು ಅಲಂಕರಿಸಿ, ಅವುಗಳಿಗೆ ಮೇವು ತಿನ್ನಿಸುವ ಸಂಪ್ರದಾಯ ಆಚರಣೆಯಲ್ಲಿದೆ.

ಮೈಸೂರಿಗೆ 10 ಕಿಲೋಮೀಟರ್ ದೂರದ ಮಹದೇವಪುರದಲ್ಲಿ

ಹುಲಿ ಪ್ರತ್ಯಕ್ಷ

ಶ್ರೀರಂಗಪಟ್ಟಣ, ಜ.16– ಮೈಸೂರಿಗೆ ಕೇವಲ 10 ಕಿಲೋಮೀಟರ್ ದೂರದ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕಿನ 'ಶೂಟಿಂಗ್' ಮಹದೇವಪುರ, ಚನ್ನಹಳ್ಳಿ ಸೇರಿದಂತೆ ಸುತ್ತಮುತ್ತ ಹುಲಿ ಸಂಚರಿಸುತ್ತಿದೆ. ಹುಲಿ ಓಡಾಡುತ್ತಿರುವ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ಈಗಾಗಲೇ ವೈರಲ್ ಆಗಿದ್ದು, ಈ ಭಾಗದ ಗ್ರಾಮಸ್ಥರು ಭಯಗೊಂಡಿದ್ದಾರೆ.

ಚನ್ನಹಳ್ಳಿ–ಮಹದೇವಪುರ ಸಂಪರ್ಕ ರಸ್ತೆ, ಮಹದೇವಪುರ ಹೊರವಲಯದ ಚಿಕ್ಕಮ್ಮನ ದೇವಸ್ಥಾನ, ಕಬ್ಬಿನಗದ್ದೆ, ತೋಟಗಳಲ್ಲಿ ಹುಲಿ ಓಡಾಡುತ್ತಿರುವ ದೃಶ್ಯವನ್ನು ಕೆಲವರು ತಮ್ಮ ಮೊಬೈಲ್‌ನಲ್ಲಿ ಚಿತ್ರೀಕರಿಸಿ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಮಾಡಿದ್ದಾರೆ. ಚನ್ನಹಳ್ಳಿ ಗ್ರಾಮದಲ್ಲಿ ವಾರದ ಹಿಂದೆ ಹುಲಿ ಕಾಣಿಸಿಕೊಂಡು ಪುಟ್ಟಯ್ಯ ಎಂಬುವರಿಗೆ ಸೇರಿದ ಮೇಕೆಯನ್ನು ತಿಂದು ಹಾಕಿತ್ತು. ಈಗ ದಿನನಿತ್ಯ ಹುಲಿ ಕಾಣಿಸಿಕೊಳ್ಳುತ್ತಿರುವುದು ಗ್ರಾಮಸ್ಥರಲ್ಲಿ ಮತ್ತಷ್ಟು ಆತಂಕ ಮೂಡಿಸಿದೆ. ಆದರೆ ಯಾರಿಗೂ ತೊಂದರೆ ನೀಡಿಲ್ಲ. ದಾಳಿ ನಡೆಸಿಲ್ಲ. ಇದೊಂದು ಸಾಧು ಹುಲಿ ಎಂದು ಮಹದೇವಪುರ ಗ್ರಾಮಸ್ಥರೇ ಸಮಾಧಾನಪಟ್ಟುಕೊಳ್ಳುತ್ತಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿ ಪರಿಶೀಲಿಸಿದ ಜಿಲ್ಲಾ ಉಪವಲಯ ಸಂರಕ್ಷಣಾಧಿಕಾರಿ ರಾಜೇಶ್, ಈ ಭಾಗದಲ್ಲಿ ಹುಲಿ ಸಂಚರಿಸುತ್ತಿದೆ. ಗ್ರಾಮಸ್ಥರು ಬೆಳಗ್ಗೆ, ಸಂಜೆ ಜಮೀನುಗಳಿಗೆ ●6ನೇ ಪುಟಕ್ಕೆ




ಇಂದು ಮಧ್ಯರಾತ್ರಿಯಿಂದ ಲಾರಿ ಮುಷ್ಕರ

■ಪುಟ–7

ಬಹುಕೋಟಿ ಬೆಲೆಯ ಆಸ್ತಿ ಖಾಸಗಿ ವ್ಯಕ್ತಿಗಳ ಪಾಲಾಗುವ ಪರಿಸ್ಥಿತಿ ಸಂಬಂಧ

ಹೈಕೋರ್ಟ್ ನಿವೃತ್ತ ನ್ಯಾಯಾಧೀಶರು ಇಲ್ಲವೇ ಎಸ್‌ಐಟಿ ತನಿಖೆಗೆ ಒತ್ತಾಯ

●ಮುಡಾ ಸಭೆಯಲ್ಲಿ ಗಂಭೀರ ಚರ್ಚೆ ●27 ಎಕರೆ ಸುಮಾರು 400 ಕೋಟಿ ಮೌಲ್ಯದ ಆಸ್ತಿ ರಕ್ಷಣೆ ಸಂಬಂಧ ಸರ್ಕಾರದ ಗಮನ ಸೆಳೆಯಲು ನಿರ್ಧಾರ ●ಶಾಸಕ ಕೆ.ಹರೀಶ್ ಗೌಡ ಸೇರಿದಂತೆ ಹಲವರು ಹೋರಾಟಕ್ಕೆ ತೀರ್ಮಾನ



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಾಲ್ಕು ತಿಂಗಳ ನಂತರ ಪ್ರಾಧಿಕಾರದ ಅಧ್ಯಕ್ಷರಾದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಧ್ಯಕ್ಷತೆಯಲ್ಲಿ ಮಂಗಳವಾರ ಸಭೆ ನಡೆಯಿತು. ಮುಡಾ ಸದಸ್ಯರು, ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಡಾ. ಡಿ.ತಿಮ್ಮಯ್ಯ, ಕೆ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಸಿ.ಎನ್.ಮಂಜೇಗೌಡ, ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಮತ್ತಿತರರು ಚಿತ್ರದಲ್ಲಿದ್ದಾರೆ.

ಮೈಸೂರು, ಜ.16(ಆರ್‌ಕೆ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಬಹುಕೋಟಿ ಬೆಲೆಯ ಆಸ್ತಿ ಖಾಸಗಿ ವ್ಯಕ್ತಿಗಳ ಪಾಲಾಗುತ್ತಿದೆ ಎಂಬ ಪ್ರಕರಣ ಸಂಬಂಧ ಹೈಕೋರ್ಟ್ ನಿವೃತ್ತ ನ್ಯಾಯಾಧೀಶರು ಅಥವಾ ವಿಶೇಷ ತನಿಖಾ ತಂಡ(ಎಸ್‌ಐಟಿ)ದಿಂದ ತನಿಖೆ ನಡೆಸುವಂತೆ ಸದಸ್ಯರು ಒತ್ತಾಯಿಸಿದ್ದಾರೆ.

ಮುಡಾ ಕಚೇರಿ ಸಭಾಂಗಣದಲ್ಲಿ 4 ತಿಂಗಳ ನಂತರ ಮಂಗಳವಾರ ಪ್ರಾಧಿಕಾರದ ಅಧ್ಯಕ್ಷರಾದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವಿವಾದಿತ ದಟ್ಟಗಳ್ಳಿ ಗ್ರಾಮದ ಸರ್ವೆ ನಂ.27/1, 27/2, 27/4, 29/1ಎ, 32/3, 8/1, 38/2 ಸೇರಿದಂತೆ ಸುಮಾರು 27.34 ಎಕರೆ ಮುಡಾ ಆಸ್ತಿಯನ್ನು ಕಬಳಿಸಲೆತ್ನಿಸಿದ ವ್ಯಕ್ತಿಗಳ ವಿರುದ್ಧ ಸರಿಯಾದ ಕ್ರಮ ಕೈಗೊಳ್ಳದಿರುವುದು, ನ್ಯಾಯಾಲಯಕ್ಕೂ ಅಗತ್ಯ ದಾಖಲೆ ಸಲ್ಲಿಸುವಲ್ಲಿ ಮುಡಾ ಅಧಿಕಾರಿಗಳು ಹಾಗೂ ವಕೀಲರು ವಿಫಲವಾಗಿರುವ ಬಗ್ಗೆ ಬಹುತೇಕ ಶಾಸಕರು ಅಸಮಾಧಾನ ವ್ಯಕ್ತಪಡಿಸಿದರು.

ಈ ಬಗ್ಗೆ ಪ್ರಾಧಿಕಾರದ ಸಭೆಗೂ ಮಾಹಿತಿ ನೀಡದೇ ಪ್ರಕ್ರಿಯೆಯಲ್ಲೂ ನಿರ್ಲಕ್ಷ್ಯ, ಲೋಪ ಎಸಗಲಾಗಿದೆ. ಅದಕ್ಕೆ ಅಧಿಕಾರಿಗಳೇ ಹೊಣೆ ಎಂದು ಸದಸ್ಯರು ಆರೋಪಿಸಿದರು. ಈಗ ಪ್ರಕರಣ ನ್ಯಾಯಾಲಯದಲ್ಲಿರುವುದರಿಂದ ನಿವೃತ್ತ ಹೈಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ನಡೆಸಲು ಸರ್ಕಾರಕ್ಕೆ ಮನವಿ ಮಾಡಬೇಕು. ಕಾನೂನಾತ್ಮಕವಾಗಿ ಹೋರಾಡಿ 27 ಎಕರೆ ಭೂಮಿಯನ್ನು ●6ನೇ ಪುಟಕ್ಕೆ

ಪೂರ್ಣ ಸೌಕರ್ಯದೊಂದಿಗೆ ಬಡಾವಣೆ ಹಸ್ತಾಂತರ

ಅಗತ್ಯ ಮೂಲ ಸೌಲಭ್ಯಗಳೊಂದಿಗೆ ಸಂಪೂರ್ಣ ಅಭಿವೃದ್ಧಿಗೊಂಡಿರುವ ವಸತಿ ಬಡಾವಣೆಗಳನ್ನು ಮೈಸೂರು ಮಹಾನಗರ ಪಾಲಿಕೆ ಹಾಗೂ ಸ್ಥಳೀಯ ಸಂಸ್ಥೆಗಳ ನಿರ್ವಹಣೆಗಾಗಿ ಹಸ್ತಾಂತರಿಸಲು ನಿರ್ಧರಿಸಲಾಗಿದೆ. ರಸ್ತೆ, ಕುಡಿಯುವ ನೀರು, ವಿದ್ಯುತ್ ಸಂಪರ್ಕ, ಒಳಚರಂಡಿ, ಉದ್ಯಾನವನ, ಎಸ್‌ಟಿಪಿಯಂತಹ ಸೌಲಭ್ಯಗಳೊಂದಿಗೆ ಶೇ.100ರಷ್ಟು ಅಭಿವೃದ್ಧಿಗೊಂಡಿರುವ ಮುಡಾ ಹಾಗೂ ಖಾಸಗಿ ಬಡಾವಣೆಗಳನ್ನು ಸಂಬಂಧಪಟ್ಟ ಪಾಲಿಕೆ, ಪಟ್ಟಣ ಪಂಚಾಯ್ತಿ, ನಗರಸಭೆಗಳಿಗೆ ತಡ ಮಾಡದೇ ಹಸ್ತಾಂತರಿಸುವಂತೆ ಸದಸ್ಯರು ಸಲಹೆ ನೀಡಿದರು.

ಹಲವು ವರ್ಷಗಳಿಂದ ಹಸ್ತಾಂತರಿಸದಿರುವುದರಿಂದ ಅಂತಹ ಬಡಾವಣೆಗಳ ಸ್ವಚ್ಛತೆ, ರಸ್ತೆ, ನೀರಿನ ಸಮಸ್ಯೆ ನೀಗಿಸದ ಕಾರಣ ಮನೆ ಕಟ್ಟಿ ವಾಸಿಸುತ್ತಿರುವವರಿಗೆ ತೀವ್ರ ತೊಂದರೆಯಾಗುತ್ತಿದೆ. ಕಂದಾಯ ವಸೂಲಿ ಮಾಡಿದರೂ, ನಿರ್ವಹಣೆಗೆ ಮುಡಾದಲ್ಲಿ ವ್ಯವಸ್ಥೆ ಇಲ್ಲದಿರುವುದರಿಂದ ಅಂತಹ ವಸತಿ ಬಡಾವಣೆಗಳನ್ನು ಸಕ್ಷಮ ಸ್ಥಳೀಯ ಸಂಸ್ಥೆಗೆ ವರ್ಗಾಯಿಸಿದರೆ ಅವರೇ ನಿರ್ವಹಿಸುತ್ತಾರೆ ಎಂದು ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ತಕ್ಷಣದಿಂದಲೇ ಹಸ್ತಾಂತರ ಪ್ರಕ್ರಿಯೆ ಆರಂಭಿಸಲು ಸಭೆಯು ನಿರ್ಧರಿಸಿತು.





ಮೈಸೂರಲ್ಲಿ ಜಿಲ್ಲಾ ಮಟ್ಟದ ಪ್ರಾಚ್ಯಪ್ರಜ್ಞೆ ಸ್ಪರ್ಧೆ



ಮೈಸೂರಿನ ನಿರ್ಮಲಾ ಪ್ರೌಢಶಾಲೆಯಲ್ಲಿ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಪ್ರಾಚ್ಯಪ್ರಜ್ಞೆ ಸ್ಪರ್ಧೆ ಕಾರ್ಯಕ್ರಮವನ್ನು ಪಾರಂಪರಿಕ ಆಯುಕ್ತ ಎ.ದೇವರಾಜು ಉದ್ಘಾಟಿಸಿದರು.

ಮೈಸೂರು, ಜ. 16(ಆರ್‌ಕೆ)– ಮೈಸೂರಿನ ಗೋಕುಲಂ ಬಡಾವಣೆಯ ನಿರ್ಮಲಾ ಪ್ರೌಢಶಾಲೆಯಲ್ಲಿ ಇಂದು ಜಿಲ್ಲಾ ಮಟ್ಟದ ಪ್ರಾಚ್ಯಪ್ರಜ್ಞೆ ಸ್ಪರ್ಧೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಶ್ರಯದಲ್ಲಿ ಆಯೋಜಿಸಿದ್ದ ಸ್ಪರ್ಧೆಯನ್ನು ಪಾರಂಪರಿಕ ಆಯುಕ್ತ ಎ.ದೇವರಾಜು ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ದೇಶದ ಪರಂಪರೆ ಉಳಿಯಬೇಕಾದರೆ ನಮ್ಮ ಪ್ರಾಚೀನ ಸಂಸ್ಕೃತಿಯನ್ನು ರಕ್ಷಿಸಬೇಕು ಎಂದು ತಿಳಿಸಿದರು.

ಹಳೆಯ ಪಾರಂಪರಿಕ ಕಟ್ಟಡ ಸ್ಮಾರಕಗಳು, ವೀರಗಲ್ಲುಗಳು, ಪುರಾತನ ಐತಿಹ್ಯಗಳನ್ನು ಸಂರಕ್ಷಿಸಿದರೆ, ನಮ್ಮ ಮುಂದಿನ ಪೀಳಿಗೆಗೆ ಇತಿಹಾಸದ ಸ್ಪಷ್ಟ ಮಾಹಿತಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ಪ್ರಾಚ್ಯ ಪ್ರಜ್ಞೆ ಮೂಡಿಸುವ ಅಗತ್ಯವಿದೆ ಎಂದರು.

ಸಾರ್ವಜನಿಕ ಶಿಕ್ಷಣ ಇಲಾಖೆ ಶಿಕ್ಷಣಾಧಿಕಾರಿಗಳಾದ ಕಮಲಮ್ಮ, ನಿರೂಪ ವೆಸ್ಲಿ, ವಿಷಯ ಪರಿವೀಕ್ಷಕರಾದ ದೇವರಾಜ್, ಕೆಂಪರಾಜ್, ಪುರಾತತ್ವ ಸಂಗ್ರಹಾಲಯಗಳು–ಪರಂಪರೆ ಇಲಾಖೆ ಉಪ ನಿರ್ದೇಶಕಿ ಮಂಜುಳಾ, ನಿರ್ಮಲಾ ಶಿಕ್ಷಣ ಸಂಸ್ಥೆ ಮುಖ್ಯಶಿಕ್ಷಕರು ಕಾರ್ಯಕ್ರಮದಲ್ಲಿದ್ದರು.



ಹುಟ್ಟುಹಬ್ಬ ಆಚರಿಸಿಕೊಂಡ ಕಾಂಗ್ರೆಸ್ ಮುಖಂಡ ಹಾಗೂ ಉದ್ಯಮಿ ಹಳೇ ಕಾಮನಕೊಪ್ಪಲು ಕೆ.ಎಸ್.ಕರೀಗೌಡರನ್ನು ಅವರ ಅಭಿಮಾನಿಗಳು, ಮುಖಂಡರು ಅಭಿನಂದಿಸಿದರು. ಈ ವೇಳೆ ಮಂಜು, ರವಿ, ಗಾಂಧಿಕುಮಾರ್, ಜಗದೀಶ್, ಸೆಂಟ್ರಿಂಗ್ ರವಿಕುಮಾರ್, ಸತೀಶ್, ಜಯರಾಂ, ಪ್ರಕಾಶ್, ನಾಗರಾಜ್, ರಮೇಶ್ ಇತರರಿದ್ದರು.



ಶ್ರೀ ಸಾಯಿರಾಮ್ ಲೈಟಿಂಗ್ಸ್ & ಸೌಂಡ್ಸ್‌ನ ಕ್ಯಾಲೆಂಡರ್ ಅನ್ನು ಮೈಸೂರು ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚೇತನ್‌ಕುಮಾರ್ ವಿಷಕಂಠೇಗೌಡ ಬಿಡುಗಡೆಗೊಳಿಸಿದರು. ಈ ವೇಳೆ ರಾಮ್‌ಪ್ರಸಾದ್, ಕೇಬಲ್ ಪ್ರಕಾಶ್, ಸುರೇಶ್, ಸುನಿಲ್, ಪುನೀತ್ ಇನ್ನಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಆಹ್ವಾನ

ಮೈಸೂರು.ಜ.16– 2023–24ನೇ ಸಾಲಿನ ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ವಿದ್ಯಾರ್ಥಿವೇತನಕ್ಕಾಗಿ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ಅರ್ಜಿ ಆಹ್ವಾನಿಸಲಾಗಿದ್ದು, www.ssp.postmatric.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಫೆ.14 ಕೊನೆಯ ದಿನಾಂಕವಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಪಡುವಾರಹಳ್ಳಿಯಲ್ಲಿನ ಡಾ॥ ಬಾಬು ಜಗಜೀವನರಾಂ ಭವನಕಟ್ಟಡ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಗ್ರೇಡ್–1 ಕಚೇರಿ ದೂ.ಸಂಖ್ಯೆ–0821–2520910 ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಜುಲೂಸ್ ಚಿಸ್ತಿಯಾ ಮೆರವಣಿಗೆ

ಮೈಸೂರು,ಜ.16–ಮೈಸೂರಿನ ಲಷ್ಕರ್ ಮೊಹಲ್ಲಾದ ಸರ್ಕಾರ್ ಮೆಹಬೂಬ್ ಸುಭಾನಿ ಫೌಂಡೇಷನ್, ಸತ್ತಾರ್ ಸೇಠ್ ಬ್ಲಾಕ್ ವತಿಯಿಂದ ರಾಜಸ್ಥಾನದ ಹಝರತ್ ಕ್ವಾಜಾ ಗರೀಬ್–ಉನ್–ನವಾಝ್, ಅಜ್ಮೀರ್ ಷರೀಫ್ ಅವರ 812ನೇ ವಾರ್ಷಿಕ ಗಂಧದ ಉರುಸ್ ಷರೀಫ್ ಅಂಗವಾಗಿ ಜುಲೂಸ್ ಚಿಸ್ತಿಯಾ ಮೆರವಣಿಗೆಯನ್ನು ಜ.18ರಂದು ಮ. 2.45ಕ್ಕೆ ಹಝರತ್ ಮೌಲಾನಾ ಮೊಹಮ್ಮದ್ ಉಸ್ಮಾನ್ ಷರೀಫ್ ಸಾಹೇಬ್, ಸರ್‌ಖಾಜಿ ಉಪಸ್ಥಿತಿಯಲ್ಲಿ ಅಶೋಕ ರಸ್ತೆಯಲ್ಲಿರುವ ಮಸೀದಿ ಆಝಮ್ ಮರ್ಕಾಜ್ ಅಹಲೆ ಸುನ್ನತ್–ವಲ್–ಜಮಾತ್ ಹತ್ತಿರ, ಮೀಲಾದ್ ಪಾರ್ಕ್ ಸರ್ಕಲ್‌ನಲ್ಲಿ ನಡೆಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ಮೊ.ಸಂ. 9901270392 ಅನ್ನು ಸಂಪರ್ಕಿಸಬಹುದು.

ದಂಪತಿಯ ಕಾಡಿದ ಅನಾರೋಗ್ಯ ನೇಣು ಬಿಗಿದುಕೊಂಡು ಮಹಿಳೆ ಆತ್ಮಹತ್ಯೆ

ಮೈಸೂರು, ಜ. 16(ಆರ್‌ಕೆ)– ಜೀವನದಲ್ಲಿ ಜಿಗುಪ್ಸೆಗೊಂಡು ಮಹಿಳೆಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಮೈಸೂರು ತಾಲೂಕು ಇಲವಾಲದಲ್ಲಿ ಸೋಮವಾರ ನಡೆದಿದೆ.

ಚಂದು ಅವರ ಪತ್ನಿ ಶೃತಿ(28) ಆತ್ಮಹತ್ಯೆ ಮಾಡಿಕೊಂಡವರು. ಮೂಲತಃ ಹಾಸನದವರಾದ ಶೃತಿಯನ್ನು 8 ವರ್ಷಗಳ ಹಿಂದೆ ಇಲವಾಲದ ಚಂದು ಜೊತೆ ಮದುವೆ ಮಾಡಲಾಗಿತ್ತು. ಸೋಲಾರ್ ಪರಿಕರಗಳ ಮೆಕ್ಯಾನಿಕ್ ಆಗಿರುವ ಚಂದು ಪಾರ್ಶ್ವವಾಯುವಿನಿಂದ ಬಳಲುತ್ತಿದ್ದರಲ್ಲದೇ, ಪತ್ನಿ ಶೃತಿ ಸಹ ಅನಾರೋಗ್ಯಕ್ಕೀಡಾಗಿದ್ದರು. ಅದರಿಂದ ಬೇಸರಗೊಂಡ ಅವರು, ಸೋಮವಾರ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ತೆರಳಿ ಮಹಜರು ನಡೆಸಿದ ಇಲವಾಲ ಠಾಣೆ ಪೊಲೀಸರು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬಸ್ ಡಿಕ್ಕಿ: ಅಪರಿಚಿತ ಸಾವು



ಮೈಸೂರು, ಜ.16–ಬಸ್ಸು ಡಿಕ್ಕಿ ಹೊಡೆದು ಅಪರಿಚಿತ ವ್ಯಕ್ತಿಯೊಬ್ಬರು ಸಾವನ್ನಪ್ಪಿರುವ ಘಟನೆ ಕೆ.ಆರ್. ಸರ್ಕಲ್‌ನಲ್ಲಿ ಸಂಭವಿಸಿದೆ. ಸುಮಾರು 35 ವರ್ಷದ ವ್ಯಕ್ತಿ ನಡೆದುಕೊಂಡು ಹೋಗುತ್ತಿದ್ದಾಗ, ಕೆ.ಆರ್. ಸರ್ಕಲ್‌ನಲ್ಲಿ ವೇಗವಾಗಿ ಬಂದ ಬಸ್ಸು (ಕೆಎ 55 1639) ಡಿಕ್ಕಿ ಹೊಡೆದ ಪರಿಣಾಮ ತೀವ್ರವಾಗಿ ಗಾಯಗೊಂಡರು. ಅವರನ್ನು ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ವಾರಸುದಾರರು 948080 2248, 9535484025, 0821–2418326, 24118339, 2418340 ಮೂಲಕ ಸಂಪರ್ಕಿಸುವಂತೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿರುವ ದೇವರಾಜ ಸಂಚಾರ ಠಾಣೆಯ ಇನ್ಸ್‌ಪೆಕ್ಟರ್ ಶ್ರೀಮತಿ ಮಮತಾ ವಿ.ಡಿ.ಮನವಿ ಮಾಡಿದ್ದಾರೆ.

ನಿಧನ

ಪುಟ್ಟರಾಜಪ್ಪ



ಮೈಸೂರು,ಜ.16–ಮಳವಳ್ಳಿಯ ನಿವೃತ್ತ ರೇಷ್ಮ ನಿರೀಕ್ಷಕ ಪುಟ್ಟರಾಜಪ್ಪ (84) ಜ.14 (ಭಾನುವಾರ) ವಯೋಸಹಜ ಕಾಯಿಲೆಯಿಂದ ಮಳವಳ್ಳಿಯ ತಮ್ಮ ಸ್ವಗೃಹದಲ್ಲಿ ನಿಧನರಾದರು. ಮೃತರು ಪತ್ನಿ ಸತ್ಯಪ್ರೇಮ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಮಳವಳ್ಳಿ ಪಟ್ಟಣದ ಸಾರ್ವಜನಿಕ ಚಿತಾಗಾರರಲ್ಲಿ ಭಾನುವಾರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬುಡಕಟ್ಟು ಜನರ ಮುಖ್ಯವಾಹಿನಿಗೆ ತರಲು ಪ್ರಧಾನಿ ಪಣ ತೊಟ್ಟಿದ್ದಾರೆ

ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಅಭಿಮತ; ತಿಪಟೂರಿನ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಪ್ರಧಾನಮಂತ್ರಿ ಜನ್ ಜಾತೀ ಆದಿವಾಸಿ ನ್ಯಾಯ ಮಹಾ ಅಭಿಯಾನಕ್ಕೆ ಚಾಲನೆ

ಮೈಸೂರು,ಜ.16(ಎಂಟಿವೈ)– ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಬುಡಕಟ್ಟು ಜನಾಂಗವನ್ನು ಸಮಾಜದ ಮುಖ್ಯವಾಹಿನಿಗೆ ತರಲು ಪಣತೊಟ್ಟಿದೆ ಎಂದು ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ಎ. ನಾರಾಯಣಸ್ವಾಮಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ನಡೆದ ಪ್ರಧಾನಮಂತ್ರಿ ಜನ್ ಜಾತೀ ಆದಿವಾಸಿ ನ್ಯಾಯ ಮಹಾ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ದೇಶದಲ್ಲಿ 39 ಲಕ್ಷ ಬುಡಕಟ್ಟು ಜನರಿದ್ದು, ಅವರನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಲಾಗಿದೆ. ಅರಣ್ಯ ಇಲಾಖೆಯ ಕಾನೂನುಗಳನ್ನು ಬದಿಗೊತ್ತಿ ಬುಡಕಟ್ಟು ಸಮುದಾಯಕ್ಕೆ ನಾಗರಿಕತೆಯನ್ನು ಪರಿಚಯ ಮಾಡಿಕೊಡಲು ಪ್ರಧಾನಿ ಮೋದಿಯವರು ಉದ್ದೇಶಿಸಿದ್ದಾರೆ. ಹಾಡಿಗಳನ್ನು ಗುರುತಿಸಿ, ಅಲ್ಲಿನ ಜನರಿಗೆ ಪಡಿತರ ಚೀಟಿ, ಆಧಾರ್ ಕಾರ್ಡ್, ಹೆಲ್ತ್ ಕಾರ್ಡ್ ಸೇರಿದಂತೆ ಅಗತ್ಯ ಸೌಲಭ್ಯ ಒದಗಿಸಲು ಮುಂದಾಗಿದ್ದಾರೆ. ಅಲ್ಲದೆ, ಬುಡಕಟ್ಟು ನಿವಾಸಿಗಳಿಗೆ 4.50 ಲಕ್ಷ ರೂ. ವೆಚ್ಚದ ಮನೆ, ರಸ್ತೆ, ಕುಡಿಯುವ ನೀರು, ಆಸ್ಪತ್ರೆಯಂತಹ ಮೂಲ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.



ಮೈಸೂರಿನ ಬೋಗಾದಿಯಲ್ಲಿರುವ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ನಡೆದ ಪ್ರಧಾನಮಂತ್ರಿ ಜನ್ ಜಾತೀ ಆದಿವಾಸಿ ನ್ಯಾಯ ಮಹಾ ಅಭಿಯಾನ ಕಾರ್ಯಕ್ರಮವನ್ನು ಕೇಂದ್ರದ ಸಾಮಾಜಿಕ ನ್ಯಾಯ–ಸಬಲೀಕರಣ ರಾಜ್ಯ ಸಚಿವ ನಾರಾಯಣಸ್ವಾಮಿ ಉದ್ಘಾಟಿಸಿದರು.

> “ದೇಶದಲ್ಲಿ 401 ಏಕಲವ್ಯ ವಸತಿ ಶಾಲೆಗಳನ್ನು ನಿರ್ಮಿಸಿ, 38 ಸಾವಿರ ಶಿಕ್ಷಕರನ್ನು ನೇಮಕ ಮಾಡಲು ಉದ್ದೇಶಿಸಲಾಗಿದೆ. ಇದರಿಂದ 3 ಲಕ್ಷ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ. ಕಾಡಂಚಿನ ಜನರಿಗೂ ಮೊಬೈಲ್, ಇಂಟರ್‌ನೆಟ್ ಸೌಲಭ್ಯ ಸಿಗಬೇಕು, ಜೇನು ಕುರುಬ ಮತ್ತು ಕೊರಗ ಜನಾಂಗದ ಅಭಿವೃದ್ಧಿಗೆ ಯುದ್ಧೋಪಾದಿಯಲ್ಲಿ ಕೆಲಸ ಮಾಡಬೇಕಾಗಿದೆ. ಸರ್ಕಾರದ ಸೌಲಭ್ಯಗಳ ಬಗ್ಗೆ ಜನರು ಅಧಿಕಾರಿಗಳಿಗೆ ಪ್ರಶ್ನೆ ಮಾಡಬೇಕು. ಆ ಮೂಲಕ ನಿಮ್ಮ ಹಕ್ಕುಗಳನ್ನು ನೀವು ಪಡೆಯಬೇಕು.
> –ನಾರಾಯಣಸ್ವಾಮಿ

ಇದೇ ವೇಳೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಬುಡಕಟ್ಟು ಜನರ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಹಲವು ಕಾರ್ಯಕ್ರಮ ಹಮ್ಮಿಕೊಂಡಿದೆ. ಆ ಯೋಜನೆಗಳ ಅರಿವು ಬುಡಕಟ್ಟು ಸಮುದಾಯದ ಜನರಿಗೆ ಇರಬೇಕು. ತಮಗೆ ಸಿಗುವ ಸೌಲಭ್ಯಗಳ ಬಗ್ಗೆ ಓದಿಕೊಂಡು ತಿಳಿದುಕೊಳ್ಳಬೇಕು. ತಮ್ಮ ಹಕ್ಕುಗಳನ್ನು ಕೇಳಬೇಕು. ಗ್ರಾ.ಪಂ.ನಲ್ಲಿ ಮನೆ ಕಟ್ಟಲು 1.5 ಲಕ್ಷ ರೂ ನೆರವು ಸಿಗುತ್ತದೆ. ಆದರೆ ಕೇಂದ್ರ ಸರ್ಕಾರ ಬುಡಕಟ್ಟು ಜನರಿಗೆ 4.5 ಲಕ್ಷ ರೂ. ನೀಡುತ್ತಿದೆ. ಇದರ ಸದುಪಯೋಗವನ್ನು ಬುಡಕಟ್ಟು ಜನರು ಉಪಯೋಗಿಸಿಕೊಂಡು ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬುಡಕಟ್ಟು ಜನರಿಗೆ ವಿವಿಧ ಸವಲತ್ತುಗಳನ್ನು ವಿತರಿಸಲಾಯಿತು. ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ. ಎಲ್. ಶ್ರೀನಿವಾಸ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಡಾ. ರಾಜ್‌ಕುಮಾರ್, ಉಪನಿರ್ದೇಶಕ ಬಿ.ಎಸ್.ಪ್ರಭಾ ಅರಸ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಎನ್. ಮುನಿರಾಜು, ಡಿಹೆಚ್‌ಓ ಡಾ.ಕುಮಾರಸ್ವಾಮಿ, ಸಂಶೋಧನಾಧಿಕಾರಿ ಹೆಚ್.ಎಸ್.ಬಿಂದ್ಯಾ, ಕೇಂದ್ರ ಸರ್ಕಾರದ ನೋಡಲ್ ಅಧಿಕಾರಿ ದಿಲೀಪ್‌ಸಾಹೋ, ಟ್ರೈಫೆಡ್‌ನ ಪ್ರಾದೇಶಿಕ ವ್ಯವಸ್ಥಾಪಕ ಸುಬ್ಜೀತ್, ಡಾ. ಮೋಹನ್, ತಾಲೂಕು ಕಲ್ಯಾಣಾಧಿಕಾರಿ ಮಹೇಶ್, ಬಸವರಾಜು, ನಾರಾಯಣಸ್ವಾಮಿ, ಅರುಣ್‌ಪ್ರಭು, ಚಂದ್ರಶೇಖರ್ ಇದ್ದರು.

ಬೆಂಗಳೂರಿನ ತಮಿಳು ಮತ ಬ್ಯಾಂಕ್ ಮೇಲೆ ವಿಜಯೇಂದ್ರ ಕಣ್ಣು; ತಮಿಳು ಕವಿ ತಿರುವಳ್ಳುವರ್ ಪ್ರತಿಮೆಗೆ ಮಾಲಾರ್ಪಣೆ

ಬೆಂಗಳೂರು, ಜ.16– ಬೆಂಗಳೂರಿನಲ್ಲಿರುವ ತಮಿಳು ಕವಿ ತಿರುವಳ್ಳುವರ್ ಪ್ರತಿಮೆಯು ತಮಿಳುನಾಡು ಮತ್ತು ಕರ್ನಾಟಕದ ಜನರ ನಡುವಿನ ಸಹೋದರತ್ವವನ್ನು ಪ್ರತಿನಿಧಿಸುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಮಂಗಳವಾರ ಹೇಳಿದ್ದಾರೆ.

ಬೆಂಗಳೂರಿನಲ್ಲಿರುವ ತಿರುವಳ್ಳುವರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರ ಮಾತನಾಡಿದ ಅವರು, ಬೆಂಗಳೂರಿನ ತಿರುವಳ್ಳುವರ್ ಮತ್ತು ಚೆನ್ನೈನಲ್ಲಿರುವ ಕನ್ನಡದ ದಿಗ್ಗಜ ಕವಿ ಸರ್ವಜ್ಞರ ಪ್ರತಿಮೆಗಳು ಕರ್ನಾಟಕ ಮತ್ತು ತಮಿಳುನಾಡು ನಡುವಿನ ಸಹೋದರತ್ವದ ಸಂಕೇತವಾಗಿವೆ ಎಂದರು.

ಹೋರಾಟದ ನಡುವೆಯೂ ಬೆಂಗಳೂರಿನಲ್ಲಿ ತಿರುವಳ್ಳುವರ್ ಮತ್ತು ತಮಿಳುನಾಡಿನಲ್ಲಿ ಸರ್ವಜ್ಞ ಪ್ರತಿಮೆಗಳನ್ನು ಉದ್ಘಾಟಿಸುವ ಪ್ರಸ್ತಾವನೆಗಳು ದಶಕಗಳಿಂದ ಬಾಕಿ ಉಳಿದಿದ್ದವು. ಆದರೆ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಇದನ್ನು ಸಾಕಾರಗೊಳಿಸಿದ್ದಾರೆ ಎಂದು ವಿಜಯೇಂದ್ರ ಹೇಳಿದರು.



ಬೆಂಗಳೂರಿನಲ್ಲಿರುವ ತಿರುವಳ್ಳುವರ್ ಪ್ರತಿಮೆಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಂಗಳವಾರ ಮಾಲಾರ್ಪಣೆ ಮಾಡಿದರು.

ಈ ನಿಟ್ಟಿನಲ್ಲಿ ನಡೆದ ಹೋರಾಟಗಳನ್ನು ಪರಿಗಣಿಸಿ 2009ರಲ್ಲಿ ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಕರ್ನಾಟಕ ಮತ್ತು ತಮಿಳುನಾಡು ನಡುವಿನ ಸೌಹಾರ್ದತೆಯ ಬಾಂಧವ್ಯವನ್ನು ಗಟ್ಟಿಗೊಳಿಸಲು ಇಬ್ಬರು ದಾರ್ಶನಿಕರ ಪ್ರತಿಮೆಗಳನ್ನು ಅನಾವರಣಗೊಳಿಸಿದರು ಎಂದರು.

ಬೆಂಗಳೂರಿನಲ್ಲಿ 18 ವರ್ಷಗಳಿಂದ ತಿರುವಳ್ಳುವರ್ ಪ್ರತಿಮೆಯನ್ನು ಸುತ್ತಿಡಲಾಗಿತ್ತು. ಮಾಜಿ ಸಿಎಂ ಯಡಿಯೂರಪ್ಪನವರ ಪ್ರಯತ್ನದಿಂದ ತಿರುವಳ್ಳುವರ್ ಪ್ರತಿಮೆಯನ್ನು ಇಲ್ಲಿ ಅನಾವರಣಗೊಳಿಸಲಾಯಿತು ಮತ್ತು ಇನ್ನೊಂದೆಡೆ ಚೆನ್ನೈನಲ್ಲಿ ಸರ್ವಜ್ಞನ ಪ್ರತಿಮೆಯನ್ನು ಸಹ ಉದ್ಘಾಟಿಸಲಾಯಿತು ಎಂದರು.

ಬೆಂಗಳೂರು ನಗರದಲ್ಲಿ ತಮಿಳು ಜನರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಲೋಕಸಭೆ ಚುನಾವಣೆಗೆ ಮುನ್ನ ಇಂತಹ ಹೇಳಿಕೆಗಳು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ. ವಿಜಯೇಂದ್ರ ಅವರ ಈ ಹೇಳಿಕೆಯು ರಾಜ್ಯದಲ್ಲಿ ತಮಿಳು ಮತ ಬ್ಯಾಂಕ್ ಅನ್ನು ಗುರಿಯಾಗಿಸಿಕೊಳ್ಳುವ ಕ್ರಮವೆಂದು ಪರಿಗಣಿಸಲಾಗಿದೆ.

ಜನವರಿ 27ರಂದು ‘ಚಿತ್ರಕಲಾ ಸ್ಪರ್ಧೆ’



ಫೈಲ್ ಚಿತ್ರ

ಮೈಸೂರು, ಜ.16– ಮೈಸೂರು ಫೆಸ್ಟ್ ಕಾರ್ಯಕ್ರಮದ ಪ್ರಯುಕ್ತ ಪ್ರವಾಸೋದ್ಯಮ ಇಲಾಖೆ ವತಿಯಿಂದ ‘ನಮ್ಮ ಸಂಸ್ಕೃತಿ, ನಿಮ್ಮ ತಾಣ’ ಮೈಸೂರು (Our Heritage, Your Destination-Mysore District) ಪ್ರತಿಬಿಂಬಿಸುವ ‘ಚಿತ್ರಕಲಾ ಸ್ಪರ್ಧೆ’ ಕಾರ್ಯಕ್ರಮವನ್ನು ಜನವರಿ 27ರಂದು ಮೈಸೂರು ವಿಶ್ವವಿದ್ಯಾನಿಲಯದ ಗಣಿತ ವಿಭಾಗದ ಮುಂಭಾಗ ನಡೆಸಲಾಗುತ್ತಿದೆ. ಜನವರಿ 16ರಿಂದ ಅರ್ಜಿಗಳನ್ನು https://forms.gle/BbWdJUzv1uFAeuXb8 ಲಿಂಕ್ ಮೂಲಕ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಜ.20 ಕೊನೆಯ ದಿನ. ಸ್ಪರ್ಧೆಗೆ 8ರಿಂದ 12ನೇ ತರಗತಿಯ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ವಿದ್ಯಾರ್ಥಿಗಳು ತಮ್ಮ ಶಾಲೆಯ ಐ.ಡಿ. ಕಾರ್ಡ್ ತರುವುದು ಕಡ್ಡಾಯ. ಸ್ಪರ್ಧೆಯ ಅವಧಿ 90 ನಿಮಿಷಗಳು ಆಗಿದ್ದು, (ಸಮಯ ಬೆಳಗ್ಗೆ 10ರಿಂದ 11.30) ಪೇಂಟಿಂಗ್ ಹೊಸದಾಗಿರಬೇಕು. ಈ ಮುಂಚೆ ಎಲ್ಲಿಯೂ ಪ್ರದರ್ಶನವಾಗಿರಬಾರದು. ಸ್ಪರ್ಧೆಯಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ಮೂರು ವಿದ್ಯಾರ್ಥಿಗಳಿಗೆ ಬೈಸಿಕಲ್, ಟ್ರೋಫಿ ಮತ್ತು ಪ್ರಮಾಣ ಪತ್ರವನ್ನು ನೀಡಲಾಗುತ್ತದೆ. ಭಾಗವಹಿಸಿದ ಎಲ್ಲರಿಗೂ ಪ್ರಮಾಣ ಪತ್ರ ನೀಡಲಾಗುವುದು. ಚಿತ್ರಕಲೆ ಸ್ಪರ್ಧೆಗೆ ಆನ್‌ಲೈನ್ ನೋಂದಣಿ ಕಡ್ಡಾಯವಾಗಿರುತ್ತದೆ ಹಾಗೂ ಮೊದಲು ನೋಂದಾಯಿಸಿದ 150ರಿಂದ 200 ವರೆಗಿನ ವಿದ್ಯಾರ್ಥಿಗಳಿಗೆ ಮಾತ್ರ ಚಿತ್ರಕಲೆ ಸ್ಪರ್ಧೆಗೆ ಸ್ಥಳಾವಕಾಶ ಕಲ್ಪಿಸಲಾಗುವುದು. ಜ.23ರಂದು ಅಂತಿಮ ಸ್ಪರ್ಧಿಗಳ ಪಟ್ಟಿಯನ್ನು ಪ್ರವಾಸೋದ್ಯಮ ಇಲಾಖೆ ಫೇಸ್‌ಬುಕ್ ಮತ್ತು ಇನ್ಸ್ಟಾಗ್ರಾಮ್ ಪೇಜ್‌ನ visit_mysuruನಲ್ಲಿ ಪ್ರಕಟಿಸಲಾಗುವುದು. ಸ್ಪಾಟ್ ನೋಂದಣಿಗೆ (Spot Registration) ಅವಕಾಶವಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ 7411564510 ಸಂಪರ್ಕಿಸಿ ಹಾಗೂ ಪ್ರವಾಸೋದ್ಯಮ ಇಲಾಖೆ ಫೇಸ್‌ಬುಕ್ ಮತ್ತು ಇನ್ಸ್ಟಾಗ್ರಾಂ ಪೇಜ್ visit_mysuru ಅನ್ನು ಫಾಲೋಮಾಡಿ ಎಂದು ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬ್ಯಾಟರಿಚಾಲಿತ ವ್ಹೀಲ್‌ಚೇರ್ ಪಡೆಯಲು ಅರ್ಜಿ ಆಹ್ವಾನ

ಮೈಸೂರು, ಜ.16– 2023–24ನೇ ಸಾಲಿಗೆ ಬ್ಯಾಟರಿ ಚಾಲಿತ ವ್ಹೀಲ್‌ಚೇರ್ (ಗಾಲಿಕುರ್ಚಿ) ಯೋಜನೆಯಡಿ ಶೇ.75 ಮತ್ತು ಅದಕ್ಕಿಂತ ಹೆಚ್ಚಿನ ದೈಹಿಕ ವಿಕಲಚೇತನರಾಗಿದ್ದು, ಯಂತ್ರಚಾಲಿತ ದ್ವಿಚಕ್ರ ವಾಹನವನ್ನು ಚಾಲನೆ ಮಾಡಲು ಸಾಮರ್ಥ್ಯ ಹೊಂದಿರದ ಹಾಗೂ ಕನಿಷ್ಠ ಒಂದು ಕೈ, ಒಂದು ಕಣ್ಣು ಸ್ವಾಧೀನದಲ್ಲಿದ್ದು, ಬ್ಯಾಟರಿಚಾಲಿತ ವ್ಹೀಲ್‌ಚೇರ್ ಚಲಾಯಿಸಲು ಇತರೆ ಎಲ್ಲಾ ರೀತಿಯಲ್ಲಿ ಸದೃಢರಾಗಿರುವ ದೈಹಿಕ ವಿಕಲಚೇತನರಿಂದ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಮೈಸೂರು ಜಿಲ್ಲೆಯಲ್ಲಿನ ಕನಿಷ್ಠ 18 ವರ್ಷ ಗರಿಷ್ಠ 60 ವರ್ಷಗಳ ವಯೋಮಿತಿಯಲ್ಲಿರುವ ಅರ್ಹ ಹಾಗೂ ಬ್ಯಾಟರಿ ಚಾಲಿತ ವ್ಹೀಲ್‌ಚೇರ್ ಅಗತ್ಯವಿರುವ ದೈಹಿಕ ವಿಕಲಚೇತನರು ತಮ್ಮ ತಾಲೂಕಿನ ತಾಲೂಕು ಪಂಚಾಯಿತಿಯಲ್ಲಿರುವ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರನ್ನು ಸಂಪರ್ಕಿಸಿ ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ, ಅಗತ್ಯ ದಾಖಲಾತಿಗಳೊಂದಿಗೆ ಫೆಬ್ರವರಿ 9ರೊಳಗಾಗಿ ದ್ವಿಪ್ರತಿಯಲ್ಲಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿ ಹಾಗೂ ಅರ್ಜಿ ನಮೂನೆಗಾಗಿ ತಾಲೂಕಿನ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತ (ಎಂ.ಆರ್.ಡಬ್ಲ್ಯೂ) ರನ್ನು ಅಥವಾ ಕಚೇರಿ ದೂ.ಸಂ.0821–2490333ಗೆ ಸಂಪರ್ಕಿಸಬಹುದಾಗಿದೆ ಎಂದು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಅಂಗವಿಕಲರ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





ತಮಿಳುನಾಡಿಗೆ ಬಿಡುತ್ತಿರುವ ಕಾವೇರಿ ನೀರನ್ನು ನಿಲ್ಲಿಸುವಂತೆ ಆಗ್ರಹಿಸಿ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ನಡೆಸುತ್ತಿರುವ ನಿರಂತರ ಧರಣಿ ಸತ್ಯಾಗ್ರಹ 72ನೇ ದಿನಕ್ಕೆ ಕಾಲಿಟ್ಟಿದೆ. ಈ ವೇಳೆ ಬಿಜೆಪಿ ಮುಖಂಡ ಹಾಗೂ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್, ಸಮಿತಿ ಉಪಾಧ್ಯಕ್ಷ ಎಂ.ಜೆ.ಸುರೇಶ್‌ಗೌಡ, ಹೊನ್ನೇಗೌಡ, ತೇಜೇಶ್ ಲೋಕೇಶ್‌ಗೌಡ, ವರಕೋಡು ಕೃಷ್ಣೇಗೌಡ, ಶಿವಕುಮಾರ್, ಪುಷ್ಪಾವತಿ, ಕೆ.ಮಂಜುಳಾ, ಶುಭಶ್ರೀ, ಕೃಷ್ಣಮೂರ್ತಿ, ಶಿವನಾಯಕ್, ಸಾಕಣ್ಣ, ಪುಷ್ಪಗೌಡ, ಹನುಮಂತೇಗೌಡ, ರಘು ಆಚಾರ್, ಮಂಜುಳಾ, ಕೃಷ್ಣ, ಭಾಗ್ಯಮ್ಮ, ಮಂಗಳಗೌರಿ, ಮಹೇಂದ್ರ, ಸುಧಾಕರ್, ಶಿವಲಿಂಗಯ್ಯ, ವಿದ್ಯಾರ್ಥಿ ಕ್ರಿಯಾ ಸಮಿತಿಯ ಸಂಜಯ್, ವಿಷ್ಣು, ರಾಜು, ಜೀವನ್, ಹರೀಶ್, ಅಭಿ, ಪ್ರಜ್ವಲ್ ಇನ್ನಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.1.2024 ಬುಧವಾರ, ಮಳೆ ನಕ್ಷತ್ರ: ಉತ್ತರಾಷಾಢ 11.1.2024 ರಿಂದ 23.01.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಉಭಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ನೆಹರೂ ಯುವ ಕೇಂದ್ರ, ಮೈಸೂರು ನಗರ ಸಂಚಾರ ಪೊಲೀಸ್, ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್:** ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ, ಉದ್ಘಾಟನೆ: ಸಹಾಯಕ ಪೊಲೀಸ್ ಆಯುಕ್ತ ಹೆಚ್.ಪರಶುರಾಮಪ್ಪ, ಅಧ್ಯಕ್ಷತೆ : ಸಿಪಿಸಿ ಪಾಲಿಟೆಕ್ನಿಕ್ ಪ್ರಾಂಶುಪಾಲ ಎಂ.ಪ್ರಕಾಶ್, ಸ್ಥಳ: ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್, ಬೆಳಗ್ಗೆ 10ಕ್ಕೆ.

■ **ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ, ಕೃಷಿ ಜ್ಞಾನ ವಿಜ್ಞಾನ ವೇದಿಕೆ :** ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕೃತಿ ‘ಕೃಷಿಲೋಕದೊಳಗೆ...’ ಪುಸ್ತಕ ಕುರಿತು ವಿಚಾರ ಸಂಕಿರಣ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳೊಡನೆ ಸಂವಾದ, ಉದ್ಘಾಟನೆ: ಕಾರ್ಯನಿರ್ವಾಹಕ ಸಂಪಾದಕ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ : ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ಎಂ.ಎಸ್. ಸಪ್ನ, ಮುಖ್ಯ ಅತಿಥಿಗಳು: ಭಾರತೀಯ ಕೃಷಿ ಅನುಸಂದಾನ ಪರಿಷತ್ ನಿವೃತ್ತ ಪ್ರಧಾನ ವಿಜ್ಞಾನಿ ಡಾ. ಎಂ.ಎನ್. ವೇಣುಗೋಪಾಲ್, ವಿಚಾರ ಮಂಡನೆ : ಹಿರಿಯ ಸಾಹಿತಿ ಡಾ. ಕೃಷ್ಣಮೂರ್ತಿ ಚಮರಂ, ಲೇಖಕ ಡಾ. ಅಮ್ಮಸಂದ್ರ ಸುರೇಶ್, ಕೃತಿ ಲೇಖಕ ಡಾ. ವಸಂತಕುಮಾರ್ ತಿಮಕಾಪುರ, ಸ್ಥಳ: ಪತ್ರಿಕೋದ್ಯಮ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** 74ನೇ ಸಂವಿಧಾನ ದಿನಾಚರಣೆಯ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಅತಿಥಿ ಉಪನ್ಯಾಸಕರಾದ ಡಾ. ಎನ್. ನಿಂಗಯ್ಯ ಅವರಿಂದ ಭಾರತದ ಸಂವಿಧಾನ ಮತ್ತು ಆರ್ಥಿಕತೆ ಕುರಿತು ಉಪನ್ಯಾಸ, ಅಧ್ಯಕ್ಷತೆ : ಟಿ. ನರಸೀಪುರ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ನಿಲಯ ಪಾಲಕ ಮಹೇಶ್, ಸ್ಥಳ:ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಟಿ. ನರಸೀಪುರ, ಸಂಜೆ 5.30ಕ್ಕೆ.

■ **ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ:** ಅಯೋಧ್ಯೆಯಲ್ಲಿ ಶ್ರೀರಾಮಮಂದಿರ ಉದ್ಘಾಟನಾ ಪರ್ವಕಾಲದ ನಿಮಿತ್ತ ಸಮಗ್ರ ರಾಮಾಯಣ ಪ್ರವಚನ ಮಾಲಿಕೆ, ಪಂಡಿತ್ ಶ್ರೀ ಹರೀನಾಚಾರ್ಯ ಸಂಡೂರುರಿಂದ ಅಯೋಧ್ಯಾಕಾಂಡ ಕುರಿತು ಉಪನ್ಯಾಸ, ಸ್ಥಳ: ಶ್ರೀ ಉತ್ತರಾದಿ ಮಠ, ಸಂಜೆ 6ರಿಂದ.

■ **ಹೆಬ್ಬಾರ್ ಶ್ರೀವೈಷ್ಣವ ಸಭಾ, ಬೆಂಗಳೂರು ಹೆಬ್ಬಾರ್ ಶ್ರೀವೈಷ್ಣವ ಉಪಸಭಾ:** ಹೆಸರಾಂತ ಉಪನ್ಯಾಸಕರಾದ ವಿದ್ವಾನ್ ಎಂ.ಕೆ.ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ, ರಾಮಮಂದಿರ, ಕಾಂತರಾಜ ಅರಸ್ ರಸ್ತೆ, ಸಂಜೆ 6.15ರಿಂದ.

■ **ರೋಟರಿ ಮೈಸೂರು ಮಿಡ್‌ಟೌನ್:** ಹೆಚ್.ರಾಮಚಂದ್ರೇಗೌಡ ಸ್ಮಾರಕ ಉಮ್ಮತ್ತೂರಿನ ಶ್ರೀಮತಿ ವರ್ಷ ಶ್ರೀಕಂಠಸ್ವಾಮಿ ಅವರಿಗೆ ಪ್ರಗತಿಪರ ರೈತ ಪ್ರಶಸ್ತಿ ಪ್ರದಾನ ಸಮಾರಂಭ, ಪ್ರಶಸ್ತಿ ಪ್ರದಾನ: ಆಕಾಶವಾಣಿ ಕಾರ್ಯಕ್ರಮ ನಿರ್ವಾಹಕ ಕೇಶವಮೂರ್ತಿ, ಸ್ಥಳ: ರೋಟರಿ ಕೇಂದ್ರ ಸಭಾಂಗಣ, ಸಂಜೆ 6.30ಕ್ಕೆ.

■ **ರಂಗಾಯಣ ಮೈಸೂರು, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ:** ಮೈಸೂರು ಸಂಕ್ರಾಂತಿ ರಂಗಹಬ್ಬ, ಮೈಸೂರು ರಂಗವಲ್ಲಿ ತಂಡದಿಂದ ಶ್ರೀನಿವಾಸ ವೈದ್ಯರ ಬರಹಗಳನ್ನಾಧರಿಸಿದ ‘ಪಾರ್ಶ್ವಸಂಗೀತ’ ನಾಟಕ ಪ್ರದರ್ಶನ, ರಂಗರೂಪ : ಬಿ.ಪಿ. ಅರುಣ್, ನಿರ್ದೇಶನ : ಪ್ರಶಾಂತ್ ಹಿರೇಮಠ, ಸ್ಥಳ: ಭೂಮಿಗೀತ, ರಂಗಾಯಣ, ಸಂಜೆ 6.30ಕ್ಕೆ.

ಬಿಲ್ಲೇನಹೊಸಹಳ್ಳಿಯಲ್ಲಿಂದು, ಹುಣಸೂರು ತಾ.

■ **ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಆಶ್ರಯ ಟ್ರಸ್ಟ್, ಬೆಂಗಳೂರು:** ನವೀಕರಿಸಬಹುದಾದ ಮೈಕ್ರೋ ಗ್ರಿಡ್ ವಿದ್ಯುತ್ ಯೋಜನೆ ಉದ್ಘಾಟನಾ ಸಮಾರಂಭ, ಉಪಸ್ಥಿತರು: ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ಶಾಸಕ ಜಿ.ಡಿ.ಹರೀಶ್‌ಗೌಡ, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಆಶ್ರಯ ಹಸ್ತ ಟ್ರಸ್ಟ್ ಮ್ಯಾನೇಜಿಂಗ್ ಟ್ರಸ್ಟಿಗಳಾದ ಕೆ.ದಿನೇಶ್, ಆಶಾ ದಿನೇಶ್, ವಿಶ್ವನಾಥ್ ರೆಡ್ಡಿ, ಎಸ್.ಬಿ.ಉದಯಶಂಕರ್, ಸತ್ಯಕುಮಾರ್, ಡಾ.ರೋಹಿಣಿ ನಾಗಪದ್ಮ, ಶ್ಯಾಮಸುಂದರ್, ಡಾ.ಗಣೇಶ್‌ಪ್ರಸಾದ್, ಸ್ಥಳ: ಬಿಲ್ಲೇನಹೊಸಹಳ್ಳಿ, ಬೆ. 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಚಾಯ್ಸ್ ಈಕ್ವಿಟಿ ಗಳಿಕೆ–ಉಳಿಕೆ–ಹೂಡಿಕೆ–ಹಣಕಾಸಿನ ಮಾಹಿತಿಯ ಬಾನುಲಿ ಸರಣಿ, ಪ್ರಸ್ತುತಿ–ಮೂಕನಹಳ್ಳಿ ರಂಗಸ್ವಾಮಿ, 6.40ಪದಸಂಸ್ಕೃತಿ–ಡಾ.ಶ್ರೀಧರ ಹೆಗಡೆ ಭದ್ರನ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ವೃತ್ತಿ ಮಾರ್ಗದರ್ಶನ–ಕಾಮರ್ಸ್ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ನಿಶಾಂತ್ ಎ.ನಾಯ್ಡು ಅವರೊಂದಿಗೆ ಮಾತುಕತೆ ನಡೆಸಿಕೊಡುತ್ತಾರೆ–ಬೇದ್ರೆ ಮಂಜುನಾಥ್, 10.00 ಹಿಂದೂಸ್ಥಾನಿ ಸಂಗೀತ–ವಿ.ಜಿ.ಜೋಗ್–ವಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆಗಳು–ಪುರುಷೋತ್ತಮ್, 3.00 ಮೈಸೂರು ಎ. ಚಂದನ್ ಕುಮಾರ್–ವೇಣುವಾದನ, 4.00 ಮಹಿಳಾರಂಗ–ಸ್ತ್ರೀ ಚೇತನ–ಉದ್ಯಮಿ ಶೋಭಾ ದಿನೇಶ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಸಾವಯವ ಕೃಷಿ ಉತ್ಪನ್ನಗಳ ಪ್ರಮಾಣೀಕರಣ ಕುರಿತು ಸಂವಾದ ಭಾಗವಹಿಸುತ್ತಾರೆ ಡಾ.ಸುಧೀರ್‌ಕುಮಾರ್ ಹಾಗೂ ರಂಗಸಮುದ್ರದ ಪಿ.ರಮೇಶ್, 8.00 ಕ್ಷಿತಿಜ–ಸಾಹಿತ್ಯ ಸಾಧಕರೊಂದಿಗೆ ಸಂವಾದ. ಭಾಗವಹಿಸುತ್ತಾರೆ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 9.30 ಪಂಡಿತ್ ರಾಜೀವ್ ತಾರಾನಾಥ್–ಸರೋಡ್ ವಾದನ, 10.00 ಜನಪದ ಸಂಗೀತ, 10.30 ಸವಿನೆನಪು

ಕೃಷ್ಣರಾಜ ಕ್ಷೇತ್ರದ ದೇವಾಲಯ, ಆಟೋಗಳಿಗೆ ಕೇಸರಿ ಧ್ವಜ ವಿತರಣೆ




ಮೈಸೂರಿನ ಕೃಷ್ಣರಾಜ ವ್ಯಾಪ್ತಿಯ ಆಟೋಗಳಿಗೆ ಮಂಗಳವಾರ ಸಂಸದ ಪ್ರತಾಪ ಸಿಂಹ, ಶಾಸಕ ಟಿ.ಎಸ್.ಶ್ರೀವತ್ಸ ಕೇಸರಿ ಧ್ವಜ ವಿತರಿಸಿದರು.

ಮೈಸೂರು, ಜ.16(ಎಸ್‌ಪಿಎನ್)–ಕೃಷ್ಣರಾಜ ಕ್ಷೇತ್ರದ ವ್ಯಾಪ್ತಿಯ ಎಲ್ಲ ದೇವಾಲಯ ಹಾಗೂ ಆಟೋಗಳಿಗೆ ಉಚಿತವಾಗಿ ಶ್ರೀ ರಾಮ ಚಿತ್ರವುಳ್ಳ ಕೇಸರಿ ಧ್ವಜವನ್ನು ಮಂಗಳವಾರ ಸಂಸದ ಪ್ರತಾಪ ಸಿಂಹ ಹಾಗೂ ಶಾಸಕ ಟಿ.ಎಸ್.ಶ್ರೀವತ್ಸ ನೇತೃತ್ವದಲ್ಲಿ ವಿತರಿಸಲಾಯಿತು. ಅಯೋಧ್ಯೆಯಲ್ಲಿ ಜನವರಿ 22ರಂದು ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆ ಕಾರ್ಯ ನಡೆಯುವ ಹಿನ್ನೆಲೆಯಲ್ಲಿ ಕೆ.ಆರ್. ಕ್ಷೇತ್ರದ ಇಟ್ಟಿಗೆಗೂಡಿನ ಆಟೋ ನಿಲ್ದಾಣಗಳಿಗೆ ಭೇಟಿ ನೀಡಿ, ಹಿಂದೂ ಧರ್ಮದ ಪ್ರತೀಕವಾದ ಕೇಸರಿ ಧ್ವಜಗಳನ್ನು ವಿತರಿಸಿದರು.

ನಂತರ ಮಾತನಾಡಿದ ಶಾಸಕರು, ಭಾರತೀಯ ಜನತಾ ಪಾರ್ಟಿ 1992ರಿಂದಲೂ ಅಯೋಧ್ಯೆಯಲ್ಲಿ ಶ್ರೀರಾಮನ ಮಂದಿರ ನಿರ್ಮಾಣ ಮಾಡುವುದಾಗಿ ಪ್ರಣಾಳಿಕೆಯಲ್ಲಿ ಉಲ್ಲೇಖಿಸಿತ್ತು ಅದರಂತೆಯೇ ಪ್ರಧಾನಿ ನರೇಂದ್ರ ಮೋದಿ ಅಧಿಕಾರಾವಧಿಯಲ್ಲಿ ಹಾಗೂ ಭಾರತದ ಎಲ್ಲಾ ಗಣ್ಯರ ಸಮ್ಮುಖದಲ್ಲಿ ಶ್ರೀರಾಮನ ಪ್ರಾಣ ಪ್ರತಿಷ್ಠೆ ಕಾರ್ಯ ನೆರವೇರುತ್ತಿದೆ. ಇಂತಹ ಸಂದರ್ಭದಲ್ಲಿ ಕ್ಷೇತ್ರ ವ್ಯಾಪ್ತಿ ಹಬ್ಬದ ವಾತವರಣ ನಿರ್ಮಾಣವಾಗಲೆಂದು ಈ ಕಾರ್ಯ ಹಮ್ಮಿಕೊಳ್ಳಲಾಗಿದೆ ಎಂದರು.

ಈ ವೇಳೆ ವಿಧಾನಪರಿಷತ್ ಮಾಜಿ ಸದಸ್ಯ ಸಿದ್ದರಾಜು, ನಗರಪಾಲಿಕೆ ಮಾಜಿ ಸದಸ್ಯ ಬಿ.ವಿ.ಮಂಜುನಾಥ್, ಕ್ಷೇತ್ರದ ಪದಾಧಿಕಾರಿಗಳು, ವಾರ್ಡ್ ಅಧ್ಯಕ್ಷರು ಹಾಗೂ ಹಿರಿಯ ಮುಖಂಡರು ಉಪಸ್ಥಿತರಿದ್ದರು.





ಮೈದನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿಗಮ, ಮೈದನಹಳ್ಳಿ–ಜೆಡಿಎಸ್ ತೆಕ್ಕೆಗೆ. ಅಧ್ಯಕ್ಷರಾಗಿ ಚಂದ್ರಶೇಖರ್ ಹಾಗೂ ಉಪಾಧ್ಯಕ್ಷರಾಗಿ ಪುಟ್ಟರಾಜುರವರು ಅವಿರೋಧವಾಗಿ ಆಯ್ಕೆಯಾದ ಸಂದರ್ಭದಲ್ಲಿ ಮೈದನಹಳ್ಳಿ ಗ್ರಾಮಸ್ಥರು, ಜೆಡಿಎಸ್ ಮುಖಂಡರುಗಳಾದ ಕುಮಾರ್ ಟಿ. ಲೋಕೇಶ್ ಎಂ.ಎ. (ಎಲೆಕ್ಟ್ರಿಕಲ್), ಕ್ರಶರ್ ಮಾಲೀಕರಾದ ವಿಜಯ್‌ಕುಮಾರ್, ಎಚ್.ಎಸ್.ಪ್ರಕಾಶ್ ಎಂ, ನಾಗರಾಜು.ಎಂ, ರವಿಕುಮಾರ್ (ಎಲೆಕ್ಟ್ರಿಕಲ್) ಉಪಸ್ಥಿತರಿದ್ದರು.

ADVT.



ಮೈಸೂರು ಮಹಾನಗರಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಛೇರಿ,
ನೀಸ&ಒಚ (ಪಶ್ಚಿಮ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು.

ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ನೀಸ&ಒಚ(ಪಶ್ಚಿಮ)/ಟಿಎನ್–13/1654/2023–24 ದಿನಾಂಕ:16.01.2024


ಅಲ್ಪಾವಧಿ/ದೀರ್ಘಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನಗಳಲ್ಲಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ	ವಿವರ	ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಸಂಜೆ 5.30 ಗಂಟೆ ನಂತರ ಇ–ಪೋರ್ಟಲ್ ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಸಂಜೆ 4.30 ಗಂಟೆ ಒಳಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಸಂಜೆ 4.30 ಗಂಟೆ ನಂತರ ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	Kw-1	8 ಸಂಖ್ಯೆ	58.33	18.01.2024	02.02.2024	03.02.2024
2	Kw-4 (ಅಲ್ಪಾವಧಿ ಟೆಂಡರ್)	1 ಸಂಖ್ಯೆ	140.00	18.01.2024	25.01.2024	29.01.2024

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ಅಥವಾ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ನೀಸ&ಒಚ (ಪಶ್ಚಿಮ) ವಿಭಾಗ, ಮೈಸೂರು ಮಹಾನಗರ ಪಾಲಿಕೆ, ಮೈಸೂರು







ಪಟ್ಟಣ ಪಂಚಾಯಿತಿ ಕಾರ್ಯಾಲಯ, ಅರಕಲಗೂಡು ಹಾಸನ ಜಿಲ್ಲೆ–573102

ಫೋ.ನಂ.220350 E-mail: ka.arkalgudu.tp@gmail.com
ನಂ/ಅ.ಪ.ಪಂ/ಕಿ.ಅ/ಟೆಂಡರ್/02/2023–24 ದಿನಾಂಕ:16–01–2024

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

ಅರಕಲಗೂಡು ಪಟ್ಟಣ ಪಂಚಾಯಿತಿಯ ಸ್ಥಳೀಯ ಅನುದಾನದಡಿ ನೀರು ಸರಬರಾಜು ವಿಭಾಗಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ನೌಕರರನ್ನು ಸರಬರಾಜು ಮಾಡುವ ಕೆಲಸಕ್ಕೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ವಾರ್ಷಿಕ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು ಟೆಂಡರ್‌ನ್ನು ದಿನಾಂಕ: 29/01/2024 ರ ಅಪರಾಹ್ನ 5.30 ಗಂಟೆಯೊಳಗೆ ಇ–ಪ್ರಕ್ಯೂರ್‌ಮೆಂಟ್ (http://kppp.karnataka.gov.in) ಮೂಲಕ ಮಾತ್ರ ಸಲ್ಲಿಸತಕ್ಕದ್ದು, ಸದರಿ ಟೆಂಡರ್‌ನ್ನು ದಿನಾಂಕ: 31/01/2024 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು, ಟೆಂಡರ್ ನಿಯಮಾವಳಿಗಳ ಕುರಿತು ಹೆಚ್ಚಿನ ವಿವರಕ್ಕಾಗಿ ಪಟ್ಟಣ ಪಂಚಾಯಿತಿಯ ಕಾಮಗಾರಿ ಶಾಖೆ/ಕಿರಿಯ ಅಭಿಯಂತರರು, ಪಟ್ಟಣ ಪಂಚಾಯಿತಿ, ಅರಕಲಗೂಡು ಇವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು (ದೂರವಾಣಿ: 08175–220252) ಕೆಲಸದ ವಿವರ ಈ ಕೆಳಕಂಡಂತಿದೆ. ಕ್ರ.ಸಂ 1) DMA/2023-24/SE0672/CALL-2 ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ): 2519590.97 ಇ.ಎಂ.ಡಿ ರೂ. 63000.00 ಕೆಲಸದ ಕಾಲಾವಧಿ: 12 ತಿಂಗಳು.

ಸಹಿ/–ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಅರಕಲಗೂಡು

ವಾಸಾಸಂಇ/ಹಿಸವಿ/ಹಾಸನ/656/ಕೆಎಸ್‌ಎಂಸಿಎ/663/2023–24



ನಕ್ಕರೆ ಅದೇ ಸ್ವರ್ಗ

ಒಬ್ಬ : "ನಿಮ್ಮ ದೇಶದಲ್ಲಿ ಸಾವಿನ ಪ್ರಮಾಣ ಹೇಗೆ?"
ಇನ್ನೊಬ್ಬ : "ನೂರಕ್ಕೆ ನೂರು"
ಒಬ್ಬ : "ಹೇಗೆ?"
ಇನ್ನೊಬ್ಬ : "ಇಲ್ಲಿ ಯಾರು ಹುಟ್ಟಿದ್ದಾರೋ ಅವರೆಲ್ಲಾ ಕಡೆಯಲ್ಲಿ ಸಾಯ್ತಾರೆ"

ಮೈಸೂರು ಮಿತ್ರ
ಬುಧವಾರ, 17 ಜನವರಿ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.


ಅಮೃತವಾಹಿನಿ..........

ನಮ್ಮ ಅಂತರಂಗದ ಪುಸ್ತಕ ತೆರೆಯುವವರೆಗೆ
ಉಳಿದೆಲ್ಲ ಪುಸ್ತಕಗಳೂ ಉಪಯೋಗಕ್ಕೆ ಬಾರವು. –ವಿವೇಕಾನಂದ

ವೇದ ಸುಳ್ಳಾದರೂ
ಗಾದೆ ಸುಳ್ಳಾಗದು { ಕಲೆಯೇ ಸೌಂದರ್ಯ

ನಿಮ್ಮ ಪತ್ರಗಳು

ರಸ್ತೆ ಡಾಂಬರೀಕರಣಗೊಳಿಸಿ



ಮಾನ್ಯರೆ,

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಕ್ಯಾತಮಾರನಹಳ್ಳಿ 4ನೇ ಹಂತದಲ್ಲಿ ಕಲ್ಯಾಣಗಿರಿ ಬಡಾವಣೆ ನಿರ್ಮಾಣ ಮಾಡಿರುವುದು ಸರಿಯಷ್ಟೆ. ಈ ಬಡಾವಣೆಯ (ಅಕ್ಷಯ ಭಂಡಾರ) ಹಿಂಭಾಗದ ರಸ್ತೆಗಳು ಹಲವಾರು ವರ್ಷಗಳಿಂದ ಡಾಂಬರು ಕಾಣದೆ ಹಳ್ಳಕೊಳ್ಳಗಳಿಂದ ಕೂಡಿದ್ದು, ಪಾದಚಾರಿಗಳು ನಡೆದಾಡುವುದೇ ಕಷ್ಟವಾಗಿದೆ. ಸಂಬಂಧಪಟ್ಟವರು ಈ ರಸ್ತೆಗಳನ್ನು ಡಾಂಬರೀಕರಣ ಮಾಡಲು ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಮನವಿ.

– ಎನ್. ಮಹೇಶ್, ಕ್ಯಾತಮಾರನಹಳ್ಳಿ 4ನೇ ಹಂತ, ಕಲ್ಯಾಣಗಿರಿ ನಗರ, ಮೈಸೂರು.

ವಿವಿ ಪುರಂ ಸಂಚಾರಿ ಪೊಲೀಸರಲ್ಲಿ ಮನವಿ

ಮಾನ್ಯರೆ,

ಮೈಸೂರಿನ ವಿ.ವಿ. ಮೊಹಲ್ಲಾ 2ನೇ ಮುಖ್ಯ ರಸ್ತೆಯಲ್ಲಿ ಸಂಜೆಯ ವೇಳೆ ಫಾಸ್ಟ್ ಫುಡ್ ಗಾಡಿಯವರು ವ್ಯಾಪಾರ ಮಾಡುತ್ತಾರೆ. ಈ ಜಾಗದಲ್ಲಿ ನೂತನವಾಗಿ ಹೋಟೆಲ್ ಒಂದನ್ನು ಕೂಡ ಪ್ರಾರಂಭ ಮಾಡಲಾಗಿದೆ. ತಿಂಡಿ ತಿನಿಸುಗಳನ್ನು ತಿನ್ನಲು ಬರುವ ಗ್ರಾಹಕರು ತಮ್ಮ ವಾಹನಗಳನ್ನು ಸರಿಯಾಗಿ ಕ್ರಮಬದ್ಧವಾಗಿ ನಿಗದಿತ ನಿಲುಗಡೆ ಸ್ಥಳದಲ್ಲಿ ನಿಲ್ಲಿಸುತ್ತಿಲ್ಲ. ಮೊದಲೇ ರಸ್ತೆ ಕಿರಿದಾಗಿರುವುದರಿಂದ ಸಂಚಾರ ವ್ಯವಸ್ಥೆಗೆ ತೊಂದರೆಯಾಗಿದೆ. ಫಾಸ್ಟ್‌ಫುಡ್ ಗಾಡಿಗಳನ್ನು ಬೇರೆಡೆ ಸ್ಥಳಾಂತರಗೊಳಿಸಿ ಈ ಸಮಸ್ಯೆ ಬಗೆಹರಿಸಲು ಮನವಿ.

– ನೊಂದ ವಾಹನ ಚಾಲಕರು, ಮೈಸೂರು.

ಶಾಲಾ ಬಿಸಿಯೂಟದಲ್ಲಿ ಸಿರಿಧಾನ್ಯದ ಬಳಕೆ ಅಪೌಷ್ಟಿಕತೆ ನಿವಾರಣೆಗೆ ಸಹಕಾರಿ

ಮಾನ್ಯರೆ,

ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಸಿರಿಧಾನ್ಯ ಮತ್ತು ಸಾವಯವ ಅಂತಾರಾಷ್ಟ್ರೀಯ ವಾಣಿಜ್ಯ ಮೇಳದಲ್ಲಿ ಶಾಲಾ ಬಿಸಿಯೂಟ ಹಾಗೂ ಇಂದಿರಾ ಕ್ಯಾಂಟಿನ್‌ನಲ್ಲಿ ದೊರೆಯುವ ಊಟ–ಉಪಾಹಾರಗಳಲ್ಲಿ ಸಿರಿಧಾನ್ಯ ಬಳಕೆ ಮಾಡಲು ಮುಖ್ಯಮಂತ್ರಿಗಳು ಚಿಂತಿಸಿರುವುದು ಹದಿಹರೆಯದ ಮಕ್ಕಳಲ್ಲಿ ಅಪೌಷ್ಟಿಕತೆ ನಿವಾರಣೆಗೆ ಸಹಕಾರಿಯಾಗಲಿದೆ. ಇದೊಂದು ಸ್ವಾಗತಾರ್ಹ ಚಿಂತನೆ. ರಾಷ್ಟ್ರದಲ್ಲೇ ಕರ್ನಾಟಕ ಸಿರಿಧಾನ್ಯಗಳ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದ್ದು, ಇಂದಿರಾ ಕ್ಯಾಂಟಿನ್ ಹಾಗೂ ಮಧ್ಯಾಹ್ನದ ಶಾಲಾ ಬಿಸಿಯೂಟದಲ್ಲಿ ಇದರ ಬಳಕೆಗೆ ಸರ್ಕಾರ ನಿರ್ಧಾರ ಕೈಗೊಂಡಲ್ಲಿ ಸಿರಿಧಾನ್ಯಗಳ ಉತ್ಪಾದನೆಗೆ ಮತ್ತಷ್ಟು ಪ್ರೋತ್ಸಾಹ ದೊರೆತಂತಾಗಿ ಸಾರ್ವಜನಿಕರು ಹಾಗೂ ಶಾಲಾ ಮಕ್ಕಳ ಆರೋಗ್ಯ ವೃದ್ಧಿಗೆ ಸಹಕಾರಿಯಾಗಲಿದೆ.

–ಪ್ರಸಾದ್ ಎನ್, ಚಾಮರಾಜನಗರ.

ಇದು ರಸ್ತೆಯೋ ಅಥವಾ ಪೊದೆಯೋ



ಮಾನ್ಯರೆ,

ಮೈಸೂರಿನ ಪ್ರತಿಷ್ಠಿತ ಬಡಾವಣೆಯಲ್ಲಿ ಒಂದಾದ ಕೆ.ಸಿ.ನಗರ ಬಡಾವಣೆಯಲ್ಲಿ ಕೆಲವು ರಸ್ತೆಗಳು ಮಾಯವಾಗಿ ಪೊದೆಯಾಗಿ ಬೆಳೆದುಕೊಂಡಿರುವುದು ಸರ್ವೇ ಸಾಮಾನ್ಯವಾಗಿದೆ. ಬಡಾವಣೆಯ ನಿವಾಸಿಗಳು ಹಲವಾರು ಬಾರಿ ಇಲ್ಲಿನ ಮಹಾನಗರ ಪಾಲಿಕೆಯ ಸದಸ್ಯರಿಗೆ (ಈಗ ಮಾಜಿ) ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಇಲ್ಲಿನ 4ನೇ ಮುಖ್ಯ ರಸ್ತೆ ಹಾದು ಹೋಗುವ 7,8 ಮತ್ತು 9 ನೇ ಕ್ರಾಸ್ ಕೂಡು ರಸ್ತೆಗಳು ಮಾಯವಾಗಿ ಪೊದೆಗಳು ಬೆಳೆದು ನಿವಾಸಿಗಳಿಗೆ ತುಂಬಾ ತೊಂದರೆಯಾಗಿದೆ. ಆದಷ್ಟು ಬೇಗ ಮಹಾನಗರ ಪಾಲಿಕೆಯ ಅಧಿಕಾರಿಗಳು ಇತ್ತ ಕಡೆ ಗಮನಹರಿಸಿ ಕಾರ್ಯ ಪ್ರವೃತ್ತರಾಗಿ ಪೊದೆಗಳನ್ನು ತೆಗೆದು ನಿವಾಸಿಗಳಿಗೆ ಅನುಕೂಲ ಮಾಡಿಕೊಡುವ ಮೂಲಕ ನೆರವಾಗಬೇಕು.

–ಬೆಸಗರಹಳ್ಳಿ ರವಿ ಪ್ರಸಾದ್, ಕೆ.ಸಿ.ನಗರ, ಮೈಸೂರು.

ರೀಲ್ಸ್ ಮಾಡುವವರ ವಿರುದ್ಧ ಕಾನೂನು ಕ್ರಮ ಜರುಗಿಸಿ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಯುವಕ ಯುವತಿಯರು ರೀಲ್ಸ್ ಮಾಡಿ ಮಾಧ್ಯಮಗಳಾದ ಇನ್ಸ್ಟಾಗ್ರಾಮ್ ಮತ್ತು ಫೇಸ್‌ಬುಕ್‌ಗಳಲ್ಲಿ ಹಾಕಿ ರಂಜಿಸಿ ಅಭಿಮಾನಿಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಜೊತೆಗೆ ಸಂಚಾರ ನಿಯಮ ಸೇರಿದಂತೆ ಎಲ್ಲಾ ಮರೆತಂತೆ ಕಾಣುತ್ತದೆ. ಸಂಚಾರ ಪೊಲೀಸರು ಕಂಡು ಕಾಣದಂತೆ ಇರುವುದರಿಂದ ಅನಾಹುತಕ್ಕೆ ಆಹ್ವಾನಿಸಿದಂತಾಗಿದೆ. ರೀಲ್ಸ್ ಮಾಡುವುದೇ ಅಪರಾಧ ಜೊತೆಗೆ ಸಂಚಾರ ನಿಯಮ ಉಲ್ಲಂಘಿಸಲಾಗುತ್ತಿದೆ. ದ್ವಿಚಕ್ರ ವಾಹನಗಳನ್ನು ಬಳಸಿ ರೀಲ್ಸ್ ಮಾಡುವ ಕಲಾವಿದರು, ಹೆಲ್ಮೆಟ್ ಧರಿಸದೆ, ರಸ್ತೆಯ ತಿರುವಿನಲ್ಲಿ ಸಿಗ್ನಲ್ ಲೈಟ್‌ಗಳನ್ನು (ಇಂಡಿಕೇಟರ್) ಸರಿಯಾಗಿ ಬಳಸದೇ, ಇನ್ನೂ ಇಬ್ಬರಿಗೂ ಮೀರಿ ಮೂರಕ್ಕೂ ಹೆಚ್ಚು ಜನರನ್ನು ಕೂರಿಸಿಕೊಂಡು ರೀಲ್ಸ್ ಮಾಡುವುದನ್ನು ಸೋಷಿಯಲ್ ಮೀಡಿಯಾದಲ್ಲಿ ಗಮನಿಸುತ್ತಿದ್ದೇವೆ. ಇಂತಹದೊಂದು ಸಂಭ್ರಮದಿಂದ ಮುಂದಿನ ದಿನಗಳಲ್ಲಿ ದೊಡ್ಡ ಅನಾಹುತಕ್ಕೆ ಆಹ್ವಾನಿಸಿದಂತಾಗುವುದು. ಕೂಡಲೇ ಸಂಬಂಧಪಟ್ಟ ಸಂಚಾರ ಠಾಣೆಯ ಪೊಲೀಸರು, ಸಂಚಾರ ನಿಯಮ ಸೇರಿದಂತೆ ಎಲ್ಲಾ ಉಲ್ಲಂಘಿಸಿ ರೀಲ್ಸ್ ಮಾಡುವ ಕಲಾವಿದರ ಮೇಲೆ ಪ್ರಕರಣ ದಾಖಲಿಸಿಕೊಂಡು ಕಠಿಣವಾದ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಶ್ರೀರಾಮೋ ಮಮ ದೈವತಮ್



ಐನೂರು ವರ್ಷಗಳ ಹಿಂದೆ ಜರುಗಿದ ಅಪಚಾರವನ್ನು ಸರಿಪಡಿಸುವ ಶುಭ ಕ್ಷಣ ಬಂದಿದೆ. ಅಯೋಧ್ಯೆಯ ರಾಮ ಜನ್ಮಭೂಮಿಯಲ್ಲಿ ಶ್ರೀರಾಮ ಮಂದಿರವನ್ನು ಕಣ್ಣಾರೆ ಕಾಣಬೇಕೆಂಬ ಕನಸು ನನಸಾಗುವ ಮಂಗಳ ದಿನ ಒದಗಿ ಬಂದಿದೆ. ಅನೇಕ ದಶಕಗಳ ಹೋರಾಟ ಫಲ ಕೊಡುವ ಸಂದರ್ಭ ನಮ್ಮ ಮುಂದಿದೆ. ನಮ್ಮ ಜೀವಿತಾವಧಿಯಲ್ಲಿ ಇಷ್ಟೆಲ್ಲ ಆದುದು ನಮ್ಮ ಸುದೈವ, ಸೌಭಾಗ್ಯ.

ರಾಮನ ವಿಷಯದಲ್ಲಿ ಹಲವರು ಹಲವು ಅಭಿಪ್ರಾಯಗಳನ್ನು ಹೊಂದಿದ್ದಾರೆ. ರಾಮನು ಸಾಕ್ಷಾದ್ ವಿಷ್ಣು. ರಾಮಾಯಣವು ವೇದಗಳ ಕಥಾರೂಪ. ವಿಷ್ಣು ಪರಮಾತ್ಮನು ರಾಮನ ರೂಪದಲ್ಲಿ ಅವತರಿಸಿದಾಗ ವೇದಗಳು. ವಾಲ್ಮೀಕಿ ಬಾಯಲ್ಲಿ ರಾಮಾಯಣದ ರೂಪವನ್ನು ಪಡೆದವು ಎಂದು ಕೆಲವರು ಹೇಳುತ್ತಾರೆ.

ವೇದವೇದ್ಯೇ ಪರೇ ಪುಂಸಿ ಜಾತೇ ದಶರಥಾತ್ಮಜೇ।
ವೇದಃ ಪ್ರಾಚೇತಸಾದಾಸೀತ್ ಸಾಕ್ಷಾದ್
ರಾಮಾಯಣಾತ್ಮನಾ॥

ಎಂಬ ಶ್ಲೋಕವು ಇವರ ಅಭಿಪ್ರಾಯಕ್ಕೆ ಕನ್ನಡಿಯಾಗಿದೆ. ಇನ್ನು ಕೆಲವರು ಶ್ರೀರಾಮನನ್ನು ಆದರ್ಶ ಮಾನವನೆಂದು ಪರಿಗಣಿಸುತ್ತಾರೆ. ರಾಮಾಯಣದಲ್ಲೇ ಅವನು ತನ್ನ ಬಗೆಗೆ ಹೇಳಿಕೊಳ್ಳುವ–

ಆತ್ಮಾನಂ ಮಾನುಷಂ ಮನ್ಯೇ ರಾಮಂ ದಶರಥಾತ್ಮಜಮ್

ಎಂಬ ಮಾತೂ ಇದನ್ನು ಸಮರ್ಥಿಸುತ್ತದೆ. ನನ್ನನ್ನು ನಾನು ದಶರಥನ ಮಗ ರಾಮನೆಂಬ ಮನುಷ್ಯ ಮಾತ್ರ ಎಂದೇ ಈ ಮಾತಿನ ಅರ್ಥ. ಶೌರ್ಯದಲ್ಲಿ, ಧೈರ್ಯದಲ್ಲಿ, ಸಾಮರ್ಥ್ಯದಲ್ಲಿ, ಪಿತೃವಾಕ್ಯ ಪರಿಪಾಲನೆಯಲ್ಲಿ, ಭ್ರಾತೃ ಪ್ರೇಮದಲ್ಲಿ ರಾಮನಿಗೆ ಸಮಾನರಿಲ್ಲ. ರಾಜನಾಗಿ ತನ್ನ ಸುಖವನ್ನೂ ಕಡೆಗಣಿಸಿ ರಾಜಧರ್ಮವನ್ನು ರಕ್ಷಿಸಿದವನು ಶ್ರೀರಾಮ. ಆದ್ದರಿಂದ ಅವನು ಜಗತ್ತಿಗೆ ಆದರ್ಶ ಎಂದು ಇವರು ಅಭಿಪ್ರಾಯಪಡುತ್ತಾರೆ. ಅವತಾರ ಎಂದರೆ ಕೆಳಗೆ ಇಳಿಯುವುದು. ಪರಮಾತ್ಮನು ಮಾನವರ ಉದ್ಧಾರಕ್ಕಾಗಿ ಭೂಲೋಕಕ್ಕೆ ಇಳಿದರೆ ಅದು ಅವತಾರ. ಆದರೆ ರಾಮಾಯಣದಲ್ಲಿ ಮಾನವನು ತನ್ನ ಸದ್ಗುಣಗಳಿಂದ ಪರಮಾತ್ಮ ಸ್ಥಾನಕ್ಕೆ ಏರಿದ ಆರೋಹಣವೇ ವರ್ಣಿತವಾಗಿದೆ ಎಂಬುದು ಇವರ ವಾದ.

ಮೂರನೆಯ ಗುಂಪಿನವರು ಸಮಸ್ತ ರಾಮಾಯಣವೂ ಕೇವಲ ಕವಿಕಲ್ಪನೆ ಎನ್ನುತ್ತಾರೆ. ಶ್ರೀರಾಮನೆಂಬುವನು ಐತಿಹಾಸಿಕ ವ್ಯಕ್ತಿಯಲ್ಲ. ಆದಿಕವಿ ವಾಲ್ಮೀಕಿ ತನ್ನ ಅದ್ಭುತ ಕಲ್ಪನೆಯಿಂದ ರಚಿಸಿದ ಕಾವ್ಯವೇ ಇದು. ದಶಕಂಠ, ಹತ್ತು ತಲೆಗಳಿರುವ ರಾವಣ ಕವಿಯ ಕಲ್ಪನೆಯಲ್ಲಲ್ಲದೆ ವಾಸ್ತವ ಪ್ರಪಂಚದಲ್ಲಿರಲು ಸಾಧ್ಯವೇ? ಎಂದು ಇವರು ಕೇಳುತ್ತಾರೆ. ಇಪ್ಪತ್ತನೆಯ ಶತಮಾನದವರೆಗೂ ವಿಮಾನ ಪ್ರಪಂಚದಲ್ಲಿರಲಿಲ್ಲ. ರಾಮಾಯಣದಲ್ಲಿ ಪುಷ್ಪಕವಿಮಾನದ ವರ್ಣನೆ ಇದೆ. ಇದು ಕವಿ ಕಲ್ಪನೆಯಲ್ಲದೆ ಬೇರೆ ಅಲ್ಲ. ಕಪಿಗಳು ಮಾತನ್ನು ಆಡುವುದು, ಸೈನ್ಯವನ್ನು ಕಟ್ಟಿ ಮಾನವರಿಗೆ ಸಹಾಯವಾಗುವುದು, ಸಮುದ್ರಕ್ಕೆ ಸೇತುವೆ ಕಟ್ಟುವುದು ಕಲ್ಪನೆಯಲ್ಲಿ ಮಾತ್ರ ಸಾಧ್ಯ ಎಂದು ಇವರು ಪ್ರತಿಪಾದಿಸುತ್ತಾರೆ.

ರಾಮಾಯಣ ಎಂದರೆ ರಾಮನ ಅಯನ, ಅವನ ಸಂಚಾರದ ಕಥೆ– ಅಯೋಧ್ಯೆಯ ರಾಜಕುಮಾರ, ಪಿತೃವಾಕ್ಯ ಪರಿಪಾಲಕನಾಗಿ ಅರಣ್ಯ ವಾಸವನ್ನು ಹದಿನಾಲ್ಕು ವರ್ಷ ಕುಂದಿಲ್ಲದೆ ಮಾಡಿದ ಧೀರ, ಧರ್ಮದ ವಿರೋಧಿಗಳನ್ನು ಸದೆಬಡಿದ ವೀರ, ಏಕಾಂಗಿಯಾಗಿ ರಾಕ್ಷಸ ಸೇನೆಯೊಡನೆ ಸೆಣೆಸಿದ ಶೂರ. ತಮ್ಮಂದಿರಲ್ಲಿ ಅವನ ಪ್ರೀತಿ ಅಜರಾಮರ. ವಾಲ್ಮೀಕಿಯ ಪ್ರತಿಭೆಯಿಂದ ರಾಮನ ಕೀರ್ತಿ ಶಾಶ್ವತವಾಯಿತೋ, ರಾಮನಂತಹ ಆದರ್ಶ ಪುರುಷನ ಕಥೆಯನ್ನು ಹೇಳಿದುದರಿಂದ ವಾಲ್ಮೀಕಿಗೆ ಆದಿಕವಿ ಪಟ್ಟವು ದೊರಕಿತೋ ನಮಗೆ ತಿಳಿಯದು. ಹೇಗಾದರೂ ಸರಿ, ರಾಮನೇ ನಮ್ಮ ಆರಾಧನೀಯ ದೈವ. ವಾಲ್ಮೀಕಿಯೋ ನಮಗೆ ಪೂಜ್ಯ. ರಾಮನಾಮ ನಮ್ಮ ಮಂತ್ರ.

ಸೂರ್ಯನಿಗೆ ಅವನ ಬೆಳಕಿಗೂ ಅವಿನಾಭಾವ ಸಂಬಂಧ ಇರುವಂತೆ ರಾಮಸೀತೆಯರು ಬೇರ್ಪಡದ ಸಂಬಂಧವನ್ನು ಹೊಂದಿದವರು. ಸೀತೆಯಲ್ಲದೆ ಕೇವಲ ರಾಮನಿರುವ ಗುಡಿಯನ್ನು ನಾವು ನೋಡಿಲ್ಲ. ರಾಮಾಯಣವನ್ನು ವಾಲ್ಮೀಕಿ 'ಸೀತಾಯಾಶ್ಚರಿತಂ ಮಹತ್' ಎಂದೇ ಬಣ್ಣಿಸಿದ್ದಾನೆ. ಶ್ರೀರಾಮನು ಹೇಗೆ ಆದರ್ಶಪುರುಷನೋ ಹಾಗೆ ಸೀತೆ ಆದರ್ಶ ಮಹಿಳೆ. ಪ್ರಪಂಚದ ಬೇರಾವ ಕಾವ್ಯದಲ್ಲಿ ಸೀತೆಯಂತಹ ಪತಿವ್ರತೆಯನ್ನು ಚಿತ್ರಿಸಿದ್ದಾರೆ? ಜನಕ ಮಹಾರಾಜನ ಸುಪುತ್ರಿಯಾಗಿ ಜಾನಕಿ, ಮಿಥಿಲಾ ಪಟ್ಟಣದ ಮಗಳಾಗಿ ಮೈಥಿಲಿ, ವಿದೇಹ ದೇಶದ ರಾಜಕುಮಾರಿಯಾಗಿ ವೈದೇಹಿ–ಅವಳ ಒಂದೊಂದು ಹೆಸರೂ ಭಾರತೀಯರಿಗೆ ಸುಪರಿಚಿತ.

ರಾಮನ ಅತ್ಯಂತ ಪ್ರೀತಿಯ ತಮ್ಮ ಲಕ್ಷ್ಮಣ. ರಾಮನನ್ನು ಕರೆದರೆ ಸಾಕು, ಅವನ ಜೊತೆಯಲ್ಲಿ ತಾನಾಗಿ ಬರುತ್ತಿದ್ದವನು ಲಕ್ಷ್ಮಣ. ವಿಶ್ವಾಮಿತ್ರ ಮಹರ್ಷಿ 'ಯಜ್ಞ ರಕ್ಷಣೆಗಾಗಿ ರಾಮನನ್ನು ಕಳುಹಿಸು' ಎಂದು ದಶರಥನನ್ನು ಕೋರಿದ. ತನ್ನ ಹೆಸರನ್ನು ಹೇಳದಿದ್ದರೂ ಲಕ್ಷ್ಮಣ ತಾನಾಗಿ ರಾಮನೊಡನೆ ಹೊರಟ. ಕೈಕೇಯಿ 'ರಾಮನು ಹದಿನಾಲ್ಕು ವರ್ಷ ಕಾಡಿನಲ್ಲಿರಲಿ' ಎಂದು ವರವನ್ನು ಬೇಡಿದ್ದಳು. ಲಕ್ಷ್ಮಣನು ಹೋಗಲಿ ಎಂದು ಕೇಳಿರಲಿಲ್ಲ. ಆದರೆ ಕಾಡಿನಲ್ಲಿ ಸೀತಾರಾಮರ ಯೋಗಕ್ಷೇಮವನ್ನು ನೋಡಿಕೊಳ್ಳಲು ಲಕ್ಷ್ಮಣ ತಾನೂ ವನವಾಸವನ್ನು ಮಾಡಿದ. ಸುವರ್ಣ ಮೃಗವನ್ನು ಹಿಡಿಯಲು ರಾಮನು ಹೋಗಿದ್ದಾಗ ಅವನ ರಕ್ಷಣೆಗಾಗಿ ನೀನೂ ಹೋಗೆಂದು ಸೀತೆ ಹೇಳಿದಾಗ ಲಕ್ಷ್ಮಣನು ಹೋಗಲು ಇಷ್ಟಪಡಲಿಲ್ಲ. ಏಕೆಂದರೆ ಅವಳ ರಕ್ಷಣೆಯ ಭಾರವನ್ನು ರಾಮನು ಲಕ್ಷ್ಮಣನ ಮೇಲೆ ಹೊರಿಸಿದ್ದ. ಆಗ ಸೀತೆ ಲಕ್ಷ್ಮಣನನ್ನು ತೀವ್ರವಾಗಿ, ತೀಕ್ಷ್ಣವಾಗಿ ನಿಂದಿಸಿದಳು. ವಿಧಿಯಿಲ್ಲದೆ ಲಕ್ಷ್ಮಣನು ಹೋಗಲೇಬೇಕಾಯಿತು. ಮುಂದೆ ರಾಮಾಯಣದಲ್ಲಿ ಎಲ್ಲಿಯೂ ಇದನ್ನು ನೆನಪಿಸಿಕೊಂಡು ಲಕ್ಷ್ಮಣನು ಸೀತೆಯನ್ನು ದೂಷಿಸಲಿಲ್ಲ. ಇದು ಅವನ ವ್ಯಕ್ತಿತ್ವ ವನ್ನು ಅತ್ಯಂತ ಉನ್ನತಿಗೆ ಒಯ್ಯುತ್ತದೆ. ಸುಮಿತ್ರೆಯ ಮಗ ಸೌಮಿತ್ರಿ ಎನಿಸಿಕೊಳ್ಳುವುದಕ್ಕಿಂತ ಅವನಿಗೆ ರಾಮನ ತಮ್ಮ ರಾಮಾನುಜ ಎನಿಸಿಕೊಳ್ಳುವುದೇ ಹೆಚ್ಚು ಇಷ್ಟವೆನ್ನುತ್ತಾರೆ ಮುಂದಿನ ಕವಿಗಳು.

ರಾಮನ ಇನ್ನೊಬ್ಬ ತಮ್ಮ ಭರತನಂತೂ ತ್ಯಾಗವೆಂಬ ಶಿಲೆಯಲ್ಲಿ ಕೆತ್ತಿದ ಮೂರ್ತಿ. ತಾಯಿಯ ವರದಿಂದ ತಾನಾಗಿ ಪ್ರಾಪ್ತವಾಗಿದ್ದ ರಾಜ್ಯವನ್ನು ಅವನು ಅಣ್ಣ ರಾಮನಿಗೇ ಕೊಡಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ ಮಹಾವ್ಯಕ್ತಿ ಭರತ. ರಾಮನು ಒಪ್ಪದಿದ್ದಾಗ ಅವನ ಪಾದುಕೆಗಳನ್ನೇ ಸಿಂಹಾಸನದ ಮೇಲೆ ಇಟ್ಟು ಅವುಗಳ ಹೆಸರಿನಲ್ಲಿ ಹದಿನಾಲ್ಕು ವರ್ಷ ರಾಜ್ಯಾಡಳಿತವನ್ನು ನೋಡಿಕೊಂಡ ಅಪರೂಪ ವ್ಯಕ್ತಿ. ಅಣ್ಣಂದಿರನ್ನು ಕೊಂದು, ಸೆರೆಗೆ ದೂಡಿ ರಾಜ್ಯವನ್ನು ಕಬಳಿಸಿದ ರಾಜರೇ ಇತಿಹಾಸದಲ್ಲಿ ಕಾಣಸಿಗುತ್ತಾರೆ. ಶ್ರೀರಾಮನು ಹಿಂದಿರುಗಿ ಬರುವವರೆಗೂ ತಾನೂ ವನವಾಸಿಯಂತೆ ಭೋಗ ಭಾಗ್ಯಗಳನ್ನು ವರ್ಜಿಸಿ ಬದುಕಿದ್ದವನು ಭರತ.

'ನ ಸರ್ವೇ ಭ್ರಾತರಸ್ತಾತ ಭವಂತಿ ಭರತೋಪಮಾಃ॥

ಎಂಬ ಮಾತು ಶ್ರೀರಾಮನ ಬಾಯಲ್ಲಿ ಬರಬೇಕಾದರೆ ಭರತನ ನಿಃಸ್ವಾರ್ಥ ಪ್ರವೃತ್ತಿಯೇ

ಒಡೆಯನೆಂದೋ ಬಂದು ಕೇಳ್ವನದ ಕುತ್ತರವ
ಕೊಡಬೇಕು ತಾನೆನುವವೊಲು ಋಜತೆಯಿಂದ
ಒಡಲ ಜಾಣಿನ ಜೀವ ಶಕ್ತಿಗಳ ನೆಲ್ಲವನು
ಮುಡುಪುಕೊಟ್ಟನು ಭರತ ಮಂಕುತಿಮ್ಮ ॥

ಎಂದು ಡಿವಿಜಿ ಭರತನ ವ್ಯಕ್ತಿತ್ವವನ್ನು ಹೊಗಳಿದ್ದಾರೆ.

ರಾಮಾಯಣದಲ್ಲಿರುವ ಇನ್ನೊಂದು ಮಹೋನ್ನತ ವ್ಯಕ್ತಿ ಆಂಜನೇಯ. ಹನುಮಂತ, ವಾಯುಸುತ, ಮಾರುತಿ ಎಂದೆಲ್ಲ ಕರೆಸಿಕೊಳ್ಳುವ ಆಂಜನೇಯ ರಾಮಭಕ್ತಿಯ ಶ್ರೇಷ್ಠ ಉದಾಹರಣೆ. ಎಲ್ಲಿ ರಾಮನಿರುವನೋ ಅಲ್ಲಿ ಹನುಮನಿರುವನು. ರಾಮನ ಸಂಕಟದ ಕ್ಷಣಗಳಲ್ಲೆಲ್ಲ ನೆರವಾದವನು ಆಂಜನೇಯನೇ. ಲಕ್ಷ್ಮಣನನ್ನು ಕಳೆದುಕೊಂಡೆನೆಂದು ರಾಮನು ದಿಕ್ಕು ತೋಚದೆ ಕುಳಿತಾಗ ಸಂಜೀವಿನೀ ಮೂಲಿಕೆಯಿದ್ದ ಪರ್ವತಶಿಖರವನ್ನೇ ತಂದು ಲಕ್ಷ್ಮಣನ ಜೀವವನ್ನು ಉಳಿಸಿದ ಭಂಟನೂ ಆಂಜನೇಯನೇ. ಹದಿನಾಲ್ಕು ವರ್ಷಗಳ ಅವಧಿ ಮುಗಿಯಿತೆಂದು ಭರತನು ಅಗ್ನಿ ಪ್ರವೇಶಕ್ಕೆ ಅಣಿಯಾಗುತ್ತಿದ್ದಾಗ ಹಾರಿ ಬಂದು ರಾಮಾಗಮನವನ್ನು ತಿಳಿಸಿ ರಾಮ–ಭರತರು ಮತ್ತೆ ಪರಸ್ಪರ ಒಂದಾಗುವಂತೆ ಮಾಡಿದ ಮಹಾನುಭಾವನೂ ಆಂಜನೇಯನೇ. ಯಾವುದೋ ವಾನರ ಕುಲದಲ್ಲಿ ಹುಟ್ಟಿದರೂ ಭಕ್ತ ಶ್ರೇಷ್ಠನಾಗಿ ಸಕಲಜನಪೂಜ್ಯನಾಗಿರುವವನೋ ಆಂಜನೇಯನೇ.

ರಾಮಾಯಣದಲ್ಲಿ ಒಂದೊಂದು ಪಾತ್ರವೂ ಒಂದೊಂದು ರತ್ನ. ಆ ರತ್ನಗಳ ಮಧ್ಯದಲ್ಲಿ ಶೋಭಿಸುವ ಕೌಸ್ತುಭರತ್ನ ಶ್ರೀರಾಮ. ಅವನು ಜನಿಸಿದ ಅಯೋಧ್ಯೆ ಪವಿತ್ರತಮ.


ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚೀ ಹ್ಯವಂತಿಕಾ।
ತಥಾ ದ್ವಾರಾವತೀ ಚೈವ ಸಪ್ತೈತಾ ಮೋಕ್ಷದಾಯಿಕಾಃ॥

ಎಂಬ ಸಪ್ತ ಪವಿತ್ರ ನಗರಗಳಲ್ಲಿ ಮೊದಲನೆಯದು ಅಯೋಧ್ಯೆ. ಅಲ್ಲಿ ದಿವ್ಯ ಭವ್ಯ ಮಂದಿರದ ನಿರ್ಮಾಣವಾಗುತ್ತಿದೆ. ಬಾಲರಾಮನ ವಿಗ್ರಹದ ಪ್ರತಿಷ್ಠೆ ಆಗುತ್ತಿದೆ ಎಂಬುದು ಭಾರತೀಯರ ಸುಕೃತದ ಪರಿಪಾಕ. ಭಾರತದ ನೂರ ನಲವತ್ತು ಕೋಟಿ ಜನರೂ ಈ ಅದ್ಭುತ ಮಂದಿರವನ್ನು ಕಣ್‌ತುಂಬಾ ನೋಡಬೇಕು. ಅನೇಕ ಭಕ್ತರ ತ್ಯಾಗದ ಸಂಕೇತ ಆ ಮಂದಿರ. ನೂರಾರು ಶಿಲ್ಪಿವರ್ಯರ ಕೌಶಲದ ಮತ್ತು ಪರಿಶ್ರಮದ ಫಲ ಅಯೋಧ್ಯೆಯ ರಾಮಮಂದಿರ. ಅದರಲ್ಲಿ ಕರ್ನಾಟಕದ ಶಿಲ್ಪಿಗಳ ಪಾತ್ರ ಪ್ರಮುಖವಾಗಿರುವುದು ಕನ್ನಡಿಗರಿಗೆ ಹೆಮ್ಮೆಯ, ಅಭಿಮಾನದ ಕಾರಣ. ಜಕಣನ ಕೀರ್ತಿ, ನೈಪುಣ್ಯ ಇಂದಿಗೂ ಉಳಿದಿರುವುದು ನಮ್ಮ ಪುಣ್ಯ.

ನೂರು ಕೋಟಿಗೂ ಅಧಿಕ ಸಂಖ್ಯೆಯ ಜನರು ರಾಮ ಮಂದಿರವನ್ನು ಒಂದೇ ದಿನದಲ್ಲಿ ನೋಡಲು ಸಾಧ್ಯವೇ? ಈ ತಿಂಗಳ ಇಪ್ಪತ್ತೆರಡನೆಯ ತಾರೀಖು ಬಾಲರಾಮನ ದರ್ಶನವನ್ನು ದೂರದರ್ಶನ ಅಥವಾ ಟಿವಿ ವಾಹಿನಿಗಳಲ್ಲಿ ನೋಡಿ ತೃಪ್ತಿಯನ್ನು ಹೊಂದೋಣ. ಮಂದಿರದ ನಿರ್ಮಾಣ ಸಂಪೂರ್ಣವಾಗಲಿ. ಆಗ ಶ್ರೀರಾಮನ ವಿಗ್ರಹದ ಪ್ರತಿಷ್ಠಾಪನೆಯೂ ಜರುಗುವುದು. ಪ್ರತಿದಿನವೂ ನಲವತ್ತು ಸಾವಿರ ಜನರು ಮಂದಿರದ ದರ್ಶನವನ್ನು, ಶ್ರೀರಾಮಚಂದ್ರನ ಸಾಕ್ಷಾತ್ಕಾರವನ್ನು ಆಗ ಕ್ರಮಶಃ ಪಡೆಯಬಹುದು. ಅದಕ್ಕಾಗಿ ತಾಳ್ಮೆಯಿಂದ ಕಾಯೋಣ. ರಾಜಕೀಯ ಧುರೀಣರು ಲಾಭ ಹಾನಿಗಳ ಲೆಕ್ಕಾಚಾರ ಮಾಡಿಕೊಳ್ಳಲಿ. ನಮಗೆ ಅದರ ಗೊಡವೆ ಬೇಡ. ಜನರ ಕಣ್ಣಿಗೆ ಹಬ್ಬವಾಗುವ ದೇವಾಲಯ ಸಿದ್ಧವಾಗುತ್ತಿದೆ. ಬದುಕಿನ ಅನಿವಾರ್ಯ ಜಂಜಾಟಗಳನ್ನು ಮರೆತು ಕ್ಷಣಕಾಲವಾದರೂ ಭಗವಂತನಲ್ಲಿ ಮನಸ್ಸನ್ನು ನಿಲ್ಲಿಸಲು ವೇದಿಕೆ ಸಿದ್ಧವಾಗುತ್ತಿದೆ. ಪಕ್ಷದ, ಬಣದ ಭೇದವಿಲ್ಲದೆ ಎಲ್ಲರೂ ಅದಕ್ಕಾಗಿ ದುಡಿದಿದ್ದಾರೆ. ನಮ್ಮದೂ ಅದರಲ್ಲಿ ಅಳಲಿನ ಸೇವೆ ಇದೆ. ನೆಮ್ಮದಿಯಿಂದ ರಾಮನ ದರ್ಶನವನ್ನು ಪಡೆದು ಧನ್ಯರಾಗೋಣ.

ಕಲ್ಯಾಣೋಲ್ಲಾಸಸೀಮಾ ಕಲಯತು ಕುಶಲಂ
ಕಾಲಮೇಘಾಭಿರಾಮಾ
ಕಾಚಿತ್ ಸಾಕೇತಧಾಮಾ ಭವಗಹನಗತಿಶ್ರಾಂತಿ ಹಾರಿ
ಪ್ರಣಾಮಾ।
ಸೌಂದರ್ಯಹ್ರೀಣಕಾಮಾ ಧೃತಜನಕಸುತಾ
ಸಾದರಾಪಾಂಗದಾಮಾ
ದಿಕ್ಷು ಪ್ರಖ್ಯಾತಭೂಮಾ ದಿವಿಷದಭಿನುತಾ ದೇವತಾ
ರಾಮನಾಮಾ॥

ಮೈಸೂರಲ್ಲಿ ಇಂದು ಕಂದಾಯ ಇಲಾಖೆ ಪ್ರಗತಿ ಪರಿಶೀಲನೆ



ಮೈಸೂರು, ಜ.16(ಆರ್‌ಕೆ)–ಕಂದಾಯ ಸಚಿವ ಕೃಷ್ಣಭೈರೇಗೌಡ ಅವರು ನಾಳೆ (ಜ.17) ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿ ಸಭಾಂಗಣದಲ್ಲಿ ತಮ್ಮ ಇಲಾಖೆಗೆ ಸಂಬಂಧಿಸಿದಂತೆ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಬುಧವಾರ ಬೆಳಗ್ಗೆ 11ಕ್ಕೆ ಮೈಸೂರಿಗೆ ಆಗಮಿಸಿ, ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಭೇಟಿ ನೀಡಿದ ಬಳಿಕ ಮಧ್ಯಾಹ್ನ 1.30ರಿಂದ ಸಂಜೆ 5ರವರೆಗೆ ಕಂದಾಯ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸುವರು. ಪ್ರಾದೇಶಿಕ ಆಯುಕ್ತ ಜಿ.ಸಿ.ಪ್ರಕಾಶ್, ಡಿಸಿ ಡಾ.ರಾಜೇಂದ್ರ, ಎಡಿಸಿ ಲೋಕನಾಥ್, ಉಪವಿಭಾಗಾಧಿಕಾರಿ ರಕ್ಷಿತ್, ತಹಶೀಲ್ದಾರ್ ಮಹೇಶ್, ಜಿಲ್ಲೆಯ ಎಲ್ಲಾ ಕಂದಾಯ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಳ್ಳುವರು. ರೈತರ ಭೂಮಿಗೆ ಸಂಬಂಧಿಸಿದ ಅರ್ಜಿಗಳ ವಿಲೇವಾರಿ, ಆರ್‌ಟಿಸಿ ತಿದ್ದುಪಡಿ, ಅಳತೆ ಹದ್ದುಬಸ್ತು ಅರ್ಜಿಗಳ ಪ್ರಗತಿ, ಭೂ ದಾಖಲಾತಿ, ಸಾಮಾಜಿಕ ಭದ್ರತಾ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ, ಸರ್ಕಾರಿ ಭೂಮಿ ಒತ್ತುವರಿ ತೆರವು, ಸ್ವತ್ತುಗಳ ಸಂರಕ್ಷಣೆ ಕುರಿತಂತೆ ಸುದೀರ್ಘ ಸಭೆ ನಡೆಸುವರು.

ಆಂಧ್ರಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ವೈ.ಎಸ್.ಶರ್ಮಿಳಾ ರೆಡ್ಡಿ ನೇಮಕ



ನವದೆಹಲಿ,ಜ.16–ಆಂಧ್ರಪ್ರದೇಶ ಮುಖ್ಯಮಂತ್ರಿ ವೈ.ಎಸ್.ಜಗನ್ ಮೋಹನ್ ರೆಡ್ಡಿ ಅವರ ಸಹೋದರಿ ವೈ.ಎಸ್.ಶರ್ಮಿಳಾ ಅವರನ್ನು ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ. ಶರ್ಮಿಳಾ ತಮ್ಮ ವೈಎಸ್‌ಆರ್ ತೆಲಂಗಾಣ ಪಕ್ಷವನ್ನು ಕಾಂಗ್ರೆಸ್‌ನೊಂದಿಗೆ ವಿಲೀನಗೊಳಿಸುವುದಾಗಿ ಘೋಷಿಸಿದ್ದರಿಂದ ಜ.4ರಂದು ಕಾಂಗ್ರೆಸ್‌ಗೆ ಸೇರಿದ್ದರು. ಆಂಧ್ರಪ್ರದೇಶದ ಅಧ್ಯಕ್ಷ ಸ್ಥಾನಕ್ಕೆ ಗಿಡುಗು ರುದ್ರರಾಜು ರಾಜೀನಾಮೆ ನೀಡಿದ ಒಂದು ದಿನದ ನಂತರ ಕಾಂಗ್ರೆಸ್ ಈ ನಿರ್ಧಾರ ಕೈಗೊಂಡಿದೆ. ಆಂಧ್ರಪ್ರದೇಶದ ನಿರ್ಗಮಿತ ಪಿಸಿಸಿ ಅಧ್ಯಕ್ಷ ರುದ್ರರಾಜು ಅವರನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ವಿಶೇಷ ಆಹ್ವಾನಿತರಾಗಿ ನೇಮಿಸಲಾಗಿದೆ ಎಂದು ಕಾಂಗ್ರೆಸ್ ಹೇಳಿಕೆಯಲ್ಲಿ ತಿಳಿಸಿದೆ. ತೆಲಂಗಾಣ ವಿಧಾನಸಭೆ ಚುನಾವಣೆಗೆ ಮುನ್ನ ತೆಲಂಗಾಣ ಮಾಜಿ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಅವರಿಗೆ ಲಾಭವಾಗಬಹುದಾದ ಮತಗಳ ವಿಭಜನೆ ತಡೆಯಲು ಶರ್ಮಿಳಾ ಅವರ ಪಕ್ಷ ಚುನಾವಣೆಯಲ್ಲಿ ಸ್ಪರ್ಧಿಸಿರಲಿಲ್ಲ. ನ.30ರಂದು ನಡೆದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ವೈಎಸ್‌ಆರ್‌ಟಿಪಿ ಬೆಂಬಲವನ್ನು ಚುನಾವಣೆಗೂ ಮುನ್ನವೇ ಶರ್ಮಿಳಾ ಘೋಷಿಸಿದ್ದರು.


ರಘು ಕೌಟಿಲ್ಯ ಅವರಿಗೆ ಅಭಿನಂದನೆ



ನವದೆಹಲಿಯ ಬಿಜೆಪಿ ಕೇಂದ್ರ ಕಚೇರಿಯಲ್ಲಿ ನಡೆದ ಓಬಿಸಿ ಮೋರ್ಚಾದ ರಾಷ್ಟ್ರೀಯ ಪದಾಧಿಕಾರಿಗಳು, ರಾಜ್ಯಾಧ್ಯಕ್ಷರ ಸಭೆಯಲ್ಲಿ ಕರ್ನಾಟಕದ ಓಬಿಸಿ ಮೋರ್ಚಾ ಅಧ್ಯಕ್ಷ ರಘು ಕೌಟಿಲ್ಯ ಅವರನ್ನು ಓಬಿಸಿ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಡಾ.ಲಕ್ಷ್ಮಣ್ ಆತ್ಮೀಯವಾಗಿ ಅಭಿನಂದಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ನಗರ ಪತ್ರಿಕಾ ವಿತರಕರ ಸಂಘದ 2024ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ



ಮೈಸೂರು ನಗರ ಪತ್ರಿಕಾ ವಿತರಕರ ಸಂಘದ 2024ನೇ ಸಾಲಿನ ಕ್ಯಾಲೆಂಡರ್ ಅನ್ನು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಹಾಗೂ ಮಾಜಿ ಸಚಿವ ಎಸ್.ಎ. ರಾಮದಾಸ್ ಅವರು ಕಳೆದ ಭಾನುವಾರ ಬನ್ನಿಮಂಟಪದ 'ಮೈಸೂರು ಮಿತ್ರ' ಕಚೇರಿಯಲ್ಲಿ ಬಿಡುಗಡೆ ಮಾಡಿದರು. ಈ ವೇಳೆ (ಎಡದಿಂದ) ಸಂಘದ ಕಾನೂನು ಸಲಹೆಗಾರ ಎನ್.ಚೆಲುವರಾಜು; ನಿರ್ದೇಶಕ ಎಂ.ಜೆ.ರಮೇಶ್; ಖಜಾಂಚಿ ಜೆ.ಲೋಕೇಶ್, ಪ್ರಧಾನ ಕಾರ್ಯದರ್ಶಿ ಎನ್.ಕೆ.ಸುಂದರ್; ಶಿವಪ್ರಸಾದ್; ಎಸ್.ಎ.ರಾಮದಾಸ್; ಡಾ.ಕೆ.ಬಿ.ಗಣಪತಿ; ಶಿವಲಿಂಗು; ಸಂಘದ ಅಧ್ಯಕ್ಷ ಬಿ.ಸುರೇಶ್ ಮತ್ತು ಉಪಾಧ್ಯಕ್ಷ ಜೆ.ನಾಗೇಶ್‌ಮೂರ್ತಿ ಅವರನ್ನು ಕಾಣಬಹುದು.

ಡಾ. ಕೆ.ಬಿ. ಗಣಪತಿ ಅವರಿಗೆ ಅಭಿನಂದನೆ



ಮೈಸೂರು ನಗರ ಪತ್ರಿಕಾ ವಿತರಕರ ಸಂಘದ ಗೌರವ ಅಧ್ಯಕ್ಷರೂ ಆದ ಮಾಜಿ ಸಚಿವ ಎಸ್.ಎ.ರಾಮದಾಸ್ ಅವರು ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪುರಸ್ಕೃತರಾದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ. ಗಣಪತಿ ಅವರನ್ನು ಕಳೆದ ಭಾನುವಾರ ಬನ್ನಿಮಂಟಪದಲ್ಲಿರುವ 'ಮೈಸೂರು ಮಿತ್ರ' ಕಚೇರಿಯಲ್ಲಿ ಸನ್ಮಾನಿಸಿದರು. ಚಿತ್ರದಲ್ಲಿ ಶಿವಪ್ರಸಾದ್; ಸಂಘದ ಅಧ್ಯಕ್ಷ ಬಿ.ಸುರೇಶ್; ಖಜಾಂಚಿ ಜೆ.ಲೋಕೇಶ್; 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪ್ರಸರಣಾಧಿಕಾರಿ ಟಿ.ಎಸ್.ಗೋಪಿನಾಥ್; ಸಂಘದ ಪ್ರಧಾನ ಕಾರ್ಯದರ್ಶಿ ಎನ್.ಕೆ.ಸುಂದರ್; ಕಾನೂನು ಸಲಹೆಗಾರ ಎನ್. ಚೆಲುವರಾಜ್; ಉಪಾಧ್ಯಕ್ಷ ಜೆ. ನಾಗೇಶ್‌ಮೂರ್ತಿ; ಶಿವಲಿಂಗು ಮತ್ತು ನಿರ್ದೇಶಕ ಎಂ.ಜೆ. ರಮೇಶ್ ಅವರನ್ನು ಕಾಣಬಹುದು.

ಕುವೆಂಪು ನಿವಾಸದಲ್ಲಿ ಗೀತೆ ಗಾಯನ; ರಸಋಷಿಯ ಅಂಗಳ ಬೆಳಗಿದ ಹಣತೆಗಳು

ಮೈಸೂರು, ಜ.16(ಎಸ್‌ಬಿಡಿ)– ರಾಷ್ಟ್ರಕವಿ ಕುವೆಂಪು ಅವರ ಮೈಸೂರು ನಿವಾಸ 'ಉದಯರವಿ', ಹಣತೆಗಳ ಬೆಳಕಲ್ಲಿ ಕಂಗೊಳಿಸಿದರೆ, ಮನೆಯ ಅಂಗಳದಲ್ಲಿ ಮೊಳಗಿದ ಕುವೆಂಪು ಗೀತೆಗಳ ಗಾಯನ ನೆರೆದಿದ್ದವರ ಹೃನ್ಮನ ತಣಿಸಿತು.

ಮೊದಲ ಬಾರಿಗೆ 'ಉದಯರವಿ' ನಿವಾಸದ ಅಂಗಳದಲ್ಲಿ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಹಾಗೂ ನೇಗಿಲಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ 'ದೀಪೋತ್ಸವ, ಕುವೆಂಪು ಗೀತೆಗಳ ಗಾಯನ ಹಾಗೂ ಕುವೆಂಪು ಜಯಂತಿ ಅಂಗವಾಗಿ ನಡೆಸಲಾಗಿದ್ದ ಕಾವ್ಯ ಗಾಯನ ವಿಜೇತರಿಗೆ ಬಹುಮಾನ ವಿತರಣೆ' ಕಾರ್ಯಕ್ರಮ ಈ ಸುಂದರ ಕ್ಷಣಕ್ಕೆ ವೇದಿಕೆಯಾಗಿತ್ತು.

'ಉದಯರವಿ' ಕಾಂಪೌಂಡ್ ಬಳಿ ಸ್ವಚ್ಛಗೊಳಿಸಿ, ರಂಗೋಲಿಯಿಂದ ಸಿಂಗರಿಸಿ, ನೂರಾರು ಹಣತೆಗಳನ್ನು ಬೆಳಗಲಾಯಿತು. ಇತ್ತ ಮನೆ ಆವರಣದಲ್ಲಿ ಗಾಯಕ ವಿದ್ವಾನ್ ಆರ್.ರಘು, ರಾಮಕೃಷ್ಣ ಪರಮಹಂಸರ ಮಡದಿ ಶ್ರೀ ಶಾರದಾದೇವಿ ಅವರನ್ನು ಕುರಿತು ಕುವೆಂಪು ಅವರು ರಚಿಸಿದ 'ಶ್ರೀ ಶಾರದಾ ದೇವಿ...' ಗೀತೆ, 'ಓ ನನ್ನ ಚೇತನ ಆಗು ನೀ ಅನಿಕೇತನ...', 'ತನುವು ನಿನ್ನದು ಮನವು ನಿನ್ನದು...', 'ಓಂ... ಹಾಲು ಹಳ್ಳ ಹರಿಯಲಿ, ಬೆಣ್ಣೆ ಬೆಟ್ಟವಾಗಲಿ, ಜೇನು ಮಳೆಯು ಸುರಿಯಲಿ... ಶಾಂತಿ ಜಗವ ತುಂಬಲಿ...' ಸೇರಿದಂತೆ ಹಲವು ಗೀತೆಗಳನ್ನು ಮನೋಜ್ಞವಾಗಿ ಹಾಡಿದರು. ಗಾಯನ ಸ್ಪರ್ಧಾ ವಿಜೇತ ಎ.ಸ್. ಪ್ರಕಾಶ್ 'ಬಾರಿಸು ಕನ್ನಡ ಡಿಂಡಿಮವ..' ಕವಿತೆಯನ್ನು ಶಾಸ್ತ್ರೀಯ ಶೈಲಿಯಲ್ಲಿ ಹಾಡಿ ಗಮನ ಸೆಳೆದರು. ಡಾ.ಸಿ.ಆರ್. ರಾಘವೇಂದ್ರ ಪ್ರಸಾದ್(ರಿದಂಪ್ಯಾಡ್), ವಿದ್ವಾನ್ ನಾಗರಾಜು ಎಸ್(ತಬಲ), ನಾಗಲಿಂಗು(ರಿದಂಪ್ಯಾಡ್) ಅವರು ವಾದ್ಯ ಸಹಕಾರ ನೀಡಿದರು.

ಈ ವಿಶೇಷ ಕಾರ್ಯಕ್ರಮಕ್ಕೆ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಚಾಲನೆ ನೀಡಿ ಮಾತನಾಡಿ, ಇದು ದಿವ್ಯ ಹಾಗೂ ಪವಿತ್ರ ದಿನ. ಈ ಹಿಂದೆ ಸಾಕಷ್ಟು ಬಾರಿ ಉದಯರವಿಗೆ ಬಂದು ಕುವೆಂಪು ಅವರೊಂದಿಗೆ ಜೊತೆ ಮಾತನಾಡಿದ್ದೇನೆ. ಆದರೆ ಇಂತಹ ವಿಶೇಷ ಕಾರ್ಯಕ್ರಮ ನಡೆಯುತ್ತಿರುವುದು ಇದೇ ಮೊದಲು. ನಾನೂ ಭಾಗಿಯಾಗಿದ್ದಕ್ಕೆ ತುಂಬಾ ಸಂತೋಷವಾಗಿದೆ. ಕುವೆಂಪು ಮಹಾಮಾನವ. ಶ್ರೀ ರಾಮಕೃಷ್ಣ ಪರಮಹಂಸರು ಹಾಗೂ ಶಾರದಾ ದೇವಿ ಅವರನ್ನು ಕುರಿತು ಬಹಳ ಪುಸ್ತಕಗಳಿವೆ. ಆದರೆ ಬಂಗಾಳಿಯಿಂದ ಕುವೆಂಪು ಅನುವಾದ ಮಾಡಿದ 'ಗುರುವಿನೊಡನೆ ದೇವರಡಿಗೆ' ಪುಸ್ತಕದ ಓದಿನಿಂದ ಧನ್ಯತೆ ಉಂಟಾಗುತ್ತಿದೆ ಎಂದರು.

ನೇಗಿಲಯೋಗಿ ಸಮಾಜಸೇವಾ ಟ್ರಸ್ಟ್ ಅಧ್ಯಕ್ಷ ರವಿಕುಮಾರ್ ಮಾತನಾಡಿ, ರಾಷ್ಟ್ರಕವಿ ಕುವೆಂಪು ಅವರ ಸಂದೇಶ ಸದಾ ಪ್ರಸ್ತುತ. ಇದು ಮುಂದೆ ಇನ್ನೂ ಗಟ್ಟಿಯಾಗಲಿದೆ. ಮೌಢ್ಯತೆ, ಜಾತೀಯತೆ ಇನ್ನಿತರ ಸಾಮಾಜಿಕ ಪಿಡುಗುಗಳ ಬಗ್ಗೆ ನೇರವಾಗಿ ಬರೆದು, ಮಾತನಾಡಿದ ಧೈರ್ಯಶಾಲಿ ಕುವೆಂಪು. ಅವರು ಪರಿಸರ ಪ್ರೇಮಿಯೂ ಆಗಿದ್ದರು. ಆದರೆ ಮೈಸೂರಿನಲ್ಲಿರುವ ಬಹುತೇಕರಿಗೆ ಕುವೆಂಪು ಅವರ ಮನೆ ಎಲ್ಲಿದೆ ಎನ್ನುವುದೇ ಗೊತ್ತಿಲ್ಲ 'ಉದಯರವಿ' ಮನೆ ವಿಶ್ವ ಪ್ರಸಿದ್ಧಿಯಾಗಬೇಕು. ಈ ನಿಟ್ಟಿನಲ್ಲಿ ಇಂದು ದೀಪೋತ್ಸವ ಹಾಗೂ ಕುವೆಂಪು ಗೀತೆಗಳ ಗಾಯನದ ಜೊತೆಗೆ ನೇಗಿಲಯೋಗಿ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಕುವೆಂಪು ಗೀತ ಗಾಯನ ಸ್ಪರ್ಧಾ ವಿಜೇತರಿಗೆ ಈ ಪುಣ್ಯ ಸ್ಥಳದಲ್ಲೇ ಬಹುಮಾನ ವಿತರಿಸಲಾಗುತ್ತಿದೆ ಎಂದು ಉದಯರವಿ ಆವರಣದಲ್ಲಿ ಕಾರ್ಯಕ್ರಮ ಆಯೋಜಿಸಿದ್ದ ಉದ್ದೇಶ ತಿಳಿಸಿದರು.

ಇದೇ ವೇಳೆ ಸ್ಪರ್ಧೆಯ ನಾಲ್ಕು ವಿಭಾಗಗಳಲ್ಲಿ ವಿಜೇತರಾದ 14 ಮಂದಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಕುವೆಂಪು ವಿವಿ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ(ಕುವೆಂಪು ಅಳಿಯ), ಸಾಹಿತಿ ಶ್ರೀಮತಿ ತಾರಿಣಿ ಚಿದಾನಂದಗೌಡ(ಕುವೆಂಪು ಪುತ್ರಿ), ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ನೇಗಿಲಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷೆ ಜೆ.ಶೋಭಾ ಮತ್ತಿತರರು ಭಾಗವಹಿಸಿದ್ದರು.



ಮೈಸೂರಿನ ವಿವಿ ಪುರಂನಲ್ಲಿರುವ ರಾಷ್ಟ್ರಕವಿ ಕುವೆಂಪು ಮನೆ 'ಉದಯರವಿ' ಆವರಣದಲ್ಲಿ ಆಯೋಜಿಸಿದ್ದ ಕುವೆಂಪು ಗೀತೆಗಳ ಗಾಯನ ಹಾಗೂ ದೀಪೋತ್ಸವ ಕಾರ್ಯಕ್ರಮದಲ್ಲಿ ಗಣ್ಯರು ಕುವೆಂಪು ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು.



ಗಾಯನದಲ್ಲಿ ತಲ್ಲೀನರಾಗಿರುವ ವಿದ್ವಾನ್ ರಘು.



ಕವಿಮನೆ ಮುಂಭಾಗ ಬೆಳಗಿದ ಹಣತೆಗಳು

ಇಂದು ರಾಷ್ಟ್ರೀಯ ಯುವ ದಿನಾಚರಣೆ–2024

ಮೈಸೂರು,ಜ.16–ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ವತಿಯಿಂದ ಐಕ್ಯೂಎಸಿ ಮತ್ತು ಯುವ ರೆಡ್ ಕ್ರಾಸ್ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಸಹಯೋಗದೊಂದಿಗೆ ಜ.17ರಂದು ಬೆಳಗ್ಗೆ 10 ಗಂಟೆಗೆ ಕಾಲೇಜಿನ ಕಲಾಮಂಟಪದಲ್ಲಿ 'ರಾಷ್ಟ್ರೀಯ ಯುವ ದಿನಾಚರಣೆ 2023–24' ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ನ್ಯಾ. ಪ್ರಭಾವತಿ ಎಂ. ಹಿರೇಮಠ್ ಉದ್ಘಾಟಿಸಲಿದ್ದು, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಅಬ್ದುಲ್ ರಹಿಮಾನ್ ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ನ್ಯಾ.ದಿನೇಶ್ ಬಿ.ಜಿ. ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.



ಬುಧವಾರ ಉದ್ಘಾಟನೆಗೊಳ್ಳಲಿರುವ ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕಿನ ಸಂಗೊಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆ, ಶೌರ್ಯ ಭೂಮಿ, ಸ್ಮಾರಕ ಭವನ ಮತ್ತು ಭೋಜನಾಲಯದ ಅಂತಿಮ ಸಿದ್ಧತೆಗಳನ್ನು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ವೀಕ್ಷಿಸಿದರು. ಇದೇ ವೇಳೆ ಮಾಜಿ ಶಾಸಕ ಎಂಕೆ.ಸೋಮಶೇಖರ್ ಇನ್ನಿತರರು ಉಪಸ್ಥಿತರಿದ್ದರು.

ಸಮಿತಿ ಸದಸ್ಯರ ನಾಮನಿರ್ದೇಶನಕ್ಕೆ ಅರ್ಜಿ ಆಹ್ವಾನ

ಮೈಸೂರು, ಜ.16– ಆಟಿಸಂ, ಮಿದುಳಿನ ಪಾರ್ಶ್ವವಾಯು, ಬುದ್ಧಿಮಾಂದ್ಯತೆ ಹಾಗೂ ಬಹುವಿಧ ಅಂಗವಿಕಲತೆ ಹೊಂದಿರುವ ವ್ಯಕ್ತಿಗಳ ಕ್ಷೇಮಾಭಿವೃದ್ಧಿಗಾಗಿ ಭಾರತ ಸರ್ಕಾರವು ನ್ಯಾಷನಲ್ ಟ್ರಸ್ಟ್ ಆಕ್ಟ್ 1999 ಅನ್ನು ಜಾರಿಗೆ ತಂದಿದ್ದು, ನ್ಯಾಷನಲ್ ಟ್ರಸ್ಟ್ ಆಕ್ಟ್ 1999ರಡಿಯಲ್ಲಿ ನೊಂದಣಿಯಾಗಿರುವ ವ್ಯಕ್ತಿ, ಸಂಸ್ಥೆಗಳಿಂದ ಜಿಲ್ಲಾ ಸ್ಥಳೀಯ ಮಟ್ಟದ ಸಮಿತಿಗೆ ಸದಸ್ಯರನ್ನು ನಾಮನಿರ್ದೇಶನ ಮಾಡಲು ಅರ್ಜಿ ಅಹ್ವಾನಿಸಲಾಗಿದೆ. ಅರ್ಹ ವ್ಯಕ್ತಿ, ಸಂಸ್ಥೆಗಳು ಜನವರಿ 22ರೊಳಗಾಗಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಯ ಜಿಲ್ಲಾ ಕಚೇರಿ ಅಥವಾ ದೂರವಾಣಿ ಸಂ. 0821–2490333 ಅನ್ನು ಸಂಪರ್ಕಿಸಬಹುದಾಗಿದೆ ಎಂದು ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿದ್ದರಾಮಯ್ಯನವರೇ ಸಂಸ್ಕೃತಿ, ಸಭ್ಯತೆ ಬಗ್ಗೆ ಮಾತಾಡುವುದಾದರೆ ನನ್ನ ಎದುರು ಮಾತಾಡಿ

ಶಿರಸಿ,ಜ.16–ಉತ್ತರ ಕನ್ನಡ ಸಂಸದ ಅನಂತ್‌ಕುಮಾರ್ ಹೆಗಡೆ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯನವರ ನಡುವಿನ ವಾದ–ವಿವಾದ ಹೆಚ್ಚಾಗುತ್ತಿದೆ ನನ್ನ ಮಾತನ್ನು ವಿರೋಧಿಸುವವರು ನನ್ನ ಮುಂದೆ ಬಂದು ಸಂಸ್ಕೃತಿ ಬಗ್ಗೆ ಚರ್ಚೆ ಮಾಡಲಿ. ಅವರಿಗೆ ಸಭ್ಯತೆ ಅಂದರೆ ಏನು ಎಂದು ನಾನು ಪಾಠ ಮಾಡುತ್ತೇನೆ. ಸಂಸ್ಕೃತಿ ಬಗ್ಗೆ ಸಿದ್ದರಾಮಯ್ಯ ನನ್ನ ಎದುರು ಬಂದು ಮಾತನಾಡಲಿ. ಏನೂ ಮಾತನಾಡಬೇಕು ಅಂತ ನಾನು ಹೇಳುತ್ತೇನೆ. ಯಾರಿಗೆ ಯಾವ ಭಾಷೆಯಲ್ಲಿ ಹೇಗೆ ಮಾತಾಡಬೇಕು ಹಾಗೆ ಮಾತಾಡಬೇಕು. ಸಭ್ಯತೆ ಅಂದರೆ ಏನು ಎಂಬುದನ್ನು ಮೊದಲು ಕಾಂಗ್ರೆಸ್‌ನವರು ತಿಳಿದುಕೊಳ್ಳಲಿ ಎಂದು ಸಂಸದ ಅನಂತಕುಮಾರ್ ಹೆಗಡೆ ಮತ್ತೊಮ್ಮೆ ವಾಗ್ದಾಳಿ ನಡೆಸಿದ್ದಾರೆ.



ಶಿರಸಿಯ ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಕಳೆದ ಚುನಾವಣೆಯಲ್ಲಿ ಪ್ರಧಾನಿ ಮೋದಿಯವರಿಗೆ ಏಕವಚನದಲ್ಲಿ ಮಾಸ್ ಮರ್ಡರ್ ಎಂದು ಕರೆದರು. ಅವರಿಗೊಂದು ನ್ಯಾಯ ನಮಗೊಂದು ನ್ಯಾಯನಾ..? ಯಾರಿಗೆ ಹೇಗೆ ಮಾತಾಡಬೇಕು ನಮಗೆ ಗೊತ್ತು. ಬೇಕಿದ್ದರೆ ಜನರ ಮುಂದೆ ಚರ್ಚೆ ಮಾಡೋಣ. ಎಲ್ಲೊ ಕೂತುಕೊಂಡು ಮಾತನಾಡುವುದು ಸರಿ ಅಲ್ಲ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ತಾವು ಏಕವಚನ ಪ್ರಯೋಗ ಮಾಡಿರುವ ವಿಚಾರವಾಗಿ ಉಂಟಾಗಿರುವ ವಿವಾದ ಬಗ್ಗೆ ಪ್ರತಿಕ್ರಿಯಿಸಿದ ಅವರು, ನನ್ನ ಹೇಳಿಕೆಯನ್ನು ಖಂಡಿಸುವುದು ಸಹಜ. ಇದು ನನ್ನ ಹೇಳಿಕೆ ಇದು ಪಕ್ಷದ ಹೇಳಿಕೆ ಅಲ್ಲ. ಇದು ನನ್ನ ವೈಯಕ್ತಿಕ ಹೇಳಿಕೆ. ರಾಜ್ಯಾಧ್ಯಕ್ಷ ವಿಜಯೇಂದ್ರ ಹೇಳಿರುವ ಮಾತು ಸರಿ ಇದೆ ಎಂದು ಸ್ಪಷ್ಟಪಡಿಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಪ್ರಧಾನಿ ಮೋದಿಯವರ ಮತ್ತು ನಮ್ಮ ದೇವಸ್ಥಾನಗಳ ಬಗ್ಗೆ ಸಿಎಂ ಸಿದ್ದರಾಮಯ್ಯ ಅಸಭ್ಯವಾಗಿ ಮೊದಲು ಮಾತನಾಡಿದ್ದಾರೆ. ನಮ್ಮ ದೇವಸ್ಥಾನದ ಬಗ್ಗೆ ಅಷ್ಟು ಕೀಳಾಗಿ ಮಾತನಾಡುವುದು ಯಾಕೆ ಬೇಕಿತ್ತು, ನಮ್ಮ ಪ್ರಧಾನಿ ಮೋದಿ, ಅಮಿತ ಶಾ ಬಗ್ಗೆ ಯಾರೆಲ್ಲ ಏನು ಏನು ಮಾತನಾಡಿದ್ದಾರೆ ಹೇಳಬೇಕಾ ಎಂದು ಕೇಳಿದರು.

ಜಾತ್ಯತೀತತೆಯಲ್ಲಿ ನಮಗೂ ನಂಬಿಕೆಯಿದೆ, ಆದರೆ ಕಾಂಗ್ರೆಸ್‌ನ ಕೆಲವು ನಾಯಕರು ಮೊದಲು ಸಮಾಜಕ್ಕೆ ಜನರಿಗೆ ಗೌರವ ಕೊಟ್ಟು ಮಾತನಾಡುವುದನ್ನು ಕಲಿಯಲಿ ಎಂದು ಅನಂತ್‌ಕುಮಾರ್ ಹೆಗಡೆ ಹೇಳಿದರು.

ವಿ.ಶೈಲೇಂದ್ರಗೆ ಚಿನ್ನದ ಪದಕ




ಮೈಸೂರು,ಜ.16–ಡಿಸೆಂಬರ್ 26ರಿಂದ ಜ.5ರವರೆಗೆ ಹೈದರಾಬಾದ್‌ನ ಸ್ ದರ್ದಾರ್ ವಲ್ಲಭಬಾಯ್ ಪಟೇಲ್ ನ್ಯಾಷನಲ್ ಪೊಲೀಸ್ ಅಕಾಡೆಮಿಯಲ್ಲಿ ನಡೆದ 42ನೇ ಅಖಿಲ ಭಾರತ ಪೊಲೀಸ್ ಈಕ್ವೆಸ್ಟ್ರಿಯನ್ ಚಾಂಪಿಯನ್‌ಷಿಪ್ ಮತ್ತು ಮೌಂಟೆಡ್ ಪೊಲೀಸ್ ಕರ್ತವ್ಯ ಕೂಟ–2023ರಲ್ಲಿ ಮೈಸೂರಿನ ಕೆಎಆರ್‌ಪಿ ಮೌಂಟೆಡ್ ಕಂಪನಿ. ಕಮಾಂಡೆಂಟ್ ವಿ.ಶೈಲೇಂದ್ರ 'ಹ್ಯಾಕ್ಸ್' (Hacks) ಸ್ಪರ್ಧೆಯಲ್ಲಿ ರಾಷ್ಟ್ರ ಮಟ್ಟದ ಸ್ಪರ್ಧೆಯಲ್ಲಿ ರಾಜ್ಯ ಪೊಲೀಸ್ ತಂಡವನ್ನು ಪ್ರತಿನಿಧಿಸಿ ವೈಯಕ್ತಿಕ ವಿಭಾಗದಲ್ಲಿ 'ಚಿನ್ನದ ಪದಕ' ಪಡೆದಿದ್ದಾರೆ.

ಮಂಗಳೂರಲ್ಲಿ ಚಾಲಕ ಬ್ರೇಕ್ ಹಾಕಿದ ರಭಸಕ್ಕೆ ಬಸ್‌ನಿಂದ ಹೊರಗೆ ಹಾರಿದ ಮಹಿಳೆ ಸಾವು!

ಮಂಗಳೂರು, ಜ.16– ಖಾಸಗಿ ಬಸ್ ಚಾಲಕನ ಅತಿರೇಕ ಹಾಗೂ ನಿರ್ಲಕ್ಷ್ಯದ ಚಾಲನೆಯಿಂದ ಬಸ್ಸಿನಿಂದ ಕೆಳಗೆ ಬಿದ್ದ ವೃದ್ಧೆಯೊಬ್ಬರು ಸಾವನ್ನಪ್ಪಿರುವ ಘಟನೆ ಮಂಗಳೂರು ನಗರದ ಹೊರವಲಯದ ಜೋಕಟ್ಟೆ ಬಳಿ ನಡೆದಿದೆ. 65 ವರ್ಷದ ಈರಮ್ಮ ಎಂಬ ಮಹಿಳೆ ತನ್ನ ಮಗಳೊಂದಿಗೆ ಖಾಸಗಿ ಬಸ್‌ನಲ್ಲಿ ಸುರತ್ಕಲ್‌ಗೆ ತೆರಳುತ್ತಿದ್ದರು. ಬೆಳಗ್ಗೆ 10 ಗಂಟೆ ಸುಮಾರಿಗೆ ಜೋಕಟ್ಟೆ ಕ್ರಾಸ್ ಬಳಿಯ ಸರ್ವೀಸ್ ಸ್ಟೇಷನ್‌ಗೆ ಬಸ್ ತಲುಪಿದಾಗ, ಬಸ್‌ನ ಚಾಲಕ ಏಕಾಏಕಿ ಬ್ರೇಕ್ ಹಾಕಿದ್ದರಿಂದ ಚಾಲಕನ ಪಕ್ಕದಲ್ಲಿ ಮುಂದಿನ ಸೀಟಿನಲ್ಲಿ ಕುಳಿತಿದ್ದ ಈರಮ್ಮ ಬಸ್‌ನಿಂದ ಕೆಳಗೆ ಬಿದ್ದಿದ್ದಾರೆ. ಬಸ್ಸಿನ ಹಿಂಬದಿಯ ಚಕ್ರ ಈರಮ್ಮ ಅವರ ಮೇಲೆ ಹರಿದ ಪರಿಣಾಮ ತಲೆಗೆ ತೀವ್ರ ಪೆಟ್ಟಾಗಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಮಂಗಳೂರು ಸಂಚಾರ ಪೊಲೀಸರು ಬಸ್ ಚಾಲಕ ಅನಿಲ್ ಜಾನ್ ಲೋಬೋ ವಿರುದ್ಧ ಅತಿವೇಗ ಮತ್ತು ನಿರ್ಲಕ್ಷ್ಯದ ಚಾಲನೆಗಾಗಿ ಪ್ರಕರಣ ದಾಖಲಿಸಿದ್ದಾರೆ. ಮಂಗಳೂರು ಸಂಚಾರ ಉತ್ತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ

ಎನ್.ಶಿವಶಂಕರ್



ಮೈಸೂರು,ಜ.16–ಮೈಸೂರು ರಾಮಾನುಜ ರಸ್ತೆ ನಿವಾಸಿ ದಿವಂಗತ ಎಂ.ನಂಜುಂಡಪ್ಪ ಅವರ ಪುತ್ರ ಎನ್.ಶಿವಶಂಕರ್(87) ಇಂದು ಬೆಳಗ್ಗೆ ಮೈಸೂರಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ನಿಧನರಾದರು. ಕೆಲವು ದಿನಗಳಿಂದ ಅನಾರೋಗ್ಯಪೀಡಿತರಾಗಿದ್ದ ಇವರು ಪತ್ನಿ ಶ್ರೀಮತಿ ಸರೋಜಮ್ಮ, ನಾಲ್ವರು ಪುತ್ರರು, ಓರ್ವ ಪುತ್ರಿ, 7 ಮಂದಿ ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬನ್ನಿಮಂಟಪದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಸ್.ಮಹದೇವಸ್ವಾಮಿ



ಕೃಷಿ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕ ಹಾಗೂ ಮೈಸೂರಿನ ಟಿ.ಕೆ.ಲೇಔಟ್ ಬಡಾವಣೆ ನಿವಾಸಿ ಎಸ್.ಮಹದೇವಸ್ವಾಮಿ (68) ಸೋಮವಾರ ನಿಧನರಾದರು. ಇವರು ಪತ್ನಿ ಎಸ್.ಪದ್ಮಾವತಿ, ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ವಿಜಯನಗರ ನಾಲ್ಕನೇ ಹಂತದ ಮುಕ್ತಿಧಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ಹೇಳಿವೆ.

ಮೈಸೂರು ನಗರ, ಜನರ ಬಗ್ಗೆ ಅಧಿಕಾರಿಗಳಿಗೆ ನಿರಾಸಕ್ತಿ

ಜ.20ರಂದು ನಗರಪಾಲಿಕೆ ಕಚೇರಿ ಮುಂದೆ ಗ್ರಾಹಕರ ಪರಿಷತ್ ಮೌನ ಪ್ರತಿಭಟನೆ

ಮೈಸೂರು, ಜ.16(ಎಸ್‌ಪಿಎನ್)– ಪ್ರಜಾಪ್ರಭುತ್ವದಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಬೇಕಾಗಿರುವುದು ಸರ್ಕಾರಿ ಅಧಿಕಾರಿಗಳ ಕರ್ತವ್ಯ. ಆದರೆ, ಇತ್ತೀಚಿನ ದಿನಗಳಲ್ಲಿ ಮೈಸೂರು ನಗರ ಪಾಲಿಕೆ ಆಯುಕ್ತರೂ ಸೇರಿದಂತೆ ಯಾವುದೇ ಇಲಾಖೆ ಅಧಿಕಾರಿಗಳು ಮೈಸೂರು ನಗರದ ಸಮಸ್ಯೆಗಳ ಗಮನ ಹರಿಸದೇ, ಸಾರ್ವಜನಿಕ ಕುಂದು–ಕೊರತೆ ಆಲಿಸದೆ ಇರುವ ಬಗ್ಗೆ ಮೈಸೂರು ಗ್ರಾಹಕರ ಪರಿಷತ್(ಮೈಗ್ರಾಪ) ಬೇಸರ ವ್ಯಕ್ತಪಡಿಸಿದ್ದು, ಜ.20ರಂದು ಮೌನ ಪ್ರತಿಭಟನೆ ನಡೆಸಲು ತೀರ್ಮಾನಿಸಿದೆ.


ಮೈಸೂರಿನ ಯಾದವಗಿರಿಯಲ್ಲಿರುವ ಮೈಸೂರು ಗ್ರಾಹಕರ ಪರಿಷತ್ (ಮೈಗ್ರಾಪ)ನಲ್ಲಿ ನಡೆದ ಸರ್ವ ಸದಸ್ಯರ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಭಾಮೀ ವಿ.ಶೆಣೈ, ಮೈಸೂರು ಪಾಲಿಕೆ ಸಾರ್ವಜನಿಕ ಕುಂದು–ಕೊರತೆಗಳನ್ನು ಆಲಿಸುತ್ತಿಲ್ಲ. ಉದ್ಯಾನವನ ಒತ್ತುವರಿ ತೆರವು, ವೈಜ್ಞಾನಿಕ ರೀತಿ ಅಭಿವೃದ್ಧಿ, ಫುಟ್‌ಪಾತ್ ತೆರವು ಸೇರಿದಂತೆ ಇತರೆ ಸಮಸ್ಯೆಗಳ ಕುರಿತು ಪಾಲಿಕೆ ಆಯುಕ್ತರ ಗಮನಕ್ಕೆ ತರಲು ಪ್ರಯತ್ನಿಸಿದರೆ, ಆಯುಕ್ತರೂ ಸೇರಿದಂತೆ ಯಾರೂ ದೂರವಾಣಿ ಕರೆ ಸ್ವೀಕರಿಸುತ್ತಿಲ್ಲ. ಕಚೇರಿಯಲ್ಲಿ ಭೇಟಿ ಮಾಡಲು ಸಮಯ ನಿಗದಿಗೊಳಿಸಿ ಹೋದರೆ, ಗಂಟೆಗಟ್ಟಲೇ ಕಾಯಿಸುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಪಾರ್ಕ್‌ಗಳಲ್ಲಿ ಕಟ್ಟಡಗಳನ್ನು ಕಟ್ಟುವಂತಿಲ್ಲ. ಹಸರೀಕರಣಕ್ಕೆ ಮಾತ್ರ ಒತ್ತು ನೀಡಬೇಕು ಎಂಬ ನಿಯಮವಿದ್ದರೂ ಅಧಿಕಾರಿಗಳು ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ, ಉದ್ಯಾನವನಗಳಲ್ಲಿ ಕಟ್ಟಡ ಕಾಮಗಾರಿಗಳನ್ನು ಹಮ್ಮಿಕೊಳ್ಳಲು ಮುಂದಾಗುತ್ತಿದ್ದಾರೆ ಎಂದು ಮೈಗ್ರಾಪ ಸದಸ್ಯ ಕಿರಣ್ ಸಭೆಯ ಗಮನಕ್ಕೆ ತಂದರು.

ಜ.20ರಂದು ಮೌನ ಪ್ರತಿಭಟನೆ: ಮೈಗ್ರಾಪ ಎಂದಿಗೂ ವೈಯುಕ್ತಿಕ ಕೆಲಸಗಳಿಗೆ ಆದ್ಯತೆ ನೀಡುವುದಿಲ್ಲ. ಮೈಸೂರು ಅಭಿವೃದ್ಧಿ ಕುರಿತು ಪರಿಷತ್‌ಗೆ ಸ್ಪಷ್ಟ ಕಲ್ಪನೆ ಇದೆ. ಪ್ಲಾಸ್ಟಿಕ್ ನಿಷೇಧ, ಉದ್ಯಾನವನ ಅಭಿವೃದ್ಧಿ ಮತ್ತು ಒತ್ತುವರಿ ತೆರವು ಪ್ರಕರಣಗಳು, ಮೈಸೂರಿನ ಹಸರೀಕರಣ, ನಗರ ಪ್ರದೇಶದ ಕೆರೆಗಳ ಒತ್ತುವರಿ ಬಗ್ಗೆ ಅಧಿಕಾರಿಗಳು ಸರಿಯಾಗಿ ಸ್ಪಂದಿಸುತ್ತಿಲ್ಲ. ಹಾಗಾಗಿ ಜ.20ರಂದು ಮೈಸೂರು ನಗರ ಪಾಲಿಕೆ ಮುಂದೆ ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆ ವಿರೋಧಿಸಿ, ಮೌನ ಪ್ರತಿಭಟನೆ ನಡೆಸುವ ಬಾಮೀ ವಿ.ಶೆಣೈ ಅವರ ಅಭಿಪ್ರಾಯಕ್ಕೆ ಸದಸ್ಯರು ಒಕ್ಕೊರಲ ಒಮ್ಮತ ಸೂಚಿಸಿದರು.



ಮೈಸೂರಿನ ಯಾದವಗಿರಿಯಲ್ಲಿರುವ ಮೈಸೂರು ಗ್ರಾಹಕರ ಪರಿಷತ್ (ಮೈಗ್ರಾಪ)ನಲ್ಲಿ ಸರ್ವ ಸದಸ್ಯರ ಸಭೆ ನಡೆಯಿತು.



ಮೈಸೂರಿನ ನ್ಯೂ ಕಾಂತರಾಜೇ ಅರಸ್ ರಸ್ತೆಯಲ್ಲಿ ಬೀದಿಬದಿ ವ್ಯಾಪಾರಿಗಳು ರಸ್ತೆಯಲ್ಲಿ ವ್ಯಾಪಾರ ಮಾಡುತ್ತಿರುವ ದೃಶ್ಯ.

ಮೈಗ್ರಾಪ ಟ್ರಸ್ಟ್ ಆಗಿ ಪರಿವರ್ತಿಸಲು ತೀರ್ಮಾನ

ಆಧುನಿಕತೆ ಜೊತೆ ಜೊತೆಗೆ ಸಾಗುತ್ತಿರುವ ಇತ್ತೀಚಿನ ಯುವಕರಲ್ಲಿ ಗ್ರಾಹಕ ಚಳವಳಿಗಳಲ್ಲಿ ಆಸಕ್ತಿ ಹೊಂದಿರುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಜೊತೆಗೆ ಯುವಕರಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ಗ್ರಾಹಕರ ಚಳವಳಿಯಲ್ಲಿ ಭಾಗಿಯಾಗಲು ಇಚ್ಛಾಸಕ್ತಿ ತೋರುತ್ತಿಲ್ಲ. ಹಾಗಾಗಿ ಮೈಸೂರು ಗ್ರಾಹಕರ ಪರಿಷತ್ ಕಾರ್ಯ ವೈಖರಿಯನ್ನು ಯಥಾಸ್ಥಿತಿ ಉಳಿಸಿಕೊಂಡು ಒಂಬತ್ತು ಮಂದಿ ತಜ್ಞರ ಸಹಯೋಗದಲ್ಲಿ ಟ್ರಸ್ಟ್ ಆಗಿ ಪರಿವರ್ತಿಸುವ ಕುರಿತು ಬಾಮೀ ವಿ.ಶೆಣೈ ಅವರ ಸಲಹೆಗೆ ಸರ್ವ ಸದಸ್ಯರು ಒಕ್ಕೊರಲ ಒಮ್ಮತ ಸೂಚಿಸಿದರು.

ಫುಟ್‌ಪಾತ್ ತೆರವುಗೊಳಿಸಿ: ನ್ಯೂ ಕಾಂತರಾಜೇ ಅರಸ್ ರಸ್ತೆಯ ಮೈಸೂರು ದಿಗಂತ ವೃತ್ತದ ಸಮೀಪ ಬೆಳಗ್ಗೆ 9ರಿಂದ 10 ಗಂಟೆ ಹಾಗೂ ಸಂಜೆ 5ರಿಂದ 8ರವರೆಗೆ ನಿತ್ಯ ಟ್ರಾಫಿಕ್ ಜಾಮ್ ಆಗುತ್ತಿದೆ. ಈ ವೃತ್ತದಲ್ಲಿ ನಾಲ್ಕೈದು ಸಾರಿಗೆ ಬಸ್‌ಗಳು ಒಮ್ಮೆಗೆ ಬಂದಾಗ ಟ್ರಾಫಿಕ್ ಜಾಮ್ ಆಗಿ ವಾಹನಗಳು, ಯಾವ ಕಡೆಗೂ ಸಾಗದೇ ತಾಸುಗಟ್ಟಲೇ ಟ್ರಾಫಿಕ್ ಜಾಮ್ ಉಂಟಾಗುತ್ತದೆ. ಅಲ್ಲದೆ, ನ್ಯೂ ಕಾಂತರಾಜೇ ಅರಸ್ ರಸ್ತೆಯ ಶಾರದಾದೇವಿ ವೃತ್ತದ ಕಡೆಗೆ ಹೋಗುವ ಮಾರ್ಗದ ಎಡಬದಿಯಲ್ಲಿ ಬೀದಿಬದಿ ವ್ಯಾಪಾರಿಗಳು ರಸ್ತೆ ಕೆಳಗೆ ತಳ್ಳುವ ಗಾಡಿ, ಆಪೇ ಆಟೋಗಳನ್ನು ನಿಲ್ಲಿಸಿಕೊಂಡು ವ್ಯಾಪಾರ ಮಾಡುತ್ತಿರುವುದರಿಂದಲೂ ಟ್ರಾಫಿಕ್ ಜಾಮ್ ಆಗುತ್ತಿದೆ. ಇಲ್ಲಿನ ಸಮಸ್ಯೆ ಕುರಿತು ಭಾವಚಿತ್ರ ಸಮೇತ 'ಮೈಸೂರು ಮಿತ್ರ'ನಿಗೆ ಸದಸ್ಯರೊಬ್ಬರು ಮಾಹಿತಿ ನೀಡಿದರು.

ಶ್ರದ್ಧಾಂಜಲಿ: ಸಭೆಗೂ ಮೊದಲು ಮೈಗ್ರಾಪ ಮಾಜಿ ಕಾರ್ಯದರ್ಶಿ ಮೋಹನ್‌ದಾಸ್ ಎಂ.ಶೆಣೈ, ಕಾರ್ಯಕಾರಿ ಸಮಿತಿ ಮಾಜಿ ಸದಸ್ಯ ಮೇಜರ್ ಜನರಲ್ ಕರಂಬಯ್ಯ ಅವರ ನಿಧನಕ್ಕೆ ಒಂದು ನಿಮಿಷ ಮೌನಾಚರಣೆ ಮಾಡಿ, ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸಭೆಯಲ್ಲಿ ಮೈಗ್ರಾಪ ಸದಸ್ಯರಾದ ಭಾಮಿ ವಿ.ಶೆಣೈ, ರೇಣು ಅಗ್ರವಾಲ್, ರೂಪ ಪಾಲಾಕ್ಷ, ಎಂ.ಜಾನಕಿ ರಾಮನ್, ಫೈರ್ಝುನ್ ಬಾಷ, ವಿ.ಎಸ್.ಸೇತುರಾಮ, ಎಸ್.ವಿ.ಶೇಖರ್, ಕಿರಣ್, ಅರ್ಚನ, ಬಿ.ಎಸ್.ಸೋಮಶೇಖರ, ಕೌಸರ್, ಡಾ.ಜಿ. ಪಾಂಡುರಂಗ ಮೂರ್ತಿ, ಡಾ.ಡಿ.ಎಸ್. ಚಂದ್ರಶೇಖರ್, ರವಿಶಂಕರ್, ಪ್ರೊ.ಎನ್. ಎಸ್.ರಂಗರಾಜು, ಡಿ.ವಿ. ದಯಾನಂದ ಸಾಗರ್, ಶೋಭನಾ, ಎಂ.ಎಸ್.ಶಿವಕುಮಾರ್ ಸ್ವಾಮಿ, ಕೆ.ವಿ.ರಾಮನಾಥ್, ಕೆ.ವಿ.ಭಾನುಪ್ರಶಾಂತ್, ವಿ.ಭದ್ರಿ, ಜಿ.ವಿ. ಸಂತೋಷಕುಮಾರ್ ಇತರರಿದ್ದರು.

ಮೈಸೂರು ಮಿತ್ರ

ಬುಧವಾರ 17 ಜನವರಿ 2024

ಶಿಕ್ಷಣ ಕ್ಷೇತ್ರದಲ್ಲಿ ಆದಿಚುಂಚನಗಿರಿ ಮಠದ ಸಾಧನೆ ಅಗ್ರಗಣ್ಯ

ಮೀನುಗಾರಿಕೆ ಸಚಿವ ಮಂಕಾಳ ವೈದ್ಯ ಶ್ಲಾಘನೆ



ನಾಗಮಂಗಲ ತಾಲೂಕಿನ ಆದಿಚುಂಚನಗಿರಿಯಲ್ಲಿ ನಡೆದ ಯೋಗಿ–ಜೋಗಿ ಸಂಗಮ ಕಾರ್ಯಕ್ರಮವನ್ನು ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು.

ಶ್ರೀಗಳ ಆಶೀರ್ವಾದದಿಂದ ಜಾತ್ಯತೀತವಾಗಿ ಸಹಸ್ರಾರು ಯೋಗಿ ಮತ್ತು ಜೋಗಿಗಳನ್ನು ಒಟ್ಟಿಗೆ ಸೇರಿಸುವುದು ಪುಣ್ಯದ ಕೆಲಸ. ಐತಿಹಾಸಿಕ ಪರಂಪರೆ ಹೊಂದಿರುವ ಶ್ರೀಮಠದಲ್ಲಿ ಶಿಕ್ಷಣ ಪಡೆದಿರುವ ಪ್ರತಿಯೊಬ್ಬರೂ ಸಹ ಉದಾತ್ತ ಮನೋಭಾವ ಬೆಳೆಸಿಕೊಂಡು ಸಮಾಜದ ಏಳ್ಗೆಗೆ ಶ್ರಮಿಸಬೇಕು. ಶ್ರೀಮಠದಲ್ಲಿ ಸಿಗುವ ಹರ್ಷ ಮತ್ತು ನೆಮ್ಮದಿ ಬೇರೆಲ್ಲೂ ಸಿಗಲು ಸಾಧ್ಯವಿಲ್ಲ.

- ಹುಲುವಾಡಿ ರಮೇಶ್,
ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ.

ಆದಿಚುಂಚನಗಿರಿ, ಜ.16– ಸಮಾಜದ ಕಟ್ಟ ಕಡೇ ವ್ಯಕ್ತಿಗೆ ಉತ್ತಮ ಶಿಕ್ಷಣ ಸಿಕ್ಕರೆ ಆ ವ್ಯಕ್ತಿ ಬಹಳ ಎತ್ತರಕ್ಕೆ ಬೆಳೆಯಬಹುದು ಅಥವಾ ಎತ್ತರಕ್ಕೆ ಬೆಳೆದಿರುವ ವ್ಯಕ್ತಿ ಜೊತೆ ನಿಲ್ಲಲು ಸಾಧ್ಯವಾಗುತ್ತದೆ. ಹೀಗಾಗಿ ಪ್ರತಿಯೊಬ್ಬರಿಗೂ ಅಂತಹ ಅವಕಾಶ ಮಾಡಿಕೊಡುತ್ತಿರುವ ಶ್ರೀಕ್ಷೇತ್ರ ಆದಿಚುಂಚನಗಿರಿ ಮಠದ ಕಾರ್ಯ ನಿಜಕ್ಕೂ ಶ್ಲಾಘನೀಯವಾಗಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಅಗ್ರಗಣ್ಯ ಸಾಧನೆ ಮಾಡುತ್ತಿದೆ ಎಂದು ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಮಂಕಾಳ ವೈದ್ಯ ಶ್ಲಾಘಿಸಿದರು.

ನಾಗಮಂಗಲ ತಾಲೂಕಿನ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಬಿಜಿಎಸ್ ಸಭಾಂಗಣದಲ್ಲಿ ಭೈರವೈಕ್ಯ ಶ್ರೀ ಡಾ.ಬಾಲಗಂಗಾಧರನಾಥ ಸ್ವಾಮೀಜಿ ಅವರ 79ನೇ ಜಯಂತ್ಯುತ್ಸವ ಹಾಗೂ 11ನೇ ವರ್ಷದ ಸಂಸ್ಮರಣಾ ಮಹೋತ್ಸವದ ಪ್ರಯುಕ್ತ ಮಂಗಳವಾರ ಆಯೋಜಿಸಿದ್ದ ಯೋಗಿ–ಜೋಗಿ ಸಂಗಮ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬರೂ ಎಷ್ಟು ಸಾಧ್ಯವೋ ಅಷ್ಟು ಸಹಕಾರವನ್ನು ಶ್ರೀಮಠಕ್ಕೆ ಕೊಟ್ಟರೆ ಅದು ಪುಣ್ಯದ ಕೆಲಸಕ್ಕೆ ಬಳಕೆಯಾಗುತ್ತದೆ ಎಂದರು.

ಆದಿಚುಂಚನಗಿರಿಯ ಎಲ್ಲಾ ಶಾಖಾ ಮಠಗಳಲ್ಲಿ ಮಕ್ಕಳಿಗೆ ಬೇಕಾದ ಶಿಕ್ಷಣ ಕಲ್ಪಿಸುತ್ತಿರುವ ಯಾವುದಾದರೂ ಮಠ ಇದ್ದರೆ ಅದು ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ ಮಾತ್ರ ಇದು ನಮ್ಮೆಲ್ಲರ ಸೌಭಾಗ್ಯವೇ ಸರಿ. ಅವಶ್ಯಕತೆ ಇರುವವರು ಶ್ರೀಮಠದಿಂದ ಏನು ಬೇಕಾದರೂ ಪಡೆಯಬಹುದು ಎಂದರು. ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಮಠದ ಪೀಠಾಧ್ಯಕ್ಷ ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ದೇಶದಲ್ಲಿ ಸಹಸ್ರಾರು ಸಂಖ್ಯೆಯ ನಾಥ ಪರಂಪರೆಯ ಮಠಮಾನ್ಯಗಳಿದ್ದರೂ ಕೂಡ ಎಲ್ಲಾ ಮಠಗಳಿಗೆ ಅಗ್ರಮಾನ್ಯವಾಗಿ ನಿಂತಿರುವ ಮಠವೆಂದರೆ ಅದು ಆದಿಚುಂಚನಗಿರಿ ಮಹಾಸಂಸ್ಥಾನ ಮಠ ಎಂದು ತಿಳಿಸಿದರು.

ಅನ್ನ, ಅಕ್ಷರ, ಜ್ಞಾನ ದಾಸೋಹ, ಕೌಶಲ್ಯಾಭಿವೃದ್ಧಿ ಸೇರಿದಂತೆ ಯಾವುದೇ ಸೇವೆ ನೀಡಲು ಆದಿಚುಂಚನಗಿರಿ ಮಠ ಸಜ್ಜಾಗಿದೆ. ಆದರೆ ಮಠ ಇನ್ನೂ ಹೆಚ್ಚಿನ ಜನರಿಗೆ ಸೇವೆ ನೀಡಬೇಕೆಂದರೆ ಪಡೆದುಕೊಂಡದಕ್ಕೆ ಪ್ರತಿಯಾಗಿ ಮಠದ ಕಣಜ ತುಂಬಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಆ ಕೆಲಸ ನಿರಂತರವಾಗಿ ನಡೆಯುತ್ತಿದೆ. ಪಡೆದುಕೊಂಡು ಕೊಡುವ ವ್ಯಕ್ತಿ ಕೃತಜ್ಞನಾಗುತ್ತಾನೆ. ಹಾಗೇ ಹೋಗುವ ವ್ಯಕ್ತಿ ಕೃತಘ್ನನಾಗುತ್ತಾನೆ. ಕೃತಜ್ಞತೆಗೂ ಕೃತಘ್ನತೆಗೂ ಬಹಳ ವ್ಯತ್ಯಾಸವಿಲ್ಲ ಎಂದರು.

ಆದಿ ಶ್ರೀಮಠದ ಮೂಲಕ ನಡೆಯುತ್ತಿರುವ ಸೇವಾ ಕ್ಷೇತ್ರವನ್ನು ಜನಸಾಮಾನ್ಯರಿಗೆ ತಿಳಿಸುವ ಜೊತೆಗೆ ಇಲ್ಲಿ ನಡೆಯುತ್ತಿರುವ ಕಾರ್ಯಗಳನ್ನು ಸಮಾಜದ ಮೂಲೆ ಮೂಲೆಗೂ ತಲುಪಿಸುವ ಕೆಲಸವನ್ನು ಜೋಗಪ್ಪಂದಿರು ಮಾಡಬೇಕು. ಸಮಾಜದಲ್ಲಿ ಸಿಗುವಂತಹ ಎಲ್ಲ ಸಂಪನ್ಮೂಲಗಳನ್ನು ಶ್ರೀಮಠಕ್ಕೆ ತಂದು ತನ್ಮೂಲಕ ಸಮಾಜಕ್ಕೆ ತಲುಪಿಸುವ ನಿಟ್ಟಿನಲ್ಲಿ ಪರಸ್ಪರ ಕೆಲಸ ಮಾಡುವ ದೊಡ್ಡ ಜವಾಬ್ದಾರಿ ಜೋಗಪ್ಪಂದಿರ ಮೇಲಿದೆ ಎಂದು ಹೇಳಿದರು.

ನಾಗರಿಕತೆ ತುಂಬ ತುಳುಕುತ್ತಿರುವ ಈ ಸಮಾಜದ ಮಧ್ಯದಲ್ಲಿ ಯಾವ ಕೀಳರಿಮೆಯೂ ಇಲ್ಲದ ರೀತಿ ಜೋಗಪ್ಪಂದಿರು ಬದುಕಬೇಕು. ಆ ರೀತಿ ಬದುಕಲು ಕೆಲ ನಿಯಮ ಅನುಸರಿಸಬೇಕಾಗುತ್ತದೆ. ಒಬ್ಬ ವ್ಯಕ್ತಿ ಸಂತೋಷವಾಗಿ ಬದುಕಬೇಕೆಂದರೆ ಅವನ ಬದುಕು, ದೇಹ, ನೋಟದಲ್ಲಿ ಶಿಸ್ತು ಇರಬೇಕು. ನಮ್ಮ ಇಂದ್ರೀಯಗಳನ್ನು ಸರಿಯಾಗಿ ಇಟ್ಟುಕೊಂಡದ್ದೇ ಆದರೆ ಬದುಕು ಸುಂದರವಾಗಿರುತ್ತದೆ. ಬದುಕಿನಲ್ಲಿ ಕಷ್ಟ ಸುಖ ಎರಡೂ ಬರುತ್ತವೆ. ಎಲ್ಲಾ ವೇಳೆಯೂ ಸೋಲು–ಗೆಲುವು, ನೋವು–ನಲಿವುಗಳ ನಡುವೆ ಸಂತೋಷವನ್ನಿಟ್ಟುಕೊಳ್ಳಬೇಕು ಎಂದರು.

ವೇದಿಕೆಯಲ್ಲಿ ಶ್ರೀಮಠದ ಪ್ರಧಾನ ಕಾರ್ಯದರ್ಶಿಗಳಾದ ಪುರುಷೋತ್ತಮಾನಂದನಾಥಸ್ವಾಮೀಜಿ, ಪ್ರಸನ್ನನಾಥಸ್ವಾಮೀಜಿ, ಶಾಸಕ ಕೆ.ಎಂ.ಉದಯ್‌ಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ, ಮನ್‌ಮುಲ್ ಮಾಜಿ ಅಧ್ಯಕ್ಷ ಬಿ.ಆರ್.ರಾಮಚಂದ್ರ, ಹಿರಿಯ ಪತ್ರಕರ್ತ ಹರಿಪ್ರಸಾದ್, ಮಠದ ಆಡಳಿತಾಧಿಕಾರಿ ಡಾ.ಎ.ಟಿ.ಶಿವರಾಮು, ಮಠದ ಬ್ರಹ್ಮಚಾರಿ ಸಾಯಿಕೀರ್ತಿನಾಥಸ್ವಾಮೀಜಿ ಸೇರಿದಂತೆ ಸಾವಿರಾರು ಯೋಗಿ, ಜೋಗಿಗಳು, ಮಠದ ಭಕ್ತರು ಇದ್ದರು.

ಜಿಲ್ಲಾದ್ಯಂತ ಸಂಕ್ರಾಂತಿ ಸಂಭ್ರಮ



ಸಂಕ್ರಾಂತಿ ಹಿನ್ನೆಲೆಯಲ್ಲಿ ರಾಸುಗಳನ್ನು ಕಿಚ್ಚು ಹಾಯಿಸುತ್ತಿರುವುದು.

ಮಂಡ್ಯ, ಜ.16– ಜಿಲ್ಲಾದ್ಯಂತ ಸೋಮವಾರ ಮಕರ ಸಂಕ್ರಾಂತಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು.

ಬೆಳಗ್ಗೆಯಿಂದಲೇ ರೈತರು ಜಾನುವಾರುಗಳನ್ನು ಸ್ವಚ್ಛಗೊಳಿಸಿ, ಅಲಂಕಾರ ಮಾಡಿ ಸಂಜೆಯಾಗುತ್ತಲೇ ಗ್ರಾಮದ ಹೊರವಲಯದಲ್ಲಿ ಹುಲ್ಲು, ತೆಂಗಿನಗರಿಗಳಿಗೆ ಬೆಂಕಿ ಹಾಕಿ ಕಿಚ್ಚಾಯಿಸುವ ಮೂಲಕ ಸಂಭ್ರಮಿಸಿದರು. ಬಳಿಕ ಜಾನುವಾರುಗಳನ್ನು ಮನೆಗೆ ಕರೆತಂದು ಪೂಜೆ ಸಲ್ಲಿಸಿ ಹಣ್ಣು ಹಂಪಲು ನೀಡಿದರು.

ಅಲಂಕಾರಿಕ ವಸ್ತುಗಳಿಂದ ಶೃಂಗಾರ: ಹಬ್ಬದ ಹಿನ್ನೆಲೆಯಲ್ಲಿ ರೈತರು ಜಾನುವಾರುಗಳನ್ನು ಸ್ವಚ್ಛಗೊಳಿಸಿ ಕೊಂಬಿಗೆ ಬಣ್ಣದ ಲೇಪನ ಮಾಡಿ, ಬೆಳ್ಳಿಯ ಕಳಸಗಳನ್ನು ತೊಡಿಸಿ, ಕಲರ್ ಟೇಪು, ಬಲೂನುಗಳಿಂದ ಶೃಂಗರಿಸಿ, ಹೊಸದಾಗಿ ತಂದ ಹಗ್ಗ, ಕರಿದಾರ, ಕೊರಳಿಗೆ ಗಂಟೆ ಕಟ್ಟಿ, ಮೈಮೇಲೆ ಬಣ್ಣಗಳ ಚಿತ್ತಾರ ಬಿಡಿಸಿ, ಕಾಲಿಗೆ ಕಡಗಗಳನ್ನು ತೊಡಿಸಿ ಅಲಂಕಾರ ಮಾಡಿದ ದೃಶ್ಯಗಳು ಎಲ್ಲೆಲ್ಲೂ ಸಾಮಾನ್ಯವಾಗಿತ್ತು. ಅಲ್ಲದೇ ಜಾನುವಾರುಗಳ ಹಬ್ಬವೆಂದೇ ಬಿಂಬಿತವಾಗಿರುವ ಸಂಕ್ರಾಂತಿ ಹಬ್ಬಕ್ಕೆ ಮೆರಗು ತಂದಿತ್ತು.

ಗೂಳಿ, ಎತ್ತುಗಳ ಮೆರವಣಿಗೆ: ಗ್ರಾಮೀಣ, ನಗರ ಪಟ್ಟಣಗಳಲ್ಲೂ ಸಂಕ್ರಾಂತಿ ವೈಭವ ಕಳೆಗಟ್ಟಿತ್ತು. ನಗರದ ಅಲ್ಲಲ್ಲಿ ಯುವಕರು ಜಾನುವಾರುಗಳ ಶೃಂಗರಿಸಿ ತಮಟೆ, ಡೋಲು ಬಾರಿಸುತ್ತಾ, ಪಟಾಕಿ ಸಿಡಿಸುತ್ತಾ ವಿವಿಧ ಜಾನಪದ ಕಲಾತಂಡಗಳೊಂದಿಗೆ ಮೆರವಣಿಗೆ ಮಾಡಿದರು. ಈ ವೇಳೆ ರಸ್ತೆಯ ಇಕ್ಕೆಲಗಳಲ್ಲೂ ಜನರು ತುಂಬಿದ್ದರು. ಒಂದು ಗೂಳಿಯನ್ನು ನಾಲ್ಕೈದು ಯುವಕರ ತಂಡ ಹಿಡಿದುಕೊಂಡು ಬಂದು ಕಿಚ್ಚಾಯಿಸುತ್ತಿದ್ದ ದೃಶ್ಯ ಕಂಡು ಬಂತು.

ಜಾನುವಾರುಗಳ ಕಿಚ್ಚಾಯಿಸಿ ಸಂಭ್ರಮ: ನಗರದ ಸರ್‌ಎಂವಿ ಕ್ರೀಡಾಂಗಣ, ಹೌಸಿಂಗ್ ಬೋರ್ಡ್, ಹೊಸಹಳ್ಳಿ, ಕಾವೇರಿ ನಗರ, ಕಲ್ಲಹಳ್ಳಿ, ಗುತ್ತಲು ರಸ್ತೆ, ಶಂಕರ ಮಠ, ಹೊಳಲು ವೃತ್ತ, ಹೊಳಲು ಗ್ರಾಮಗಳು ಸೇರಿದಂತೆ ವಿವಿಧೆಡೆ ಜಾನುವಾರುಗಳ ಕಿಚ್ಚಾಯಿಸಿ ಸಂಭ್ರಮಿಸಿದರು.

ಎಳ್ಳು ಬೆಲ್ಲ ಹಂಚಿದ ಮಹಿಳೆಯರು, ಹೆಣ್ಣು ಮಕ್ಕಳು: ಸಂಕ್ರಾಂತಿ ಹಿನ್ನೆಲೆಯಲ್ಲಿ ಮಹಿಳೆಯರು, ಹೆಣ್ಣು ಮಕ್ಕಳು ಮನೆ ಮನೆಗೆ ತೆರಳಿ ಎಳ್ಳು, ಬೆಲ್ಲ ಹಂಚಿ ಹಬ್ಬದ ಶುಭಾಶಯ ಕೋರಿದರು. ಸಾಂಪ್ರದಾಯಿಕ ಉಡುಗೆ–ತೊಡುಗೆ ತೊಟ್ಟ ಮಹಿಳೆಯರು, ಹೆಣ್ಣು ಮಕ್ಕಳು ಅಲಂಕಾರ ಮಾಡಿಕೊಂಡು ಸ್ನೇಹಿತರು, ಸಂಬಂಧಿಕರು, ಹಿತೈಷಿಗಳ ಮನೆಗೆ ತೆರಳಿ ಅರಿಶಿನ, ಕುಂಕುಮ, ಕಬ್ಬು ನೀಡಿ, ಎಳ್ಳು ಬೆಲ್ಲ ಬೀರಿದರು.

ಅವರೇಕಾಳಿನ ಘಮಲು: ಹಬ್ಬದ ಹಿನ್ನೆಲೆಯಲ್ಲಿ ಸಿಹಿ, ಖಾರ ಪೊಂಗಲ್ ಜೊತೆಗೆ ಅವರೇಕಾಳಿನ ಖಾದ್ಯದ ಘಮಲು ಜೋರಾಗಿತ್ತು. ಸಿಪ್ಪೆ ತೆಗೆದು ಮಾಡುವ ಖಾದ್ಯಗಳು ಸಾರ್ವಜನಿಕರ ಮನೆಯಲ್ಲಿ ಘಮಿಸಿತು.

ವಿಶೇಷ ಪೂಜೆ: ಸಂಕ್ರಾಂತಿ ಹಿನ್ನೆಲೆಯಲ್ಲಿ ಮಂಡ್ಯ, ಮದ್ದೂರು, ಮಳವಳ್ಳಿ, ಶ್ರೀರಂಗಪಟ್ಟಣ, ಪಾಂಡವಪುರ, ನಾಗಮಂಗಲ ಹಾಗೂ ಕೆ.ಆರ್.ಪೇಟೆ ತಾಲೂಕುಗಳ ಗ್ರಾಮೀಣ ಪ್ರದೇಶದ ವಿವಿಧ ಪ್ರಸಿದ್ಧ ದೇವಾಲಯಗಳಲ್ಲಿ ವಿಶೇಷ ಪೂಜೆಗಳು ನೆರವೇರಿದವು. ಸೋಮವಾರ ಮುಂಜಾನೆಯಿಂದಲೇ ದೇವಾಲಯಗಳಲ್ಲಿ ಅಭಿಷೇಕ, ಅಲಂಕಾರ, ವಿಶೇಷ ಪೂಜೆಗಳು ನಡೆದವು. ಭಕ್ತರು, ಸಾರ್ವಜನಿಕರು ಕಳೆದ 15 ದಿನಗಳಿಂದ ಆಚರಿಸಿಕೊಂಡು ಬಂದಿದ್ದ ಧನುರ್ಮಾಸ ವ್ರತಾಚರಣೆಯೂ ಮಕರ ಸಂಕ್ರಾಂತಿ ದಿನದಂದು ವಿಶೇಷ ಪೂಜೆ ಸಲ್ಲಿಸುವ ಮೂಲಕ ಸಂಪನ್ನಗೊಂಡಿತು. ಬೆಳಗ್ಗೆಯಿಂದಲೇ ದೇವಾಲಯಗಳಿಗೆ ತಂಡೋಪ ತಂಡಗಳಾಗಿ ಲಗ್ಗೆ ಇಟ್ಟ ಭಕ್ತರು ವಿಶೇಷ ಪೂಜೆ ಸಲ್ಲಿಸಿ ನಂತರ ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು.

ಬೈಕ್‌ಗೆ ಕಾರು ಡಿಕ್ಕಿ: ದಂಪತಿ ಸಾವು

ಮದ್ದೂರು, ಜ.16– ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ದಂಪತಿ ಮೃತಪಟ್ಟಿರುವ ಘಟನೆ ತಾಲೂಕಿನ ಉಪ್ಪಿನಕೆರೆ ಗೇಟ್ ಬಳಿ ಭಾನುವಾರ ಸಂಜೆ ನಡೆದಿದೆ. ಮೈಸೂರು ಜಿಲ್ಲೆ ತಿ.ನರಸೀಪುರ ತಾಲೂಕಿನ ಹಿರಿಯೂರು ಗ್ರಾಮದ ನಿವಾಸಿ ದರ್ಶನ್ (28), ಜ್ಯೋತಿ(24) ಮೃತಪಟ್ಟ ದಂಪತಿ. ಇನ್ನೂ ಕಾರಿನಲ್ಲಿದ್ದ ಬೆಂಗಳೂರು ಮೂಲದ ವಿಸ್ಮಯ ಎಂಬ ಮಗುವಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಪಟ್ಟಣದ ಗುರುಶಾಂತಪ್ಪ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

ತುಮಕೂರಿನ ಖಾಸಗಿ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ದರ್ಶನ್ ಹಾಗೂ ಆತನ ಪತ್ನಿ ಜ್ಯೋತಿ ಸಂಕ್ರಾಂತಿ ಹಬ್ಬದ ಹಿನ್ನೆಲೆಯಲ್ಲಿ ಬೈಕ್‌ನಲ್ಲಿ ತುಮಕೂರಿನಿಂದ ಹಿರಿಯೂರಿಗೆ ತೆರಳುತ್ತಿದ್ದರು. ಈ ವೇಳೆ ಉಪ್ಪಿನಕೆರೆ ಗೇಟ್ ಬಳಿ ಮಳವಳ್ಳಿ ಕಡೆಯಿಂದ ಬಂದ ಕಾರು ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ದರ್ಶನ್ ಸ್ಥಳದಲ್ಲೇ ಸಾವನ್ನಪ್ಪಿದರೇ, ಜ್ಯೋತಿ ಅವರನ್ನು ಚಿಕಿತ್ಸೆಗಾಗಿ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಮದ್ದೂರು ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ವಿಜೃಂಭಣೆಯ ಶ್ರೀ ಗವಿರಂಗನಾಥಸ್ವಾಮಿ ಬ್ರಹ್ಮ ರಥೋತ್ಸವ



ಬಿಲ್ಲೇನಹಳ್ಳಿ ಶ್ರೀ ಗವಿರಂಗನಾಥಸ್ವಾಮಿಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಕೆ.ಆರ್.ಪೇಟೆ, ಜ.16– ತಾಲೂಕಿನ ಬಿಲ್ಲೇನಹಳ್ಳಿ ಶ್ರೀ ಗವಿರಂಗನಾಥಸ್ವಾಮಿ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವಕ್ಕೆ ಶಾಸಕ ಹೆಚ್.ಟಿ.ಮಂಜು, ತಹಸೀಲ್ದಾರ್ ನಿಸರ್ಗಪ್ರಿಯ, ಚಿತ್ರನಟ ಚಿಕ್ಕಣ್ಣ, ಪಿಡಿಓ ವಿನೋದ್ ಹಾಗೂ ಇತರೆ ಗಣ್ಯರು ರಥಕ್ಕೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ಚಾಲನೆ ನೀಡಿದರು. ವಿವಿಧೆಡೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ರಥಕ್ಕೆ ಹಣ್ಣು ಜವನ ಎಸೆದು ಶ್ರೀರಂಗನಾಥಸ್ವಾಮಿಗೆ ಉಘೇ.. ಉಘೇ... ಎಂದು ಜೈಕಾರ ಕೂಗಿ ರಥ ಎಳೆದು ಭಕ್ತಿಭಾವ ಸಮರ್ಪಿಸಿದರು.

ಶಾಸಕ ಹೆಚ್.ಟಿ.ಮಂಜು ಮಾತನಾಡಿ, ಜಾತ್ರೆ–ರಥೋತ್ಸವ, ಹಬ್ಬ, ಹರಿದಿನಗಳು ನಮ್ಮ ಸಂಸ್ಕೃತಿ ಪರಂಪರೆಯ ಪ್ರತೀಕ. ಇವುಗಳನ್ನು ಉಳಿಸಿ, ಬೆಳೆಸಿಕೊಂಡು ಹೋಗಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಆ ನಿಟ್ಟಿನಲ್ಲಿ ರಾಸುಗಳು ರಕ್ಷಕ ಶ್ರೀಗವಿರಂಗನಾಥಸ್ವಾಮಿ ರಥೋತ್ಸವವನ್ನು ಮುಜರಾಯಿ ಇಲಾಖೆ ಸಹಕಾರದೊಂದಿಗೆ ನಡೆಸಿಕೊಂಡು ಬರಲಾಗುತ್ತಿದೆ. ಶಕ್ತಿ ದೇವರಾದ ಶ್ರೀಗವಿರಂಗನಾಥಸ್ವಾಮಿ ದೇವಾಲಯದ ಸಮಗ್ರ ಅಭಿವೃದ್ಧಿಗೆ ನನ್ನ ಶಾಸಕರ ಪ್ರದೇಶಾಭಿವೃದ್ಧಿ ನಿಧಿ ಹಾಗೂ ಮುಜರಾಯಿ ಇಲಾಖೆಯಿಂದ ಅನುದಾನ ನೀಡಲಾಗುವುದು ಎಂದರು. ಚಿತ್ರನಟ ಚಿಕ್ಕಣ್ಣ ಮಾತನಾಡಿ, ಶ್ರೀಗವಿರಂಗನಾಥ ಕ್ಷೇತ್ರ ಸುಂದರ ಸ್ಥಳವಾಗಿದೆ. ಇಲ್ಲಿ ಚಿತ್ರೀಕರಣ ಮಾಡಲು ಮುಜರಾಯಿ ಇಲಾಖೆ ಅವಕಾಶ ನೀಡಿದರೆ ಚಿತ್ರೀಕರಣ ಮಾಡಲು ಚಿತ್ರ ತಂಡದೊಂದಿಗೆ ಬರುವುದಾಗಿ ತಿಳಿಸಿದರು.

ತಹಸೀಲ್ದಾರ್ ನಿಸರ್ಗಪ್ರಿಯ ಮಾತನಾಡಿದರು. ರಥೋತ್ಸವದಲ್ಲಿ ಮಾಜಿ ಸಚಿವ ಕೆ.ಸಿ.ನಾರಾಯಣಗೌಡ, ತಾಪಂ ಮಾಜಿ ಸದಸ್ಯ ಮೋಹನ್, ರಾಜಾಹುಲಿ ದಿನೇಶ್, ಬಿ.ಆರ್.ಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷೆ ಮಂಜಮ್ಮ, ಕುಮಾರ್ ಸೇರಿದಂತೆ ಸಾವಿರಾರು ಭಕ್ತರು ಭಾಗವಹಿಸಿದ್ದರು.

ಸಶಸ್ತ್ರ ಪೊಲೀಸ್ ಕಾನ್‌ಸ್ಟೇಬಲ್ ಪರೀಕ್ಷೆ

ಮಂಡ್ಯ, ಜ.16– ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಸಶಸ್ತ್ರ ಪೊಲೀಸ್ ಕಾನ್‌ಸ್ಟೇಬಲ್‌ನ 3064 ಹುದ್ದೆಗಳಿಗೆ ಲಿಖಿತ ಪರೀಕ್ಷೆ ಜ.28 ರಂದು ಬೆಳಗ್ಗೆ 11 ರಿಂದ 12.30ರವರೆಗೆ ರಾಜ್ಯಾದ್ಯಂತ ನಡೆಯಲಿದೆ. ಲಿಖಿತ ಪರೀಕ್ಷೆಗೆ ಅರ್ಹ ಅಭ್ಯರ್ಥಿಗಳಿಗೆ ಕರೆ ಪತ್ರದ ಬಗ್ಗೆ ಮುಂಬರುವ ದಿನಗಳಲ್ಲಿ ಎಸ್‌ಎಂಎಸ್ ಮೂಲಕ ಮಾಹಿತಿ ನೀಡಲಾಗುವುದು ಹಾಗೂ ಕರೆ ಪತ್ರದ ಲಿಂಕ್ ಅನ್ನು ಕಳುಹಿಸಲಾಗುವುದು. ಅಭ್ಯರ್ಥಿಗಳು ಕರೆಪತ್ರದೊಂದಿಗೆ ನಿಗದಿಪಡಿಸಿದ ದಿನಾಂಕದಂದು ಲಿಖಿತ ಪರೀಕ್ಷೆಗೆ ಹಾಜರಾಗಬೇಕು ಎಂದು ಪ್ರಕಟಣೆ ತಿಳಿಸಿದೆ.

ಒಂದು ವಾಹನಕ್ಕೆ ಒಂದೇ ಫಾಸ್ಟ್‌ಟ್ಯಾಗ್ ನಿಯಮ ಜಾರಿ

ಹೊಸದಿಲ್ಲಿ: ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಎಲೆಕ್ಟ್ರಾನಿಕ್ ಟೋಲಿಂಗ್ ವ್ಯವಸ್ಥೆಯ ಸುಧಾರಣೆ ಸಲುವಾಗಿ 'ಒಂದು ವಾಹನ ಒಂದು ಫಾಸ್ಟ್‌ಟ್ಯಾಗ್' ನಿಯಮ ಜಾರಿಗೊಳಿಸಿದೆ. ಒಂದಕ್ಕಿಂತ ಹೆಚ್ಚು ವಾಹನಗಳಿಗೆ ಒಂದೇ ಫಾಸ್ಟ್‌ಟ್ಯಾಗ್ ಬಳಸುವುದು ಅಥವಾ ಒಂದು ವಾಹನಕ್ಕೆ ಹಲವು ಫಾಸ್ಟ್‌ಟ್ಯಾಗ್‌ಗಳನ್ನು ಬಳಸುವುದಕ್ಕೆ ನಿರ್ಬಂಧ ವಿಧಿಸುವುದು 'ಒಂದು ವಾಹನ ಒಂದು ಫಾಸ್ಟ್‌ಟ್ಯಾಗ್' ನೀತಿ ಜಾರಿ ಹಿಂದಿನ ಉದ್ದೇಶ.



'ಒಂದು ವಾಹನ ಒಂದು ಫಾಸ್ಟ್‌ಟ್ಯಾಗ್' ನೀತಿಯಡಿ ಬಳಕೆದಾರರು ಫಾಸ್ಟ್‌ಟ್ಯಾಗ್‌ನ ಕೆವೈಸಿಯನ್ನು ಕಡ್ಡಾಯವಾಗಿ ಪೂರ್ಣಗೊಳಿಸಬೇಕಾಗಿದೆ. ಜ.31ರ ಒಳಗಾಗಿ ಕೆವೈಸಿ ಪ್ರಕ್ರಿಯೆ ಪೂರ್ತಿಗೊಳಿಸಬೇಕು. ಇದಕ್ಕೆ ತಪ್ಪಿದಲ್ಲಿ ಜ.31ರ ನಂತರ ಕೆವೈಸಿ ಪೂರ್ಣಗೊಳ್ಳದ ಫಾಸ್ಟ್‌ಟ್ಯಾಗ್‌ಗಳನ್ನು ನಿಷ್ಕ್ರಿಯಗೊಳಿಸಲಾಗುವುದು ಇಲ್ಲವೇ ಬ್ಯಾಂಕುಗಳ ಕಪ್ಪು ಪಟ್ಟಿಗೆ ಸೇರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಾರ್ವಜನಿಕರು ಟೋಲ್ ಪ್ಲಾಜಾ ಸಿಬ್ಬಂದಿ ಅಥವಾ ಟೋಲ್ ಫ್ರೀ ನಂಬರುಗಳ ಮೂಲಕ ಬ್ಯಾಂಕುಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಭಾರತೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ (ಎನ್‌ಎಚ್‌ಎಐ) ತಿಳಿಸಿದೆ. ಕೆವೈಸಿ ಪೂರ್ಣಗೊಳ್ಳದ ಫಾಸ್ಟ್‌ಟ್ಯಾಗ್‌ಗಳು, ಒಂದೇ ವಾಹನಕ್ಕೆ ಒಂದಕ್ಕಿಂತ ಹೆಚ್ಚು ಫಾಸ್ಟ್‌ಟ್ಯಾಗ್‌ಗಳ ನೀಡಿಕೆ, ಸರಿಯಾದ ಜಾಗದಲ್ಲಿ ಫಾಸ್ಟ್‌ಟ್ಯಾಗ್ ಅಳವಡಿಸದೇ ಇರುವುದು ಮತ್ತಿತರ ಸಂಗತಿಗಳಿಂದ ಟೋಲ್‌ನಲ್ಲಿ ಟ್ರಾಫಿಕ್ ಜಾಮ್ ಉಂಟಾಗುತ್ತಿರುವ ಬಗ್ಗೆ ದೂರುಗಳು ಕೇಳಿಬಂದ ಹಿನ್ನೆಲೆಯಲ್ಲಿ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಈ ಕ್ರಮಕ್ಕೆ ಮುಂದಾಗಿದೆ.

ಫಾಸ್ಟ್‌ಟ್ಯಾಗ್ ಬಳಕೆಗೂ ಮೊದಲು ಟೋಲ್‌ಗಳಲ್ಲಿ ಸ್ಥಳದಲ್ಲೇ ಟಿಕೆಟ್ ನೀಡುವ ಪದ್ಧತಿ ಚಾಲ್ತಿಯಲ್ಲಿತ್ತು. ಆ ಸಂದರ್ಭದಲ್ಲಿ ಒಂದು ವಾಹನ ಸರಾಸರಿ 714 ಸೆಕೆಂಡುಗಳ ಕಾಲ ಸರದಿಯಲ್ಲಿ ಕಾಯಬೇಕಾದ ಪರಿಸ್ಥಿತಿ ಇತ್ತು. ಫಾಸ್ಟ್‌ಟ್ಯಾಗ್‌ನಿಂದಾಗಿ ಕಾಯುವಿಕೆಯ ಸಮಯ 714 ಸೆಕೆಂಡುಗಳಿಂದ ಕೇವಲ 47 ಸೆಕೆಂಡುಗಳಿಗೆ ಇಳಿಕೆಯಾಗಿದೆ ಎಂದು ಕೇಂದ್ರ ಸರಕಾರ ಇತ್ತೀಚೆಗಷ್ಟೇ ವಿಶ್ವಬ್ಯಾಂಕ್‌ಗೆ ನೀಡಿದ್ದ ಮಾಹಿತಿಯಲ್ಲಿ ತಿಳಿಸಿತ್ತು. ಈಗ ಸರಕಾರದ ನೂತನ 'ಒಂದು ವಾಹನ ಒಂದೇ ಫಾಸ್ಟ್‌ಟ್ಯಾಗ್' ನೀತಿ ಜಾರಿ ಯಿಂದ ಟೋಲ್‌ಗಳಲ್ಲಿನ ವಾಹನ ಸಂಚಾರ ಇನ್ನಷ್ಟು ಸುಗಮಗೊಳ್ಳುವ ನಿರೀಕ್ಷೆಯಿದೆ.

ಅಮೆರಿಕ ಅಧ್ಯಕ್ಷೀಯ ರೇಸ್‌ನಿಂದ ಹಿಂದಕ್ಕೆ ಸರಿದ ವಿವೇಕ್ ರಾಮಸ್ವಾಮಿ: ಟ್ರಂಪ್‌ಗೆ ಬೆಂಬಲ ಘೋಷಣೆ



ವಿವೇಕ್ ರಾಮಸ್ವಾಮಿ

ನ್ಯೂಯಾರ್ಕ್, ಜ.16– ಅಯೋವಾ ಕಾಕಸ್‌ನಲ್ಲಿ ಕಳಪೆ ಪ್ರದರ್ಶನ ನೀಡಿದ ನಂತರ ಭಾರತೀಯ–ಅಮೆರಿಕನ್ ಉದ್ಯಮಿ–ರಾಜಕಾರಣಿ ವಿವೇಕ್ ರಾಮಸ್ವಾಮಿ ಸೋಮವಾರ ತಮ್ಮ ಅಧ್ಯಕ್ಷೀಯ ಪ್ರಚಾರವನ್ನು ಸ್ಥಗಿತಗೊಳಿಸಿದ್ದಾರೆ. ನವೆಂಬರ್‌ನಲ್ಲಿ ಶ್ವೇತಭವನವನ್ನು ಹಿಂಪಡೆಯಲು ಯತ್ನಿಸುತ್ತಿರುವ ಅಮೆರಿಕದ ಮಾಜಿ ಅಧ್ಯಕ್ಷರು ಡೊನಾಲ್ಡ್ ಟ್ರಂಪ್‌ಗೆ ತಮ್ಮ ಬೆಂಬಲವನ್ನು ಘೋಷಿಸಿದ್ದಾರೆ. ಅಯೋವಾ ಕಾಕಸ್‌ನಲ್ಲಿ ಟ್ರಂಪ್ ಗೆಲುವು ಸಾಧಿಸಿದ್ದಾರೆ.

ರಿಪಬ್ಲಿಕನ್ ಪಕ್ಷದ ಅಧ್ಯಕ್ಷೀಯ ಸಭೆಯ ಫಲಿತಾಂಶದ ನಂತರ ಬೆಂಬಲಿಗರನ್ನುದ್ದೇಶಿಸಿ ಮಾತನಾಡಿದ ವಿವೇಕ್ ರಾಮಸ್ವಾಮಿ, ನಾನು ಎಲ್ಲ ರೀತಿಯಲ್ಲಿ ನೋಡಿದೆ. ನಾವು ಬಯಸಿದ ರೀತಿಯಲ್ಲಿ ಗೆಲುವು ಸಾಧಿಸಲಿಲ್ಲ ಎಂದು ಭಾವಿಸುತ್ತೇನೆ. ಈ ಕ್ಷಣದಿಂದ ಅಧ್ಯಕ್ಷೀಯ ಪ್ರಚಾರವನ್ನು ಸ್ಥಗಿತಗೊಳಿಸುತ್ತೇನೆ. ಮುಂದಿನ ಅಧ್ಯಕ್ಷನಾಗಲು ಯಾವುದೇ ಮಾರ್ಗವಿಲ್ಲ ಎಂದು ಹೇಳಿದರು.

ಮಾಜಿ ಅಧ್ಯಕ್ಷ ಟ್ರಂಪ್ ಅವರು ಅಯೋವಾ ಕಾಕಸ್ ಗೆಲ್ಲುವ ಮೂಲಕ ನವೆಂಬರ್‌ನಲ್ಲಿ ಅಧ್ಯಕ್ಷೀಯ ಚುನಾವಣೆಗಳಿಗೆ ಪಕ್ಷದ ನಾಮನಿರ್ದೇಶನ ಪಡೆಯಲು ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡರು. ಫ್ಲೋರಿಡಾ ಗವರ್ನರ್ ರಾನ್ ಡಿಸಾಂಟಿಸ್ ಅವರು 21.2 ಶೇಕಡಾ ಮತಗಳನ್ನು ಗಳಿಸುವ ಮೂಲಕ ಎರಡನೇ ಸ್ಥಾನ ಪಡೆದರು, ಭಾರತೀಯ–ಅಮೆರಿಕನ್ ಮಾಜಿ ಸೌತ್ ಕೆರೊಲಿನಾ ಗವರ್ನರ್ ನಿಕ್ಕಿ ಹ್ಯಾಲೆ ಅವರು 19.1 ರಷ್ಟು ಮತಗಳನ್ನು ಗಳಿಸುವ ಮೂಲಕ ಮೂರನೇ ಸ್ಥಾನದಲ್ಲಿದ್ದಾರೆ. ರಾಮಸ್ವಾಮಿ ಶೇ.7.7ರಷ್ಟು ಮತಗಳನ್ನು ಪಡೆದು ನಾಲ್ಕನೇ ಸ್ಥಾನ ಗಳಿಸಿದರು.

ಪ್ರಚಾರ ಈಗ ನ್ಯೂ ಹ್ಯಾಂಪ್‌ಶೈರ್ ಕಡೆಗೆ ಸಾಗಿದ್ದು, ರಾಮಸ್ವಾಮಿ ಅವರು ಈ ರಾಜ್ಯದಲ್ಲಿ ಟ್ರಂಪ್ ಜೊತೆಗೆ ಪ್ರಚಾರ ಮಾಡಲು ನಿರ್ಧರಿಸಿದ್ದಾರೆ.

ಒಂದನೇ ಪುಟದಿಂದ

ಹುಲಿ ಪ್ರತ್ಯಕ್ಷ

ತೆರಳುವಾಗ ಜಾಗ್ರತೆ ವಹಿಸಬೇಕು. ರಾತ್ರಿ ವೇಳೆ ಗ್ರಾಮಸ್ಥರು ಮನೆಯಿಂದ ಹೊರಗೆ ಬಾರದಂತೆ ಅರಣ್ಯ ಇಲಾಖೆ ಹಾಗೂ ಅರಕೆರೆ ಪೊಲೀಸ್ ಠಾಣೆಯಿಂದ ಜಾಗೃತಿ ಮೂಡಿಸಲಾಗುತ್ತಿದೆ. ಈಗಾಗಲೇ ಹುಲಿ ಸೆರೆಗೆ ಕ್ರಮ ಕೈಗೊಳ್ಳಲಾಗಿದೆ. ಹುಲಿ ಒಂದೆಡೆಯಿಂದ ಮತ್ತೊಂದೆಡೆಗೆ ರಸ್ತೆಯಲ್ಲೇ ಓಡಾಡುತ್ತಿರುವುದರಿಂದ ಬೋನ್ ಇಡಲು ಸಾಧ್ಯವಾಗುತ್ತಿಲ್ಲ. ಹುಲಿಯನ್ನು ಡ್ರೋಣ್ ಮೂಲಕ ಪತ್ತೆ ಹಚ್ಚಲಾಗುವುದು ಎಂದರು.

ಈ ವೇಳೆ ಮಾತನಾಡಿದ ಗ್ರಾಮಸ್ಥರು, ನಾವು ಜಮೀನುಗಳಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಹುಲಿ ಘರ್ಜಿಸಿತು. ಅಲ್ಲದೇ ನಾವಿದ್ದ ಸಮೀಪದಲ್ಲೇ ಹಾದು ಹೋಯಿತಾದರೂ ನಮಗೆ ಯಾವುದೇ ತೊಂದರೆ ಮಾಡಿಲ್ಲ. ಆದರೂ ನಾವು ಭಯದಿಂದ ಅಲ್ಲಿಂದ ಓಡಿ ಹೋದೆವು. ಈ ಹುಲಿ ಗಮನಿಸಿದರೆ ಸಾಧು ಇರಬಹುದು ಎನಿಸುತ್ತದೆ. ಏನೇ ಆದರೂ ಅರಣ್ಯ ಇಲಾಖೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ಬೋನಿಟ್ಟು ಹುಲಿ ಸೆರೆ ಹಿಡಿಯುವ ಮೂಲಕ ಈ ಭಾಗದ ಗ್ರಾಮಸ್ಥರ ಆತಂಕ ಹೋಗಲಾಡಿಸಬೇಕು ಎಂದು ಒತ್ತಾಯಿಸಿದ್ದಾರೆ.

ಮತ್ತೋರ್ವ ಗ್ರಾಮಸ್ಥ ಮಾತನಾಡಿ, ಇಲ್ಲಿ ಕಾಣಿಸಿಕೊಂಡಿರುವ ಹುಲಿ ಭಾರೀ ದೊಡ್ಡದಾಗಿದ್ದು, ಒಂಟಿಯಾಗಿ ಓಡಾಡುತ್ತಿದೆ. ಜೊತೆಯಲ್ಲಿ ಯಾವುದೇ ಮರಿ ಹುಲಿಗಳಿಲ್ಲ. ಇಲ್ಲಿನ ಜಮೀನು, ತೋಟಗಳಲ್ಲಿ ನಿತ್ಯ ರೈತರು ಕೆಲಸ ಮಾಡುವುದರಿಂದ ಹುಲಿ ಸೆರೆಗೆ ಆದಷ್ಟು ಶೀಘ್ರ ಅರಣ್ಯ ಇಲಾಖೆ ಕ್ರಮ ವಹಿಸಬೇಕು ಎಂದರು. ಶ್ರೀರಂಗಪಟ್ಟಣ ವಲಯ ಅರಣ್ಯಾಧಿಕಾರಿ ಪುಟ್ಟಸ್ವಾಮಿ, ಸಹಾಯಕ ಅರಣ್ಯಾಧಿಕಾರಿ ಆನಂದೇಗೌಡ, ಮೈಸೂರಿನ ಎಲ್‌ಟಿಎಫ್ ಸಿಬ್ಬಂದಿ ಕಾರ್ಯಾಚರಣೆಗೆ ಇಳಿದಿದ್ದಾರೆ.

ನಂಜನಗೂಡು ಬಳಿ ಕಾಣಿಸಿಕೊಂಡ ಹುಲಿಯೇ ಇರಬೇಕು!:

ಮೈಸೂರು–ನಂಜನಗೂಡು ತಾಲೂಕು ಗಡಿಯ ಸಿಂಧುವಳ್ಳಿ, ಶೆಟ್ಟಹಳ್ಳಿ, ರಾಂಪುರ, ಕಡಕೊಳ ಬಳಿಯ ಟಿವಿಎಸ್, ಬಳ್ಳೂರು ಹುಂಡಿ, ದುಗ್ಗಹಳ್ಳಿ, ಹಾದನೂರು ಒಡೆಯನಪುರ, ಇಂದ್ರನಗರ ಸೇರಿದಂತೆ ವಿವಿಧೆಡೆ ಇತ್ತೀಚೆಗೆ ಹುಲಿ ಪ್ರತ್ಯಕ್ಷವಾಗಿ ಸಾಕುಪ್ರಾಣಿಗಳನ್ನು ಬಲಿ ಪಡೆದಿತ್ತು. ಅದೇ ಹುಲಿಯೇ ಶ್ರೀರಂಗಪಟ್ಟಣ ತಾಲೂಕಿನ ಮಹದೇವಪುರ, ಚನ್ನಪುರ ಗ್ರಾಮಗಳ ಸುತ್ತಮುತ್ತಲ ಗ್ರಾಮಗಳಲ್ಲಿ ಕಾಣಿಸಿಕೊಂಡಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ. ಮಂಡ್ಯ ಜಿಲ್ಲೆಯಲ್ಲಿ ಈ ಹಿಂದೆ ಆನೆ, ಚಿರತೆ ಕಾಣಿಸಿಕೊಂಡಿದ್ದವು. ಇದುವರೆಗೂ ಹುಲಿ ಕಾಣಿಸಿಕೊಂಡಿರಲಿಲ್ಲ. ಮಂಡ್ಯದಿಂದ ಮಹದೇವಪುರ 23 ಕಿಮೀ, ಶ್ರೀರಂಗಪಟ್ಟಣದಿಂದ 15 ಕಿಮೀ ದೂರವಿದ್ದು, ಆದರೆ ಮೈಸೂರಿನಿಂದ ಕೇವಲ 10 ಕಿಮೀ ದೂರವಿದೆ. ಹೀಗಾಗಿ ನಂಜನಗೂಡು ಸುತ್ತಮುತ್ತ ಕಾಣಿಸಿಕೊಂಡು ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದ್ದ ಹುಲಿಯೇ ಇದೀಗ ಮಹದೇವಪುರ ಬಳಿ ಕಾಣಿಸಿಕೊಂಡಿರಬಹುದು ಶಂಕೆ ವ್ಯಕ್ತವಾಗಿದೆ.

ಎಸ್‌ಐಟಿ ತನಿಖೆಗೆ ಒತ್ತಾಯ

ಉಳಿಸಿಕೊಳ್ಳಬೇಕೆಂದು ಸದಸ್ಯರು ಅಭಿಪ್ರಾಯಪಟ್ಟರು. ಸುದೀರ್ಘ ಚರ್ಚೆ ನಡೆದ ಬಳಿಕ ಕಡೆಗೆ ಈ ಕುರಿತು ಸರ್ಕಾರಕ್ಕೆ ಪತ್ರ ಬರೆದು ಸೂಕ್ತ ನಿರ್ದೇಶನ ಬಂದ ನಂತರ ಅದರಂತೆ ಮುಂದಿನ ಕ್ರಮ ಜರುಗಿಸಲು ಇಂದಿನ ಸಭೆಯು ನಿರ್ಧರಿಸಿತು.

ಈ ಸಂಬಂಧ ಮಾಧ್ಯಮಗಳೊಂದಿಗೆ ಮಾತನಾಡಿದ ಶಾಸಕ ಕೆ.ಹರೀಶ್‌ಗೌಡ, ದಟ್ಟಗಳ್ಳಿಯ 27 ಎಕರೆ ಭೂಮಿ ಸುಮಾರು 400 ಕೋಟಿ ರೂ. ಮೌಲ್ಯದ್ದು. ಈ ಹಗರಣದಲ್ಲಿ ಭಾಗಿ ಯಾಗಿರುವವರು ಯಾರೆಂದು ತನಿಖೆಯಲ್ಲಿ ತಿಳಿಯಬೇಕಿದೆ. ಆದರೆ ಪ್ರಾಧಿಕಾರದ ಆಸ್ತಿಯ ರಕ್ಷಣೆಗೆ ನಮ್ಮ ಹೋರಾಟ ನಿರಂತರವಾಗಿರುತ್ತದೆ. 21–03–2023ರ ಸಭೆಯ ನಿರ್ಣಯವನ್ನು ಸ್ಥಿರೀಕರಣ ಮಾಡಬೇಕು ಎಂದು ನಾನು, ರಮೇಶ್ ಬಂಡಿಸಿದ್ದೇಗೌಡ, ಮರಿತಿಬ್ಬೇಗೌಡ, ದಿನೇಶ್ ಗೂಳಿಗೌಡ, ಮಧುಮಾದೇಗೌಡ, ಡಿ.ತಿಮ್ಮಯ್ಯ, ದರ್ಶನ್ ಧ್ರುವನಾರಾಯಣ್ ಸೇರಿದಂತೆ ಹಲವು ಸದಸ್ಯರು ಒತ್ತಾಯಿಸಿದ್ದೇವೆ. ಹೈಕೋರ್ಟ್ ನಿವೃತ್ತ ನ್ಯಾಯಾಧೀಶರು ಅಥವಾ ಎಸ್‌ಐಟಿ ಮೂಲಕ ತನಿಖೆ ನಡೆಸಲು ಒತ್ತಾಯಿಸಲಾಗಿದೆ. ಅಲ್ಲದೆ ಈ ಸಂಬಂಧ ಮುಖ್ಯಮಂತ್ರಿಗಳ ಗಮನಕ್ಕೂ ತಂದು ತನಿಖೆಗೆ ವಹಿಸಲು ಮನವಿ ಮಾಡಲಾಗುವುದು. ಯಾವ ಉದ್ದೇಶ ಹಾಗೂ ಯಾರ ಹಿತಾಸಕ್ತಿಗಾಗಿ ಹೀಗೆ ಮಾಡಿದ್ದಾರೋ ಗೊತ್ತಿಲ್ಲ. ಇದಕ್ಕೆಲ್ಲಾ ಆ ಸಭೆಯಲ್ಲಿ ನಿರ್ಣಯ ಪಾಸ್ ಮಾಡಿದ ಅಧ್ಯಕ್ಷರು ಹೊಣೆಗಾರರಾಗುತ್ತಾರೆ. ನಮ್ಮ ಸರ್ಕಾರದಲ್ಲಿ ಯಾವುದೇ ಕಾರಣಕ್ಕೂ ಇದಕ್ಕೆ ಪ್ರೋತ್ಸಾಹಿಸುವ ಪ್ರಶ್ನೆಯೇ ಇಲ್ಲ. ತಪ್ಪಿತಸ್ಥರ ವಿರುದ್ಧ ಕ್ರಮವಾಗಲಿದೆ ಎಂದರು.

ಶಾಸಕ ದರ್ಶನ್ ಧ್ರುವನಾರಾಯಣ್ ಪ್ರತಿಕ್ರಿಯಿಸಿ, ಈ ಪ್ರಕರಣ ನ್ಯಾಯಾಲಯದಲ್ಲಿದ್ದು, ಕಾನೂನು ಚೌಕಟ್ಟಿನಲ್ಲಿ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಚರ್ಚೆಯಾಗಿದೆ. ಹಿಂದಿನ ಸಭೆಯ ಅನುಮೋದನೆ ಬಗ್ಗೆ ಮಾಹಿತಿ ಕೇಳಿದ ನಂತರವೇ ನಮಗೆಲ್ಲಾ ಈ ವಿಚಾರ ಗೊತ್ತಾಗಿದ್ದು. ಇದು ಮುಡಾ ಸಮಸ್ಯೆ ಮಾತ್ರವಲ್ಲ. ಸರ್ಕಾರದ ಇಲಾಖೆಗಳು ಹಾಗೂ ಪ್ರಾಧಿಕಾರಗಳಲ್ಲಿ ವಕೀಲರ ನೇಮಿಸಿಕೊಳ್ಳುವಲ್ಲಿ ಯಾವುದೇ ಮಾನದಂಡಗಳನ್ನು ಅನುಸರಿಸದಿರುವುದು ಸಮಸ್ಯೆಯಾಗಿದೆ. ಮುಂದಿನ ದಿನಗಳಲ್ಲಿ ಸಿವಿಲ್ ಪ್ರಕರಣಗಳಿಗೆ ಸಂಬಂಧಿಸಿದಂತೆ ಅವರ ಟ್ರ್ಯಾಕ್ ರೆಕಾರ್ಡ್ ಗಮನಿಸಿ, ಗಂಭೀರವಾಗಿ ಪ್ರಕರಣ ನಡೆಸುವವರಿಗೆ ಅವಕಾಶ ನೀಡುವ ಬಗ್ಗೆ ಸಲಹೆ ನೀಡಲಾಗಿದೆ ಎಂದು ಹೇಳಿದರು.

ಖಾತೆ ವರ್ಗಾವಣೆ: ಅಕ್ರಮ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಸ್ಥಗಿತಗೊಂಡಿದ್ದ ನಿವೇಶನಗಳ ಖಾತಾ ವರ್ಗಾವಣೆ ಪ್ರಕ್ರಿಯೆಯನ್ನು ದಾಖಲೆ ಪತ್ರಗಳನ್ನು ಪರಿಶೀಲಿಸಿ ಮುಂದುವರೆಸುವುದು, ಅದು ಹಳೇ ಬಡಾವಣೆಗಳಿಗೆ ಮಾತ್ರ ಅನ್ವಯಿಸುವಂತಿರಬೇಕು. ಹೊಸ ಬಡಾವಣೆಗಳ ನಿವೇಶನ ಬಿಡುಗಡೆ, ಖಾತಾ ನೋಂದಣಿಯನ್ನು ಸರ್ಕಾರದ ಆದೇಶ ಬರುವವರೆಗೆ ತಡೆ ಹಿಡಿಯುವಂತೆ ನಿರ್ಧರಿಸಲಾಯಿತು.

50:50ರ ಅನುಪಾತ: ಬದಲಿ ನಿವೇಶನ ಕೋರಿರುವವರಿಗೆ 50:50ರ ಅನುಪಾತದಲ್ಲಿ ನಿವೇಶನ ನೀಡುವ ಪ್ರಕ್ರಿಯೆಯನ್ನು ಪ್ರಾಧಿಕಾರದ ಗಮನಕ್ಕೆ ತಂದು ಮುಂದುವರಿಸುವುದು, ಕಮಿಷ್ನರ್ ಹಂತದಲ್ಲಿ ಯಾವುದೇ ನಿರ್ಧಾರ ಕೈಗೊಳ್ಳದಂತೆಯೂ ಮುಡಾ ಸಭೆ ನಿರ್ದೇಶನ ನೀಡಿದೆ.

ನಕ್ಷೆ ಅನುಮೋದನೆ ಇಲ್ಲ: ಹೊಸ ಬಡಾವಣೆಗಳ ನಕ್ಷೆ ಅನುಮೋದನೆ, ಭೂ ಉಪಯೋಗ ಬದಲಾವಣೆ ತಂದು ಭೂಮಿ ಮಂಜೂರಾತಿ ಕೋರಿ ಸಲ್ಲಿಸಿದ್ದ ಅರ್ಜಿಗಳ ಕುರಿತ ಎಲ್ಲಾ ವಿಷಯಗಳನ್ನು ಫೆಬ್ರವರಿ 3ರಂದು ನಡೆಯುವ ಸಭೆಗೆ ಮಂಡಿಸುವಂತೆ ಸಭೆಯು ಸೂಚಿಸಿತು. ಒಟ್ಟು 188 ವಿಷಯಗಳು ಇಂದಿನ ಸಭೆಗೆ ಮಂಡಿಸಲಾಗಿತ್ತಾದರೂ, ಆ ಪೈಕಿ ಬಹುತೇಕ ವಿಷಯಗಳನ್ನು ಮುಂದೂಡಲಾಯಿತು.

ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್, ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ರಮೇಶ್ ಬಾಬು, ಬಂಡಿ ಸಿದ್ದೇಗೌಡ, ವಿಧಾನ ಪರಿಷತ್ ಸದಸ್ಯರಾದ ಎ.ಹೆಚ್. ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮರಿತಿಬ್ಬೇ ಗೌಡ, ಮಧು ಜಿ.ಮಾದೇಗೌಡ, ದಿನೇಶ್ ಗೂಳೀಗೌಡ, ಮುಡಾ ಸೂಪರಿಂಟೆಂಡೆಂಟ್ ಇಂಜಿನಿಯರ್ ಚನ್ನಕೇಶವ, ನಗರ ಯೋಜಕ ಸದಸ್ಯ ಶೇಷ, ಮುಖ್ಯ ಲೆಕ್ಕಾಧಿಕಾರಿ ಮುತ್ತ ಹಾಗೂ ಇತರರು ಸಭೆಯಲ್ಲಿ ಹಾಜರಿದ್ದರು.

ಸರ್ಕಾರಿ ನೌಕರರ ವೇತನ ಪರಿಷ್ಕರಣೆ: ಆಯೋಗ ವರದಿ ಬಳಿಕ ತೀರ್ಮಾನ



ಬೆಂಗಳೂರು: ಏಳನೇ ವೇತನ ಆಯೋಗದ ಅಂತಿಮ ವರದಿ ಬಂದ ನಂತರ ಸರ್ಕಾರಿ ನೌಕರರ ವೇತನ ಪರಿಷ್ಕರಣೆ ಬಗ್ಗೆ ತೀರ್ಮಾನ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ ಅವರ ನೇತೃತ್ವದ ನಿಯೋಗವು ಮುಖ್ಯಮಂತ್ರಿಯವರನ್ನು ಮಂಗಳವಾರ ಭೇಟಿ ಮಾಡಿ ಮನವಿ ಸಲ್ಲಿಸಿದಾಗ ಅವರು ಈ ವಿಷಯ ತಿಳಿಸಿದರು.

ಏಳನೇ ವೇತನ ಆಯೋಗ ರಚನೆ ಆಗಿ 12 ತಿಂಗಳಾಗಿದೆ. ಮಾರ್ಚ್‌ವರೆಗೆ ಕಾಲಾವಧಿ ವಿಸ್ತರಿಸಲಾಗಿದ್ದು, ಲೋಕಸಭಾ ಚುನಾವಣಾ ನೀತಿ ಸಂಹಿತೆ ಘೋಷಣೆ ಆಗುವುದಕ್ಕೆ ಮೊದಲೇ ವೇತನ ಪರಿಷ್ಕರಣೆಯನ್ನು ಘೋಷಿಸಬೇಕು ಎಂದು ನಿಯೋಗ ಮನವಿ ಮಾಡಿತು. ಹೊಸ ಪಿಂಚಣಿ ಯೋಜನೆ ವ್ಯಾಪ್ತಿಯಲ್ಲಿದ್ದ 11,366 ಜನರನ್ನು ಹಳೆ ಪಿಂಚಣಿ ಯೋಜನೆಗೆ ಸೇರ್ಪಡೆಗೊಳಿಸಲಾಗಿದೆ. ಉಳಿದವರನ್ನೂ ಹಳೆ ಪಿಂಚಣಿ ಯೋಜನೆ ವ್ಯಾಪ್ತಿಗೆ ಸೇರಿಸಿ, ಪಿಂಚಣಿಗೆ ನೀಡುತ್ತಿರುವ ಕೊಡುಗೆಯನ್ನು ನಿಲ್ಲಿಸಲು ಆದೇಶಿಸುವಂತೆ ಷಡಾಕ್ಷರಿ ಕೋರಿದರು.

ತೀವ್ರ ಸ್ವರೂಪದ ಏಳು ಕಾಯಿಲೆಗಳಿಗೆ ಚಿಕಿತ್ಸೆ ಒದಗಿಸುವ ಜ್ಯೋತಿ ಸಂಜೀವಿನಿ ಆರೋಗ್ಯ ಯೋಜನೆಗೆ ಚಾಲನೆ ನೀಡಲಾಗಿತ್ತು. ಸರ್ಕಾರಿ ನೌಕರರ ಕುಟುಂಬದವರಿಗೆ ಉಚಿತ ಆರೋಗ್ಯ ಯೋಜನೆಯನ್ನು ಅನುಷ್ಠಾನಗೊಳಿಸಬೇಕು ಎಂದೂ ಅವರು ಮನವಿ ಮಾಡಿದರು. ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಮಂಗಳಮ್ಮ ನಿಧನ



ಮೈಸೂರು, ಜ.16– ಮೈಸೂರಿನ ಚಾಮರಾಜಪುರಂ ನಿವಾಸಿಯೂ ಆದ ನ್ಯಾಯಾಂಗ ಇಲಾಖೆಯ ನಿವೃತ್ತ ಶಿರಸ್ತೇದಾರ್ ಮಂಗಳಮ್ಮ (76) ಅನಾರೋಗ್ಯದಿಂದ ಮಂಗಳವಾರ ನಿಧನರಾದರು.

ಮೃತರು ಪತಿ ಎಂ.ಎಸ್.ವೆಂಕಟಸುಬ್ಬಯ್ಯ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿ ಬೆಟ್ಟದ ಪಾದದ ಸ್ಮಶಾನದಲ್ಲಿ ಮಂಗಳವಾರ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜ.18ಕ್ಕೆ ಸರ್ಕಾರದ ವಿವಿಧ ಖಾಲಿ ಹುದ್ದೆಗಳ ಭರ್ತಿಗೆ ಆಗ್ರಹಿಸಿ ಪ್ರತಿಭಟನೆ

ಬೆಂಗಳೂರು: ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಆಲ್ ಇಂಡಿಯಾ ಡೆಮಾಕ್ರಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಒ) ಆಗ್ರಹಿಸಿದ್ದು, ಇದೇ ಗುರುವಾರ ಬೆಳಿಗ್ಗೆ 11 ಗಂಟೆಗೆ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನಾ ಧರಣಿ ಹಮ್ಮಿಕೊಂಡಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಐಡಿವೈಒ ಉಪಾಧ್ಯಕ್ಷ ಜಿ.ಎಸ್. ಕುಮಾರ್, ಪ್ರತಿಭಟನಾ ಧರಣಿಯಲ್ಲಿ ಮುಖ್ಯ ಅತಿಥಿಗಳಾಗಿ ನಿವೃತ್ತ ಲೋಕಾಯುಕ್ತ ನ್ಯಾಎನ್. ಸಂತೋಷ್ ಹೆಗ್ಡೆ ಹಂಪಿ ಕನ್ನಡ ವಿವಿ ನಿವೃತ್ತ ಪ್ರಾಧ್ಯಾಪಕ ಟಿ.ಆರ್. ಚಂದ್ರಶೇಖರ್, ಲೇಖಕ ನಾ. ದಿವಾಕರ್ ಹಾಗೂ ಚಲನಚಿತ್ರ ನಿರ್ದೇಶಕ ಬಿ. ಸುರೇಶ್ ಭಾಗವಹಿಸಲಿದ್ದಾರೆ ಎಂದರು. ಭಾಷಣಕಾರರಾಗಿ ಎಐಡಿವೈಒ ಅಖಿಲ ಭಾರತ ಉಪಾಧ್ಯಕ್ಷರಾದ ರಾಜಗೋಪಾಲ್, ಜಿ.ಎಸ್. ಕುಮಾರ್, ರಾಜ್ಯಾಧ್ಯಕ್ಷ ಶರಣಪ್ಪ ಉದ್ಬಾಳ್, ರಾಜ್ಯ ಕಾರ್ಯದರ್ಶಿ ಸಿದ್ದಲಿಂಗ ಬಾಗೇವಾಡಿ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಯುವಜನರು ನಿರುದ್ಯೋಗದ ಸುಳಿಯಲ್ಲಿ ಸಿಲುಕಿದ್ದಾರೆ. ದಿನೇ ದಿನೇ ನಿರುದ್ಯೋಗಿಗಳ ಪ್ರಮಾಣ ಹೆಚ್ಚುತ್ತಲೇ ಇದೆ. ಆದ್ದರಿಂದ ಕೇಂದ್ರ ಸರ್ಕಾರದ ವಿವಿಧ ಸಚಿವಾಲಯಗಳಲ್ಲಿ ಖಾಲಿಯಿರುವ 9.64 ಲಕ್ಷ ಹುದ್ದೆ ಹಾಗೂ ರಾಜ್ಯ ಸರ್ಕಾರದ ಶಿಕ್ಷಣ, ಆರೋಗ್ಯ ಸೇರಿ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 2.58 ಲಕ್ಷ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಬೇಕು. ಈ ವರ್ಷ ತೀವ್ರ ಬರಗಾಲ ಇರುವುದರಿಂದ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ವರ್ಷದಲ್ಲಿ ಕನಿಷ್ಠ 200 ದಿನಗಳ ಕೆಲಸ ನೀಡಿ, ದಿನಗೂಲಿಯನ್ನು 600ಕ್ಕೆ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ರಾಜ್ಯದಲ್ಲಿ ಕೊರೊನಾ ಇಳಿಮುಖ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್–19 ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಇಳಿಯಾಗುತ್ತಿದ್ದು, ಮಂಗಳವಾರ 63 ಮಂದಿಗೆ ಕೊರೊನಾ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 751ಕ್ಕೆ ಇಳಿಕೆಯಾಗಿದೆ. ಕಳೆದ 24 ಗಂಟೆಗಳಲ್ಲಿ ಬೆಂಗಳೂರಿನಲ್ಲಿ 14 ಪಾಸಿಟಿವ್ ಪ್ರಕರಣ ಸೇರಿದಂತೆ ರಾಜ್ಯದಲ್ಲಿ 63 ಮಂದಿಗೆ ಕೋವಿಡ್–19 ಪಾಸಿಟಿವ್ ದೃಢಪಟ್ಟಿದೆ. ಸೋಂಕಿನಿಂದ ಇಂದು ಯಾವುದೇ ಸಾವು ವರದಿಯಾಗಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ. ಇಂದು ಕೋವಿಡ್ ನಿಂದ 175 ಮಂದಿ ಗುಣಮುಖರಾಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ.



ಮೈಸೂರಿನ ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ಗೋವುಗಳಿಗೆ ಪೂಜೆ ಸಲ್ಲಿಸುವ ಮೂಲಕ ಶಾಸಕ ಕೆ.ಹರೀಶ್‌ಗೌಡ ಸಂಕ್ರಾಂತಿ ಆಚರಿಸಿದರು. ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಶುಶ್ರುತ್ ಗೌಡ, ಎಸ್.ಆರ್.ರವಿಕುಮಾರ್, ನವೀನ್, ಹಾಗೂ ಇತರರು ಹಾಜರಿದ್ದರು.

ಹಿಟ್ ಅಂಡ್ ರನ್ ಪ್ರಕರಣಗಳಲ್ಲಿ ಚಾಲಕರಿಗೆ ಶಿಕ್ಷೆ, ದಂಡ ವಿರೋಧಿಸಿ

ಇಂದು ಮಧ್ಯರಾತ್ರಿಯಿಂದ ಲಾರಿ ಮುಷ್ಕರ



ಮೈಸೂರು, ಜ. 16 (ಆರ್‌ಕೆ)–ಹಿಟ್ ಅಂಡ್ ರನ್ ಪ್ರಕರಣಗಳಲ್ಲಿ ಚಾಲಕರಿಗೆ 10 ವರ್ಷ ಕಠಿಣ ಜೈಲು ಶಿಕ್ಷೆ ಹಾಗೂ ಹತ್ತು ಲಕ್ಷ ರೂ.ವರೆಗೂ ದಂಡ ವಿಧಿಸುವ ನೂತನ ಕಾಯ್ದೆ ಜಾರಿ ವಿರೋಧಿಸಿ ನಾಳೆ (ಜ.17) ಮಧ್ಯರಾತ್ರಿಯಿಂದ ಲಾರಿ ಮಾಲೀಕರು ಮತ್ತು ಚಾಲಕರು ರಾಜ್ಯಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರ ನಡೆಸುವರು.

ಅಪಘಾತವಾದಾಗ ಹಿಟ್ ಅಂಡ್ ರನ್ ಮಾಡಿದ ಸರಕು ಸಾಗಣೆ ವಾಹನಗಳು, ಅದರಲ್ಲೂ ಪ್ರಮುಖವಾಗಿ ಲಾರಿ ಚಾಲಕರ ವಿರುದ್ಧ ನಾಗರಿಕ ಸಂರಕ್ಷಣಾ ಕಾಯ್ದೆ 2023 ವಿಧೇಯಕವನ್ನು ಜಾರಿಗೆ ತಂದು ಚಾಲಕರಿಗೆ 10 ವರ್ಷ ಕಠಿಣ ಜೈಲು ಶಿಕ್ಷೆ ಹಾಗೂ 10 ಲಕ್ಷ ರೂ.ಗಳವರೆಗೆ ದಂಡ ವಿಧಿಸಲು ಕೇಂದ್ರ ಸರ್ಕಾರ ಮುಂದಾಗಿರುವುದು ನಮ್ಮ ಅಸ್ತಿತ್ವಕ್ಕೆ ಮಾರಕವಾದುದಾಗಿದೆ ಎಂದು ಮೈಸೂರು ಜಿಲ್ಲಾ ಲಾರಿ ಮಾಲೀಕರ ಮತ್ತು ಚಾಲಕರ ಒಕ್ಕೂಟದ ಅಧ್ಯಕ್ಷ ಬಿ.ಕೋದಂಡರಾಮು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಬುಧವಾರ ಮಧ್ಯರಾತ್ರಿಯಿಂದ ಮೈಸೂರು ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ ಲಾರಿ ಸಂಚಾರ ಸ್ಥಗಿತ ಗೊಳಿಸಿ ಈ ಕಾನೂನು ವಾಪಸ್ ಪಡೆಯುವವರೆಗೂ ಮುಷ್ಕರ ನಡೆಸಲು ತೀರ್ಮಾನಿಸಿದ್ದೇವೆ. ಒಂದು ವೇಳೆ ನಾಗರಿಕ ಸುರಕ್ಷತಾ ಕಾಯ್ದೆ–2023ರ ವಿಧೇಯಕ ಜಾರಿಗೆ ಬಂದಲ್ಲಿ ಸಾರಿಗೆ ಉದ್ಯಮವನ್ನು ಅವಲಂಬಿಸಿರುವ ಲಕ್ಷಾಂತರ ಕುಟುಂಬಕ್ಕೆ ತೊಂದರೆಯಾಗಲಿದೆ ಎಂದರು. ಈ ಕಾಯ್ದೆಯಿಂದ ಲಾರಿ ಮಾಲೀಕರು, ಚಾಲಕರು ಹಾಗೂ ಕ್ಲೀನರ್‌ಗಳು ಆತಂಕಕ್ಕೊಳಗಾಗಿದ್ದು, ಯಾರೂ ಉದ್ದೇಶಪೂರ್ವಕವಾಗಿ ಅಪಘಾತ ಮಾಡುವುದಿಲ್ಲ. ಆದರೆ ಅಪಘಾತ ಸಂಭವಿಸಿದಾಗ ಸಾರ್ವಜನಿಕರು ದೈಹಿಕ ಹಲ್ಲೆ ನಡೆಸುತ್ತಾರೆ ಎಂಬ ಭಯದಿಂದ ಚಾಲಕರು ಮತ್ತು ಕ್ಲೀನರ್‌ಗಳು ಆ ಕ್ಷಣ ಪಾರಾಗುವ ದೃಷ್ಟಿಯಿಂದ ವಾಹನ ಬಿಟ್ಟು ಸ್ಥಳದಿಂದ ಪರಾರಿ ಯಾಗುತ್ತಾರೆ ಎಂದು ಕೋದಂಡರಾಮು ತಿಳಿಸಿದ್ದಾರೆ.

ಅಪಾಯದಿಂದ ಪಾರಾಗಲೆಂದು ಲಾರಿ ಚಾಲಕರು ವಾಹನದೊಂದಿಗೆ ಅಥವಾ ವಾಹನ ಬಿಟ್ಟು ಪರಾರಿ ಯಾದರೆ ಅವರ ವಿರುದ್ಧ ಹಿಟ್ ಅಂಡ್ ರನ್ ಕೇಸು ದಾಖಲಿಸಿ ಹೊಸ ಕಾಯ್ದೆಯನುಸಾರ ಕಠಿಣ ಶಿಕ್ಷೆ ವಿಧಿಸಿ ದಂಡ ಪಾವತಿಸುವ ಕಾನೂನು ತಂದರೆ, ಅವರ ಕುಟುಂಬಗಳು ಬೀದಿ ಪಾಲಾಗುತ್ತವೆ ಎಂದು ಕೋದಂಡರಾಮು ನುಡಿದರು. ಒಂದು ವೇಳೆ ಈ ಕಾಯ್ದೆ ಜಾರಿಗೆ ಬಂದಲ್ಲಿ ಲಾರಿ ಚಾಲಕರು ಕೆಲಸಕ್ಕೆ ಬರುವುದಿಲ್ಲ. ಈಗಾಗಲೇ ಕಾಡಿ ಬೇಡಿ ಲಾರಿ ಚಾಲನೆಗೆ ಲಕ್ಷಾಂತರ ರೂ. ಮುಂಗಡ ಕೊಟ್ಟು ಚಾಲಕರನ್ನು ನೇಮಿಸಿಕೊಳ್ಳುವ ಪರಿಸ್ಥಿತಿ ಇರುವಾಗ ಇಷ್ಟೊಂದು ಕಠಿಣ ಕಾನೂನು ಜಾರಿಗೊಳಿಸಿದರೆ, ಅವರು ತಮ್ಮ ವೃತ್ತಿಯನ್ನೇ ಬಿಟ್ಟು ಬೇರೆ ಕೆಲಸ ಆರಂಭಿಸುತ್ತಾರೆ ಎಂದು ಅವರು ತಿಳಿಸಿದರು.

ಈ ಕಾಯ್ದೆಯನ್ನು ವಾಪಸ್ ಪಡೆಯುವವರೆಗೂ ನಾವು ಲಾರಿ ಮುಷ್ಕರ ಕೈಬಿಡುವ ಪ್ರಶ್ನೆಯೇ ಇಲ್ಲ. ಅತ್ಯವಶ್ಯ ಸೇವೆಗಳನ್ನು ಹೊರತುಪಡಿಸಿ ಇತರ ಎಲ್ಲಾ ಬಗೆಯ ಸರಕು ಸಾಗಣೆ ವಾಹನಗಳು ಮಂಗಳವಾರ ಮಧ್ಯರಾತ್ರಿಯಿಂದ ಲಾರಿ ಮುಷ್ಕರ ನಡೆಸಬೇಕೆಂದು ರಾಜ್ಯ ಸಂಘದ ರಾಜ್ಯಾಧ್ಯಕ್ಷ ಸಲಹೆ ನೀಡಿದ್ದಾರೆ ಎಂದು ಕೋದಂಡರಾಮು ತಿಳಿಸಿದ್ದಾರೆ.

ಮುಷ್ಕರಕ್ಕೆ ಆಟೋ, ಟ್ಯಾಕ್ಸಿ, ಕ್ಯಾಬ್ ಇನ್ನಿತರ ಸರಕು ಸಾಗಣೆ ವಾಹನಗಳ ಮಾಲೀಕರು ಮತ್ತು ಚಾಲಕರೂ ಕೈ ಜೋಡಿಸಿ ಬೆಂಬಲ ನೀಡುವುದಾಗಿ ತಿಳಿಸಿದ್ದಾರೆ ಎಂದರು. ಈಗಾಗಲೇ ಪೊಲೀಸ್, ಸಾರಿಗೆ ಇಲಾಖೆಯಿಂದ ಚಾಲಕರು ತೀವ್ರ ಸಮಸ್ಯೆ ಎದುರಿಸುತ್ತಿದ್ದಾರೆ. ಒಂದು ವೇಳೆ ಈ ಕಾಯ್ದೆ ಜಾರಿಗೊಳಿಸಿದರೆ, ಯಾರೂ ಈ ವೃತ್ತಿಯಲ್ಲಿ ಮುಂದುವರೆಯುವುದಿಲ್ಲ ಎಂದು ಕೋದಂಡರಾಮು ತಿಳಿಸಿದರು.

ಕರ್ನಾಟಕ ಗ್ರಾಮೀಣ ಬ್ಯಾಂಕ್‌ಗೆ ಮುತ್ತಿಗೆ ಹಾಕಿ ರೈತರ ಪ್ರತಿಭಟನೆ



ಮೈಸೂರು,ಜ.16(ಪಿಎಂ)–ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಕೆಲ ಅಧಿಕಾರಿಗಳು ಕಾನೂನುಬಾಹಿರವಾಗಿ ರೈತರೊಬ್ಬರ ಮನೆಯನ್ನು ಹರಾಜು ಹಾಕಿದ್ದಾರೆ ಎಂದು ಆರೋಪಿಸಿ ಮೈಸೂರಿನ ವಿಜಯನಗರ ಎರಡನೇ ಹಂತದಲ್ಲಿರುವ ಬ್ಯಾಂಕ್‌ನ ಪ್ರಧಾನ ಕಚೇರಿಗೆ ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ರೈತರು ಮಂಗಳವಾರ ಮುತ್ತಿಗೆ ಹಾಕಿ, ಪ್ರತಿಭಟನೆ ನಡೆಸಿದರು.

ಮೈಸೂರು ಜಿಲ್ಲೆ ಕೆಆರ್ ನಗರದ ಕರ್ನಾಟಕ ಗ್ರಾಮೀಣ ಬ್ಯಾಂಕ್ ಶಾಖೆಯಲ್ಲಿ ಪಿಎಂಇಜಿಪಿ ಯೋಜನೆ ಮೂಲಕ 2013ರಲ್ಲಿ ದೊರೆಸ್ವಾಮಿ ಎಂಬ ಯುವಕ 15 ಲಕ್ಷ ರೂ. ಸಾಲ ಪಡೆದಿದ್ದು, ಅದಕ್ಕಾಗಿ ಕಳೆದ 27–03–2023ರವರೆಗೆ 18.98,000 ರೂ.ಗಳನ್ನು ಪಾವತಿ ಮಾಡಿದ್ದರೂ ಬ್ಯಾಂಕಿನ ಆಡಳಿತ ಮಂಡಳಿಯ ಕೆಲ ಅಧಿಕಾರಿಗಳು ರೈತನ ಆಸ್ತಿ ಕಬಳಿಸುವ ದುರುದ್ದೇಶದಿಂದ ಆತನ ಮನೆಯನ್ನು ಕಾನೂನುಬಾಹಿರವಾಗಿ ಹರಾಜು ಹಾಕಿದ್ದಾರೆ ಎಂದು ಆರೋಪಿಸಿದರು. ಬಡ್ಡಿ ಸೇರಿದಂತೆ ಒಟ್ಟು 24 ಲಕ್ಷ ರೂ. ಸಾಲ ಮರುಪಾವತಿ ಮಾಡಬೇಕಿತ್ತು. ಆದರೆ ಬಾಕಿ ಪಾವತಿಗೆ ಕಾಲಾವಕಾಶ ನೀಡದೇ ಏಕಪಕ್ಷೀಯವಾಗಿ ಹರಾಜು ಹಾಕುವ ಮೂಲಕ ಇಡೀ ಕುಟುಂಬವನ್ನು ಬೀದಿಗೆ ತಳ್ಳಲಾಗಿದೆ. ಬ್ಯಾಂಕ್‌ನ ಈ ರೀತಿಯ ವಸೂಲಾತಿ ಕ್ರಮ ಖಂಡನೀಯ. ರೈತನ ಆಸ್ತಿ ಹರಾಜು ಹಾಕಿರುವುದನ್ನು ರದ್ದುಪಡಿಸಿ, ಸಾಲವನ್ನು ಮರುಪಾವತಿಸಲು ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ಹುಣಸೂರು ತಾಲೂಕು ಹೆಜ್ಜೊಡ್ಲು ಗ್ರಾಮದ ಹೇಮಚಂದ್ರ, ಶರತ್ ಚಂದ್ರರವರು ಮನೆ ನಿರ್ಮಾಣಕ್ಕಾಗಿ ಬೆಂಗಳೂರಿನ ಚಿಕ್ಕಬಸ್ತಿ ಶಾಖೆಯಲ್ಲಿ ಪಡೆದ ಸಾಲದ ಮೇಲೆ ಅಧಿಕ ಬಡ್ಡಿ ಹಾಗೂ ಇತರೆ ವೆಚ್ಚವನ್ನು ಸೇರಿಸಿ ಹೆಚ್ಚು ವಸೂಲಿ ಮಾಡಲಾಗಿದೆ ಎಂದು ಆರೋಪಿಸಿದರಲ್ಲದೆ, ಈ ಹೆಚ್ಚುವರಿ ವಸೂಲಾತಿ ಸಹ ಕೈಬಿಡಬೇಕೆಂದೂ ಆಗ್ರಹಿಸಿದರು.

ಬೇಡಿಕೆಗಳನ್ನು ಈಡೇರಿಸುವ ಬ್ಯಾಂಕ್‌ನ ಸಹಾಯಕ ಪ್ರಧಾನ ವ್ಯವಸ್ಥಾಪಕರ ಭರವಸೆ ಮೇರೆಗೆ ರೈತರು ಪ್ರತಿಭಟನೆ ಕೈಬಿಟ್ಟರು. ರೈತ ಸಂಘದ ಪದಾಧಿಕಾರಿಗಳಾದ ಪ್ರಸನ್ನ ಎನ್.ಗೌಡ, ಪಿ.ಮರಂಕಯ್ಯ, ಆನಂದೂರು ಪ್ರಭಾಕರ್, ನಾಗನಹಳ್ಳಿ ವಿಜಯೇಂದ್ರ, ನಾಗನಹಳ್ಳಿ ಚಂದ್ರಶೇಖರ್ ಮತ್ತಿತರರು ಪತಿಭಟನೆಯಲಿ ಪಾಲೊಂಡಿದರು.

ಮೈಸೂರಲ್ಲಿ ಸುಗ್ಗಿ ಹಬ್ಬ ಸಂಕ್ರಾಂತಿ ಸಂಭ್ರಮದ ಆಚರಣೆ

ಕಬ್ಬು, ಎಳ್ಳು, ಬೆಲ್ಲ ಹಂಚಿ; ಪರಸ್ಪರ ಶುಭ ಹಾರೈಕೆ



ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಅಯ್ಯಪ್ಪಸ್ವಾಮಿ ದೇವಾಲಯದ ಆವರಣದಲ್ಲಿ ಸಂಕ್ರಾಂತಿ ಹಿನ್ನೆಲೆಯಲ್ಲಿ ದೀಪೋತ್ಸವ ನೆರವೇರಿಸಲಾಯಿತು.

ಮೈಸೂರು, ಜ.16(ಎಂಟಿವೈ)–ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಸೋಮವಾರ ಸುಗ್ಗಿ ಹಬ್ಬ ಸಂಕ್ರಾಂತಿ ಸಡಗರ ಮನೆ ಮಾಡಿತ್ತು. ಹಬ್ಬದ ಅಂಗವಾಗಿ ದೇವಾಲಯಗಳಲ್ಲಿ ವಿಶೇಷ ಪೂಜೆ ನೆರವೇರಿದರೆ, ಹೆಂಗಳೆಯರು ಮನೆ ಮನೆಗೆ ಎಳ್ಳು–ಬೆಲ್ಲ ಹಂಚಿ ಸಂಭ್ರಮಿಸಿದರು.

2024ನೇ ಸಾಲಿನ ಮೊದಲ ಹಬ್ಬವಾದ ಸಂಕ್ರಾಂತಿ ಹಬ್ಬವನ್ನು ಎಲ್ಲೆಡೆ ಸಂಭ್ರಮದಿಂದ ಆಚರಿಸಲಾಯಿತು. ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿ ರೈತರು ಸುಗ್ಗಿಹಬ್ಬವನ್ನು ಸಡಗರದಿಂದ ಆಚರಿಸಿದರು. ಉತ್ತರಾಯಣ ಪುಣ್ಯಕಾಲ ಎಂದು ಕರೆಸಿಕೊಳ್ಳುವ ಮಕರ ಸಂಕ್ರಾಂತಿ ಸಮೃದ್ಧಿಯ ಸಂಕೇತವಾಗಿದ್ದು, ಸೋಮವಾರ ಬೆಳಗ್ಗೆಯಿಂದಲೇ ಮೈಸೂರಿನ ಬಹುತೇಕ ದೇವಾಲಯಗಳಲ್ಲಿ ವಿಶೇಷ ಪೂಜೆ ಜರುಗಿದವು. ಇದರಿಂದ ದೇವಾಲಯಗಳ ಭಕ್ತಗಣದ ಸಂಖ್ಯೆ ಹೆಚ್ಚಾಗಿ ಕಂಡು ಬಂದಿತು. ದೇವಾಲಯಗಳಲ್ಲಿ ಮಹಿಳಾ ಭಕ್ತರು ಎಳ್ಳು–ಬೆಲ್ಲ ಹಾಗೂ ಪೊಂಗಲ್ ವಿತರಿಸಿ ಶುಭಾಶಯ ವಿನಿಮಯ ಮಾಡಿಕೊಂಡರು.

ಎಳ್ಳು–ಬೆಲ್ಲ ಹಂಚಿದ ಹೆಂಗಳೆಯರು: ಸಂಕ್ರಾಂತಿ ಪೂಜೆ ಬಳಿಕ ಸಂಜೆಯಾಗುತ್ತಿದ್ದಂತೆಯೇ ಯುವತಿಯರು ಹಾಗೂ ಮುತ್ತೈದೆಯರು, ಪುಟ್ಟ ಮಕ್ಕಳು ಹೊಸ ಬಟ್ಟೆ ಧರಿಸಿ, ಅಲಂಕಾರ ಮಾಡಿಕೊಂಡು ಮನೆ–ಮನೆಗೆ ತೆರಳಿ ಎಳ್ಳು–ಬೆಲ್ಲದ ಮಿಶ್ರಣ ನೀಡಿ, 'ಎಳ್ಳು–ಬೆಲ್ಲ ತಿಂದು ಒಳ್ಳೆ ಮಾತಾಡುವ' ಸಂದೇಶ ಸಾರಿದರು.

ಕಣ್ಮನ ಸೆಳೆದ ರಂಗೋಲಿ ಚಿತ್ತಾರ: ಸಂಕ್ರಾಂತಿ ಹಿನ್ನೆಲೆಯಲ್ಲಿ ಮನೆ ಮುಂದೆ ರಂಗೋಲಿಗಳನ್ನು ಬಿಡಿಸಿದ ಮಹಿಳೆಯರು ಸಂಕ್ರಾಂತಿ ಹಬ್ಬಕ್ಕೆ ಮೆರಗು ತುಂಬಿದರು. ಮಕ್ಕಳು, ಹೊಸ ಬಟ್ಟೆ ಧರಿಸಿ ತಮ್ಮ ನೆರೆಹೊರೆಯ ಹಾಗೂ ಸಂಬಂಧಿಕರ ಮನೆಗಳಿಗೆ ತೆರಳಿ ಎಳ್ಳು–ಬೆಲ್ಲ ಹಂಚುವ ಮೂಲಕ ಹಬ್ಬವನ್ನು ಸಂಭ್ರಮಿಸಿದರು.

ಹೊಸ ವಾಹನಗಳ ಭರಾಟೆ: 2024 ವರ್ಷದಲ್ಲಿ ಹೊಸದಾಗಿ ಖರೀದಿಸಿದ್ದ ಹಲವು ವಾಹನಗಳಿಗೆ ಸಂಕ್ರಾಂತಿಯಂದು ಪೂಜೆ ಸಲ್ಲಿಸಿದರು. ಅರಮನೆ ಮುಂಭಾಗದ ಗಣಪತಿ ದೇವಾಲಯ, ಅಗ್ರಹಾರದ ನೂರೊಂದು ಗಣಪತಿ ದೇವಾಲಯ ಸೇರಿದಂತೆ ವಿವಿಧ ದೇವಾಲಯಗಳ ಮುಂದೆ ಪೂಜೆ ಸಲ್ಲಿಸಲೆಂದು ಹೊಸ ವಾಹನಗಳನ್ನು ಸರದಿ ಸಾಲಿನಲ್ಲಿ ನಿಲ್ಲಿಸಿದ್ದ ದೃಶ್ಯ ಕಂಡು ಬಂದಿತು. ಕಳೆದ ಒಂದು ತಿಂಗಳಿನಿಂದ ಬಿಡುವು ನೀಡಿದಂತೆ ಕಂಡುಬಂದಿದ್ದ ವಾಹನೋದ್ಯಮಕ್ಕೂ ಸಂಕ್ರಾಂತಿ ಚೈತನ್ಯ ನೀಡಿರುವುದು ನಗರದಲ್ಲಿ ಕಂಡುಬಂತು. ಧನುರ್ಮಾಸದ ಹಿನ್ನೆಲೆಯಲ್ಲಿ ಹೊಸ ವಾಹನಗಳ ಖರೀದಿಗೆ ಹಿಂದೇಟು ಹಾಕುತ್ತಿದ್ದ ಜನರು ಸಂಕ್ರಾಂತಿಯ ಆಚರಣೆಯೊಂದಿಗೆ ವಾಹನಗಳ ಖರೀದಿಗೂ ಮುಂದಾಗಿದ್ದಾರೆ.

ಪೊಲೀಸ್ ಠಾಣೆಗಳಲ್ಲೂ ಪೂಜೆ: ಹಿಂದೂ ಸಂಪ್ರದಾಯದಲ್ಲಿ ಸಂಕ್ರಾಂತಿ ಹಬ್ಬಕ್ಕೆ ತನ್ನದೇ ಮಹತ್ವವಿದ್ದು, ಅದರಲ್ಲೂ ಗ್ರಾಮೀಣ ಪ್ರದೇಶ ಮತ್ತು ರೈತರ ಮನೆಗಳಲ್ಲಿ ಸಂಕ್ರಾಂತಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ. ನಗರ ಪ್ರದೇಶದಲ್ಲೂ ಮನೆ, ದೇವಾಲಯಗಳಲ್ಲಿ ಹಬ್ಬ ಆಚರಿಸಲಾಗುತ್ತಿತ್ತು. ಈ ಬಾರಿ ಪೊಲೀಸ್ ಠಾಣೆ, ಮಾಲ್, ಆಸ್ಪತ್ರೆಗಳಲ್ಲೂ ಸಂಕ್ರಾಂತಿ ಆಚರಿಸಲಾಯಿತು. ಅಶೋಕಪುರಂ ಪೊಲೀಸ್ ಠಾಣೆ, ಕೃಷ್ಣರಾಜ ಪೊಲೀಸ್ ಠಾಣೆಗಳ ಮುಂದೆ ಸಂಕ್ರಾಂತಿಯ ರಂಗೋಲಿ ಕಂಗೊಳಿಸಿದರೆ ಸಿಬ್ಬಂದಿ ಪರಸ್ಪರ ಎಳ್ಳು, ಬೆಲ್ಲ ಹಂಚಿ ಸಂಭ್ರಮಿಸಿದರು. ಅಲ್ಲದೆ, ನಗರದ ಖಾಸಗಿ ಮಾಲ್‌ಗಳು, ಹೋಟೆಲ್‌ಗಳು ಕೂಡ ಕಬ್ಬು ಇಟ್ಟು ವಿಶೇಷವಾಗಿ ಅಲಂಕಾರ ಮಾಡಿ ಸಂಕ್ರಾಂತಿಯ ರಂಗು ಹೆಚ್ಚಿಸಿದ್ದವು.



ಮಂಡ್ಯದಲ್ಲಿ ಜಾನುವಾರುಗಳಿಗೆ ಕಿಚ್ಚು ಹಾಯಿಸುತ್ತಿರುವುದು.

ಧನುರ್ಮಾಸದ ಪೂಜೆ ಕೊನೆ: ಕಳೆದ ಒಂದು ತಿಂಗಳಿಂದ ಆಚರಣೆಯಲ್ಲಿದ್ದ ಧನುರ್ಮಾಸ ಪೂಜೆಗಳು ಭಾನುವಾರ ಮುಕ್ತಾಯಗೊಂಡಿದ್ದು, ಸಂಕ್ರಾಂತಿ ಆಚರಣೆಯೊಂದಿಗೆ ಎಂದಿನ ಪೂಜಾ ಪದ್ಧತಿಗಳು ಪ್ರಾರಂಭಗೊಂಡಿವೆ. ಅಲ್ಲದೆ, ಧನುರ್ಮಾಸ ಸಮಾಪ್ತಿಗೊಂಡಿದ್ದು, ಮಾಘ ಮಾಸ ಪ್ರಾರಂಭಗೊಂಡಿದೆ.

ಜಾನುವಾರುಗಳಿಗೆ ಕಿಚ್ಚು ಹಾಯಿಸಿದ ಜನ: ಈ ಬಾರಿ ಸಂಕ್ರಾಂತಿ ಹಬ್ಬ ಸೋಮವಾರ ಬಂದಿರುವುದರಿಂದ ಭಾನುವಾರ ಸಂಜೆಯೇ ರಾಸುಗಳಿಗೆ ಕಿಚ್ಚು ಹಾಯಿಸಲಾಗಿತ್ತು. ಭಾನುವಾರ ಕಿಚ್ಚು ಹಾಯಿಸದೇ ಇದ್ದವರು ಸೋಮವಾರ ಕಿಚ್ಚು ಹಾಯಿಸಿದರು.

ರಾಸುಗಳಿಗೆ ಬಣ್ಣದ ಚಿತ್ತಾರ: ಮೈಸೂರು ಮಹಾನಗರವಾದರೂ ಹಲವೆಡೆ ಗ್ರಾಮೀಣ ಸೊಗಡನ್ನು ಬಿಟ್ಟುಕೊಟ್ಟಿಲ್ಲ. ಕನ್ನೇಗೌಡನ ಕೊಪ್ಪಲು, ಕುಂಬಾರಕೊಪ್ಪಲು, ಹೆಬ್ಬಾಳು, ಶ್ರೀರಾಂಪುರ ಸೇರಿದಂತೆ ನಗರದ ಹಲವು ಕಡೆಗಳಲ್ಲಿ ಇಂದಿಗೂ ರಾಸುಗಳನ್ನು ಸಾಕಲಾಗುತ್ತಿದ್ದು, ಸಂಕ್ರಾಂತಿ ದಿನ ಅವುಗಳಿಗೆ ವಿಶೇಷ ಪೂಜೆ ಸಲ್ಲಿಸಲಾಗುತ್ತಿದೆ. ರಾಸುಗಳ ಮೈಗೆ ಹಳದಿ ಬಣ್ಣ ಬಳಿದು, ಕೊಂಬುಗಳನ್ನು ಕೆಂಪು, ನೀಲಿ ಬಣ್ಣಗಳಿಂದ ಅಲಂಕರಿಸಿ ಹಾರ ಹಾಕಿ ಪೂಜಿಸಲಾಯಿತು. ಜಾನುವಾರು ಸಾಕದವರೂ ಕೂಡ ಅವುಗಳನ್ನು ಹುಡುಕಿಕೊಂಡು ಹೋಗಿ ಅಕ್ಕಿ, ಬೆಲ್ಲ ನೀಡಿ ಪೂಜೆ ಸಲ್ಲಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಸಂಸತ್ ಭವನಕ್ಕೆ ನುಗ್ಗಿ ಲೋಕಸಭಾ ಕಲಾಪದಲ್ಲಿ ರಂಪಾಟ ಪ್ರಕರಣ

ಮೈಸೂರಿನ ಮನೋರಂಜನ್ ಸೇರಿ ಆರು ಮಂದಿಗೆ ನ್ಯಾಯಾಂಗ ಬಂಧನ



ಮೈಸೂರು, ಜ.16(ಬಿಎಲ್‌ಯು)–ಸಂಸತ್ ಭವನಕ್ಕೆ ನುಗ್ಗಿ ಲೋಕಸಭೆಯ ಕಲಾಪ ದೊಳಗೆ ಕಲರ್ ಸ್ಮೋಕ್ ಸ್ಫೋಟಿಸಿದ ಮೈಸೂರಿನ ಮನೋರಂಜನ್, ಸಾಗರ್ ಶರ್ಮಾ ಸೇರಿದಂತೆ ಆರು ಮಂದಿ ಆರೋಪಿಗಳನ್ನು ದೆಹಲಿಯ ಪಟಿಯಾಲ ಹೌಸ್ ಕೋರ್ಟ್ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ದೆಹಲಿಯ ಪಟಿಯಾಲ ಹೌಸ್ ಕೋರ್ಟ್‌ನ ಹೆಚ್ಚುವರಿ ಸೆಷನ್ ನ್ಯಾಯಾಲಯದ ನ್ಯಾಯಾಧೀಶ ಹರ್ದೀಪ್ ಕೌರ್ ಮುಂದೆ ಆರು ಆರೋಪಿಗಳನ್ನು ದೆಹಲಿ ಪೊಲೀಸರು ಶನಿವಾರ ಹಾಜರು ಪಡಿಸಿದರು. ಈ ವೇಳೆ ನ್ಯಾಯಾಧೀಶರು ಆರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು. ಸಂಸತ್ ಭವನದೊಳಗೆ ನುಗ್ಗಿರುವ ಕೃತ್ಯದ ಹಿಂದಿರುವ ಸಂಘಟನೆ ಹಾಗೂ ಕಾಣದ ಕೈಗಳ ರಹಸ್ಯ ಭೇದಿಸಲು ದೆಹಲಿ ಪೊಲೀಸರು ಆರು ಆರೋಪಿಗಳನ್ನು ಪಾಲಿಗ್ರಾಫ್ ಟೆಸ್ಟ್‌ಗೆ ಒಳಪಡಿಸಲು ಅನುಮತಿ ಕೇಳಿದ್ದರು. ಆರು ಆರೋಪಿಗಳಲ್ಲಿ ಮನೋರಂಜನ್ ಹಾಗೂ ಸಾಗರ್ ಶರ್ಮಾನನ್ನು ಪಾಲಿಗ್ರಾಫ್ ಟೆಸ್ಟ್ ಜೊತೆಗೆ ನಾರ್ಕೋ ಅನಾಲಿಸಿಸ್ ಹಾಗೂ ಬ್ರೈನ್ ಮ್ಯಾಪಿಂಗ್ ಪರೀಕ್ಷೆಗೊಳಪಡಿಸಲು ನ್ಯಾಯಾಲಯದ ಮುಂದೆ ಮನವಿ ಮಾಡಿದ್ದರು.


ಇದಕ್ಕೆ ನ್ಯಾಯಾಲಯ ಸಮ್ಮತಿಸಿತ್ತು. ಆರು ಆರೋಪಿಗಳನ್ನು ಡಿಸೆಂಬರ್ 8ರಂದು ಗುಜರಾತ್‌ನ ಗಾಂಧಿನಗರದ ಫೋರೆನ್ಸಿಕ್ ಲ್ಯಾಬ್ ನಲ್ಲಿ ವೈಜ್ಞಾನಿಕ ಪರೀಕ್ಷೆಗೊಳಪಡಿಸಲಾಗಿತ್ತು.

ನಿರುದ್ಯೋಗ ಸಮಸ್ಯೆ, ಮಣಿಪುರದ ಬಿಕ್ಕಟ್ಟು, ರೈತರ ಸಮಸ್ಯೆ ಸೇರಿದಂತೆ ಸಮಾಜವನ್ನು ಕಾಡುತ್ತಿರುವ ಹಲವು ಸಮಸ್ಯೆಗಳ ಬಗ್ಗೆ ಸರ್ಕಾರಕ್ಕೆ ಎಚ್ಚರಿಕೆ ಸಂದೇಶ ರವಾನಿಸಲು ಆರೋಪಿಗಳು ಈ ಕೃತ್ಯ ನಡೆಸಿದ್ದರು ಎಂಬ ಮಾಹಿತಿ ಪಾಲಿಗ್ರಾಫ್ ಟೆಸ್ಟ್‌ನಿಂದ ತಿಳಿದು ಬಂದಿದೆ. ಮನೋರಂಜನ್ ಇಡೀ ಕೃತ್ಯದ ಮಾಸ್ಟರ್ ಮೈಂಡ್ ಎಂಬುದು ಪರೀಕ್ಷೆ ವೇಳೆ ಖಚಿತವಾಗಿದೆ ಎನ್ನಲಾಗಿದೆ.

ಈ ಮೂಲಕ ಸಂಸತ್ ಭವನದೊಳಗೆ ನುಗ್ಗಲು ಮನೋರಂಜನ್ ಯೋಜನೆ ರೂಪಿಸಿದ್ದನು. ಈ ಕೃತ್ಯಕ್ಕೆ ಮೂಲ ಕಾರಣಕರ್ತನಾದ ಈತ ತನ್ನ ಸಮಾನ ಮನಸ್ಕ ಚಿಂತನೆಯುಳ್ಳ ಐವರನ್ನು ಒಟ್ಟಿಗೆ ಸೇರಿಸಿ ಈ ಕೃತ್ಯ ಎಸಗಿದ್ದಾನೆ ಎಂಬುವುದು ದೃಢಪಟ್ಟಿದೆ ಎಂದು ತಿಳಿದು ಬಂದಿದೆ.

ಪೈಪ್‌ನೊಳಗೆ ಸಿಲುಕಿದ ತಾಯಿ, ಮರಿ ಚಿರತೆ ರಕ್ಷಣೆ

ಎಲ್‌ಟಿಎಫ್, ಅರಣ್ಯ ಸಿಬ್ಬಂದಿ ದಿನವಿಡೀ ಕಾರ್ಯಾಚರಣೆ



ಚಿರತೆ ಸೆರೆಗಾಗಿ ಪ್ರತ್ಯೇಕ ತಂಡ ರಚಿಸಲಾಗಿತ್ತು. ವ್ಯವಸ್ಥಿತ ಪ್ರಯತ್ನದಿಂದಾಗಿ ತಾಯಿ ಮತ್ತು ಮರಿ ಚಿರತೆಯನ್ನು ಸುರಕ್ಷಿತವಾಗಿ ಸೆರೆ ಹಿಡಿಯುವ ಕಾರ್ಯಾಚರಣೆ ಯಶಸ್ವಿಯಾಯಿತು.

–ಕೆ.ಎನ್. ಬಸವರಾಜು, ಡಿಸಿಎಫ್

ಮೈಸೂರು, ಜ.16(ಎಂಟಿವೈ)–ಪೈಪ್‌ವೊಂದರಲ್ಲಿ ಸೇರಿಕೊಂಡಿದ್ದ ಐದು ವರ್ಷದ ಚಿರತೆ ಹಾಗೂ ಅದರ ನಾಲ್ಕು ತಿಂಗಳ ಹೆಣ್ಣು ಮರಿಯನ್ನು ಲೆಪರ್ಡ್ ಟಾಸ್ಕ್ ಫೋರ್ಸ್(ಎಲ್‌ಟಿಎಫ್) ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ದಿನವಿಡೀ ಕಾರ್ಯಾಚರಣೆ ನಡೆಸಿ ರಕ್ಷಿಸಿದ್ದಾರೆ.

ಮೈಸೂರು ತಾಲೂಕು, ಇಲವಾಲ ಹೋಬಳಿಯ ರಾಮನಹಳ್ಳಿಯಲ್ಲಿ ಸಂಕ್ರಾಂತಿ(ಸೋಮವಾರ)ಯಂದು ಬೆಳಗಿನ ಜಾವ ಎರಡು ಚಿರತೆಗಳು 1.5 ಮೀಟರ್ ಸುತ್ತಳತೆಯ ಸುಮಾರು 300 ಮೀಟರ್ ಉದ್ದದ ಹಳೆಯ ಪೈಪ್‌ಲೈನ್ ಒಳಗೆ ಸೇರಿಕೊಂಡಿರುವುದನ್ನು ಗ್ರಾಮಸ್ಥರು ನೋಡಿದ್ದಾರೆ. ಅಲ್ಲದೇ ಪೈಪ್‌ನೊಳಗೆ ಚಿರತೆಯು ನರಳುವ ಶಬ್ದ ಕೇಳಿ ಆತಂಕದಿಂದ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಕೂಡಲೇ ಅರಣ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿ, ಪಶು ವೈದ್ಯಾಧಿಕಾರಿಗಳು ಹಾಗೂ ಎಲ್‌ಟಿಎಫ್ ತಂಡದವರು ಸ್ಥಳಕ್ಕಾಗಮಿಸಿ ಜಂಟಿ ಕಾರ್ಯಾಚರಣೆ ಆರಂಭಿಸಿದರು. ಎರಡರಲ್ಲಿ ಒಂದು ತಪ್ಪಿಸಿಕೊಂಡರೂ ಮರಿಯನ್ನು ಅನಾಥ ಮಾಡಿದಂತಾಗುತ್ತದೆ ಎಂದು ತಾಯಿ ಮತ್ತು ಮರಿ ಚಿರತೆಯನ್ನು ಒಟ್ಟಾಗಿ ಸೆರೆ ಹಿಡಿಯಲು ನಿರ್ಧರಿಸಿ, ಅತ್ಯಂತ ಸೂಕ್ಷ್ಮತೆಯಿಂದ ರಕ್ಷಣಾ ಕಾರ್ಯಾಚರಣೆ ನಡೆಸಿದರು. ಮೊದಲಿಗೆ ಪೈಪ್‌ನ ಒಂದು ಬದಿಯಿಂದ ಪಟಾಕಿಗಳನ್ನು ಸಿಡಿಸಿದರು. ಆದರೂ ಚಿರತೆಗಳು ಜಾಗ ಬಿಟ್ಟು ಕದಲಿಲ್ಲ. ಬಳಿಕ ಅಧಿಕಾರಿಗಳು ಹೊಸದೊಂದು ಉಪಾಯ ಮಾಡಿ, ಹಳೆಯದಾದ ಪೈಪ್ ಅನ್ನು ಅಲ್ಲಲ್ಲಿ ಮುಕ್ಕಾಲು ಭಾಗದಷ್ಟು ಕೊಯ್ದು ಅಲ್ಲಿ ಮರದ ಹಲಗೆ ಹಾಕುವ ಮೂಲಕ ಮೊದಲಿಗೆ ತಾಯಿ ಹಾಗೂ ಮರಿ ಚಿರತೆಯನ್ನು ಬೇರ್ಪಡಿಸಿದರು. ನಂತರ ಎರಡೂ ಚಿರತೆಗಳಿಗೂ ಅರಿವಳಿಕೆ ಚುಚ್ಚುಮದ್ದು ನೀಡಿದರು. ಪ್ರಜ್ಞಾಹೀನ ಸ್ಥಿತಿ ತಲುಪುತ್ತಿದ್ದಂತೆ ಅವುಗಳನ್ನು ರಕ್ಷಿಸಿದರು. ಬಳಿಕ ಕಿವಿಗೆ ಮೈಕ್ರೊ ಚಿಪ್ ಅಳವಡಿಸಿ, ಅವುಗಳನ್ನು ಅರಣ್ಯ ಪ್ರದೇಶಕ್ಕೆ ಬಿಡಲಾಯಿತು.

ಅಯೋಧ್ಯೆಗೆ ಹೋಗುವ ಯಾರಿಗೂ ತೊಂದರೆ ಆಗಬಾರದು



ಬೆಂಗಳೂರು: ಅಯೋಧ್ಯೆಯಲ್ಲಿ ರಾಮನ ಪ್ರಾಣಪ್ರತಿಷ್ಠಾಪನೆಗೆ ರಾಜ್ಯದಿಂದ ಹೋಗುವ ಜನರಿಗೆ ಯಾವುದೇ ತೊಂದರೆಯಾಗದಂತೆ ಎಚ್ಚರವಹಿಸಬೇಕು. ಅಲ್ಲದೇ ಯಾವುದೇ ಅಹಿತಕರ ಘಟನೆ ನಡೆಯದಂತೆ ಗೃಹಸಚಿವ ಜಿ. ಪರಮೇಶ್ವರ್ ಎಲ್ಲಾ ಎಸ್‌ಪಿಗಳಿಗೂ ಸೂಚನೆ ನೀಡಿದ್ದಾರೆ. ರಾಜ್ಯದಿಂದ ಜನವರಿ 22 ರಂದು ಅಯೋಧ್ಯೆಯ ರಾಮಲಲ್ಲಾ ಪ್ರತಿಷ್ಠಾಪನೆ ಕಾರ್ಯಕ್ರಮಕ್ಕೆ ರಾಜ್ಯದಿಂದ ಸಾಕಷ್ಟು ಜನ ಹೋಗುತ್ತಾರೆ. ರಾಮ ಭಕ್ತರಿಗೆ ಯಾವುದೇ ತೊಂದರೆಯಾಗಬಾರದು. ಯಾವುದೇ ಅಹಿತಕರ ಘಟನೆಗಳು ನಡೆಯಬಾರದು. ಹೀಗಾಗಿ ಕಟ್ಟೆಚ್ಚರ ವಹಿಸುವಂತೆ ಎಲ್ಲಾ ಎಸ್‌ಪಿಗಳಿಗೆ ಸೂಚನೆ ನೀಡಿದ್ದಾರೆ.

ರಾಮಭಕ್ತರು ಅಯೋಧ್ಯೆಗೆ ಹೋಗುವ ವೇಳೆ ಹಾಗೂ ಈ ಕಾರ್ಯಕ್ರಮದ ಸಂದರ್ಭದಲ್ಲಿ ರಾಜ್ಯದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ನೋಡಿಕೊಳ್ಳಿ, ಎಲ್ಲರೂ ಅಲರ್ಟ್ ಆಗಿ ಇರಬೇಕು ಎಂದು ಅವರು ಸೂಚನೆ ನೀಡಿದ್ದಾರೆ.

ಕರ್ನಾಟಕ–50 ಅಂಗವಾಗಿ ಪೊಲೀಸರಿಗೆ ಬೆಳ್ಳಿ ಪದಕ; ವೈದ್ಯಕೀಯ ವೆಚ್ಚ 1500ಕ್ಕೇರಿಕೆ

● ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ● ಜೊತೆಗೆ ಸುಸಜ್ಜಿತ ಸುವರ್ಣ ಪೊಲೀಸ್ ಭವನ ನಿರ್ಮಾಣ ● ವರ್ಗಾವಣೆಗೆ ಹಾತೊರೆಯಬೇಡಿ; ಜಾತಿ ಬಳಸಬೇಡಿ: ಪೊಲೀಸ್ ಅಧಿಕಾರಿಗಳಿಗೆ ಕಿವಿಮಾತು



ಬೆಂಗಳೂರು, ಜ.16(ಕೆಎಂಶಿ)– ವರ್ಗಾವಣೆಗಳಿಗೆ ಪೊಲೀಸ್ ಅಧಿಕಾರಿಗಳು ಹಾತೊರೆಯುವುದು, ಜಾತಿ ಬಳಸುವುದು ಅತ್ಯಂತ ಕೆಟ್ಟದ್ದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಇಂತಹ ಕೃತ್ಯಗಳಿಂದ ಜನರ ಸೇವೆ ಮಾಡಲು ಸಾಧ್ಯವೇ ಎಂದಿರುವ ಮುಖ್ಯಮಂತ್ರಿ, ಮುಂದಾದರೂ ಇದನ್ನು ನಿಲ್ಲಿಸಿ ಎಂದು ಕಿವಿಮಾತು ಹೇಳಿದ್ದಾರೆ. ಹಿರಿಯ ಅಧಿಕಾರಿಗಳ ವಾರ್ಷಿಕ ಸಭೆಯಲ್ಲಿ ಮಾತನಾಡಿದ ಅವರು, ನಿಮ್ಮ ಸಂಕಷ್ಟಗಳಿಗೆ ನಾವಿದ್ದೇವೆ, ಅದರಂತೆ ನೀವು ಜನರ ಸೇವೆ ಮಾಡಿ, ಕರ್ನಾಟಕ ನಾಮಕರಣ ಗೊಂಡು 50 ವರ್ಷದ ನೆನಪಿಗಾಗಿ ಎಲ್ಲಾ ಪೊಲೀಸ್ ಸಿಬ್ಬಂದಿಗೆ ಬೆಳ್ಳಿಯ ಪದಕ ನೀಡುವುದಾಗಿ ಘೋಷಣೆ ಮಾಡಿದ ಮುಖ್ಯಮಂತ್ರಿ ಅವರು, ವೈದ್ಯಕೀಯ ವೆಚ್ಚವನ್ನು ಒಂದು ಸಾವಿರದಿಂದ 1,500ಕ್ಕೆ ಹೆಚ್ಚಳ ಮಾಡುವುದಾಗಿ ತಿಳಿಸಿದರು. ರಾಜ್ಯದಲ್ಲಿ ಭವ್ಯವಾದ ಸುಸಜ್ಜಿತ ಸುವರ್ಣ ಪೊಲೀಸ್ ಭವನ ನಿರ್ಮಾಣ ಮಾಡಲು ಬಜೆಟ್‌ನಲ್ಲಿ ಹಣ ನಿಗದಿಪಡಿಸುವುದಾಗಿ ತಿಳಿಸಿದರು.

ರಾಜ್ಯವನ್ನು ಡ್ರಗ್ಸ್ ಮುಕ್ತಗೊಳಿಸುವಲ್ಲಿ ಪರಿಣಾಮಕಾರಿ ಕ್ರಮ ಕೈಗೊಳ್ಳುವಲ್ಲಿ ಸಿಇಎನ್ ಠಾಣಾಧಿಕಾರಿಗಳ ಹುದ್ದೆಯನ್ನು ಎಸಿಪಿ ಮತ್ತು ಡಿಸಿಪಿ ಮಟ್ಟಕ್ಕೆ ಉನ್ನತೀಕರಣ ಮಾಡಲಾಗುವುದು. ಬೆಂಗಳೂರು ನಗರ ಒಂದರಲ್ಲೇ 8 ಅಡಿಷನಲ್ ಡಿಸಿಪಿ ಹುದ್ದೆಗಳನ್ನು ಹೆಚ್ಚುವರಿಯಾಗಿ ಸೃಷ್ಟಿಸಲಾಗುವುದು ಎಂದರು.

ನಮ್ಮದು ಜಾತ್ಯತೀತ ರಾಷ್ಟ್ರ, ನಾವುಗಳೇ ನಮ್ಮ ಸಂವಿಧಾನದ ಆಶಯಗಳನ್ನು ಬಲಪಡಿಸಬೇಕು, ಆಧುನಿಕ ತಂತ್ರಜ್ಞಾನದ ಬಳಕೆಯಿಂದ ಅಪರಾಧ ಪ್ರಕರಣಗಳಿಗೆ ಕಡಿವಾಣ ಸಾಧ್ಯವಿದೆ. ಕಾನೂನು ವ್ಯವಸ್ಥೆ ಚೆನ್ನಾಗಿದ್ದರೆ ರಾಜ್ಯದ ಅಭಿವೃದ್ಧಿ ಸಾಧ್ಯ.

ಜನರ ತಲಾ ಆದಾಯ ಮತ್ತು ಜಿಡಿಪಿ ಹೆಚ್ಚಾಗುತ್ತದೆ, ಹೂಡಿಕೆದಾರರು ಬರುತ್ತಾರೆ. ಆದ್ದರಿಂದ ಕಾನೂನು ಸುವ್ಯವಸ್ಥೆಯನ್ನು ಸರಿಯಾಗಿ ಕಾಪಾಡಿ.

ಕಳ್ಳತನ ಹೆಚ್ಚುತ್ತಿದೆ ಎಂದರೆ ಗಸ್ತು ವ್ಯವಸ್ಥೆ, ಹೊಯ್ಸಳ ಸಿಬ್ಬಂದಿ ಮತ್ತು ಠಾಣಾಧಿಕಾರಿಗಳು ಕರ್ತವ್ಯದಲ್ಲಿ ವಿಫಲರಾಗಿದ್ದಾರೆ ಎಂದರ್ಥ. ಇದೇ ಸ್ಥಿತಿ ಮುಂದುವರೆದರೆ ಎಸ್‌ಪಿ ಮತ್ತು ಡಿಸಿಪಿಗಳನ್ನು ಹೊಣೆ ಮಾಡುವುದಾಗಿ ಎಚ್ಚರಿಸಿದರು. ನೀವು ನೀಡಿರುವ ಅಂಕಿ–ಅಂಶಗಳು ತೃಪ್ತಿಕರವಾಗಿಲ್ಲ, ಮುಂದಿನ ವರ್ಷದ ವೇಳೆಗೆ ಕಾರ್ಯಕ್ಷಮತೆ ಉತ್ತಮವಾಗುವಂತೆ ನೋಡಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆ ಪ್ರಮಾಣದಲ್ಲಿ ರಾಜ್ಯದ ಸಾಧನೆ ತೃಪ್ತಿಕರವಾಗಿಲ್ಲ.

ಶೋಷಣೆಗೆ ಒಳಗಾದವರಿಗೆ ವ್ಯವಸ್ಥೆ ಮೇಲೆ ನಂಬಿಕೆ ಬರಬೇಕಾದರೆ ದೌರ್ಜನ್ಯ ಪ್ರಕರಣಗಳ ತನಿಖೆಯ ಗುಣಮಟ್ಟ ಹೆಚ್ಚಾಗಬೇಕು. ನಿಮಗೆ ಸರ್ಕಾರ ಮುಕ್ತ ಅಧಿಕಾರ ಕೊಟ್ಟಿದೆ, ನಿಮ್ಮ ಕೆಲಸದಲ್ಲಿ ಮೂಗು ತೂರಿಸಬಾರದು ಎಂಬುದು ನನ್ನ ಬದ್ಧತೆ, ಆದರೆ ಅದನ್ನೇ ದುರುಪಯೋಗ ಮಾಡಿಕೊಳ್ಳಬೇಡಿ, ಜನರಿಗೆ ಅನುಕೂಲ ಮಾಡಿಕೊಡಲು ನಿಮ್ಮ ಮುಕ್ತ ಅಧಿಕಾರವನ್ನು ಬಳಕೆ ಮಾಡಿಕೊಳ್ಳಿ ಎಂದರು.

ಕಸಾಪದಿಂದ ಮಾತೃಭಾಷೆಯ ಅಭಿಮಾನ

ದತ್ತಿನಿಧಿ ಕಾರ್ಯಕ್ರಮದಲ್ಲಿ ಮುಕ್ಕಾಟೀರ ಐ.ಸುನೀಲ್ ನಾಣಯ್ಯ ಅಭಿಮತ



ವಿರಾಜಪೇಟೆಯ ಬಿ.ಸಿ.ಪ್ರೌಢಶಾಲೆಯಲ್ಲಿ ನಡೆದ ದತ್ತಿನಿಧಿ ಕಾರ್ಯಕ್ರಮದಲ್ಲಿ ಮುಖ್ಯಶಿಕ್ಷಕ ಹೆಚ್.ಡಿ.ಲೋಕೇಶ್ ಅವರನ್ನು ಸನ್ಮಾನಿಸಲಾಯಿತು.

ವಿರಾಜಪೇಟೆ, ಜ.16– ಕನ್ನಡ ಸಾಹಿತ್ಯ ಪರಿಷತ್ ನಾಡಿನ ನೆಲ-ಜಲ ಮತ್ತು ಭಾಷೆಯ ಬಗ್ಗೆ ಅಭಿಮಾನವನ್ನು ಕನ್ನಡಿಗರಿಗೆ ಮೂಡಿಸುತ್ತಿದೆ ಎಂದು ದೇವಣಗೇರಿ ಬಿ.ಸಿ.ಪ್ರೌಢಶಾಲೆಯ ಅಧ್ಯಕ್ಷ ಮುಕ್ಕಾಟೀರ ಐ.ಸುನೀಲ್ ನಾಣಯ್ಯ ಹೇಳಿದರು.

ಪಟ್ಟಣದ ಬಿ.ಸಿ.ಪ್ರೌಢಶಾಲೆಯ ಸಭಾಂಗಣದಲ್ಲಿ ನಡೆದ ಮುಲ್ಲೇಂಗಡ ಶಂಕರಿ ಪೊನ್ನಪ್ಪ ಮತ್ತು ಮುಲ್ಲೇಂಗಡ ಮಧೋಶ್ ಪೂವಯ್ಯ ಅವರು ಸ್ಥಾಪಿಸಿರುವ ಸಾಹಿತಿ ದಿ.ಮುಲ್ಲೇಂಗಡ ಬೇಬಿ ಚೋಂದಮ್ಮ ಸ್ಮರಣಾರ್ಥ ದತ್ತಿನಿಧಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬ ವಿದ್ಯಾರ್ಥಿಗಳು ಜೀವನದಲ್ಲಿ ಕನ್ನಡ ಸಾಹಿತ್ಯವನ್ನು ಅಳವಡಿಸಿಕೊಳ್ಳುವಂತಾಗಬೇಕು ಎಂದರು.

ಮುಖ್ಯ ಶಿಕ್ಷಕ ಹೆಚ್.ಡಿ.ಲೋಕೇಶ್ ಮಾತನಾಡಿ, ಮಹಾಕವಿಗಳಾದ ಕುವೆಂಪು, ದ.ರಾ.ಬೇಂದ್ರೆ, ಕುಮಾರವ್ಯಾಸ, ಪಂಪ, ರನ್ನ ಅವರ ಸಾಹಿತ್ಯ ಕುರಿತು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿದರು. ಸಾಹಿತ್ಯ ಪುಸ್ತಕ ಓದುವ ಹವ್ಯಾಸ ಬೆಳಸಿಕೊಂಡು ಮಾತೃಭಾಷೆ ಕನ್ನಡವನ್ನು ಗಟ್ಟಿಗೊಳಿಸಬೇಕು. ಕನ್ನಡ ಬೆಳೆದು ಬಂದಿರುವ ಹಾದಿ ಉಳಿಸಿಕೊಂಡು ಹೋಗುವ ಅನಿವಾರ್ಯವಿದೆ. ವಿದ್ಯಾರ್ಥಿಗಳಲ್ಲಿ ಓದಿನ ಅಭಿರುಚಿಯನ್ನು ಬೆಳೆಸಲು ದತ್ತಿ ಉಪನ್ಯಾಸ ಕಾರ್ಯಕ್ರಮ ಸಹಕಾರಿ. ವಿದ್ಯಾರ್ಥಿಗಳು ಸಾಧಿಸುವ ಛಲವನ್ನು ಮೈಗೂಡಿಸಿಕೊಂಡು ಏಕಾಗ್ರತೆಯಿಂದ ಗುರಿ ಮುಟ್ಟಬೇಕು ಎಂದು ತಿಳಿಸಿದರು.

> "ನಾವು ಮಾಡುವ ಕೆಲಸದ ಮೇಲೆ ಶ್ರದ್ಧೆ ಹಾಗೂ ಭಕ್ತಿಯನ್ನು ಇಟ್ಟುಕೊಳ್ಳುವ ಮೂಲಕ ಪ್ರಾಮಾಣಿಕವಾಗಿ ಕೆಲಸ ಮಾಡಿದರೆ, ಜೀವನದಲ್ಲಿ ಯಶಸ್ಸಿನ ವ್ಯಕ್ತಿಗಳಾಗಿ ಹೊರಹೊಮ್ಮಲು ಸಾಧ್ಯವಿದೆ. ವಿದ್ಯಾರ್ಥಿಗಳು ಪೋಷಕರು ಮತ್ತು ಗುರು–ಹಿರಿಯರನ್ನು ಗೌರವಿಸಬೇಕು.
> -ಡಿ.ಪಿ.ರಾಜೇಶ್, ವಿರಾಜಪೇಟೆ ತಾಲೂಕು ಕಸಾಪ ಅಧ್ಯಕ್ಷ

ಕನ್ನಡ ಸಾಹಿತ್ಯ ಪರಿಷತ್‌ನ ಗೌರವ ಕಾರ್ಯದರ್ಶಿ ಹೆಚ್.ಜಿ.ಸಾವಿತ್ರಿ ಮಾತನಾಡಿ, ಪ್ರಚಲಿತ ವಿದ್ಯಮಾನದಲ್ಲಿ ಮಕ್ಕಳಿಗೆ ಮಾತೃಭಾಷೆ ಕಲಿಕೆ ಬಹಳ ಅತ್ಯವಶ್ಯಕವಾಗಿದೆ. ಕನ್ನಡ ಶಾಲೆಗೆ ಮಕ್ಕಳನ್ನು ನೋಂದಣಿ ಮಾಡಿಸುವಲ್ಲಿ ಪೋಷಕರ ಆಸಕ್ತಿ ದಿನದಿಂದ ದಿನಕ್ಕೆ ಕಡಿಮೆ ಆಗುತ್ತಿರುವುದು ಆತಂಕದ ವಿಷಯವಾಗಿದೆ. ಕನ್ನಡದ ಕಾರ್ಯಕ್ರಮವನ್ನು ಆಯೋಜಿಸಿ ಕನ್ನಡಮ್ಮನ ತೇರನ್ನು ಎಳೆಯುವ ಕನ್ನಡದ ಮನಸುಗಳನ್ನು ಒಗ್ಗೂಡಿಸುವ ಕೆಲಸ ಸಾಹಿತ್ಯ ಪರಿಷತ್ ಮಾಡುತ್ತಿರುವುದಾಗಿ ಹೇಳಿದರು.

ಕೊಡಗಿನ ಮಹಿಳಾ ಸಾಹಿತಿಗಳ ಕುರಿತು ಉಪನ್ಯಾಸ ನೀಡಿದ ಸಾಹಿತಿ ಪುಷ್ಪಲತಾ ಶಿವಪ್ಪ, ಕೊಡಗಿನ ಸಾಹಿತ್ಯ ಪರಂಪರೆ ನಡೆದು ಬಂದ ಹಾದಿ ಬಗ್ಗೆ ವಿವರಿಸಿದರು. ಕೊಡಗಿನ ಸಾಹಿತ್ಯಕ್ಕೆ ಜಾನಪದ ಸೊಗಡು ಹೇಗೆ ತಳಕು ಹಾಕಿಕೊಂಡು ಬಂದಿದೆ. ಕರ್ನಾಟಕದ ಮಹಿಳಾ ಮಣಿಗಳು ಸಾಹಿತ್ಯ ಕ್ಷೇತ್ರಕ್ಕೆ ಯಾವ ರೀತಿ ದುಡಿದು ಜಾನಪದದ ಮೂಲಕ ಸಾಹಿತ್ಯ ರಚನೆ ಮಾಡಿದ್ದಾರೆ ಎಂದರು. ಅಮ್ಮತ್ತಿ ಹೋಬಳಿ ಮಟ್ಟದ ಸಾಹಿತ್ಯ ಪರಿಷತ್ ಅಧ್ಯಕ್ಷ ಮಂಜುನಾಥ್ ಮಾತನಾಡಿ, ಕನ್ನಡದ ಮನಸುಗಳನ್ನು ಒಗ್ಗೂಡಿಸುವ ಕೆಲಸ ಕನ್ನಡ ಸಾಹಿತ್ಯ ಪರಿಷತ್ತು ಮಾಡುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ವೇಳೆ ಸತತ 7 ವರ್ಷಗಳಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಪಡೆದ ಅಂಗವಾಗಿ ಶಾಲಾ ಮುಖ್ಯಶಿಕ್ಷಕ ಹೆಚ್.ಡಿ.ಲೋಕೇಶ್ ಅವರನ್ನು ಸಾಹಿತ್ಯ ಪರಿಷತ್ ವತಿಯಿಂದ ಸನ್ಮಾನಿಸಲಾಯಿತು. ಸಾಹಿತಿ ರಜಿತಾ ಕಾರ್ಯಪ್ಪ ಸಾಹಿತಿಗಳಾದ ಸೋಮೆಯಂಡ ಕೌಸಲ್ಯ ಸತೀಶ್, ಶಿಕ್ಷಕಿ ಪ್ರಮೀಳಾ, ಎ.ಸಿ.ಸುನೀತಾ, ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಹಾಜರಿದ್ದರು.

ಹದಗೆಟ್ಟ ರಸ್ತೆಯಲ್ಲಿ ಸಂಚಾರ ಅಸಾಧ್ಯ

ಅರೆಕಾಡು, ಹೊಸ್ಕೇರಿ, ಅಭ್ಯತ್ ಮಂಗಲ ಮಾರ್ಗ ಅಭಿವೃದ್ಧಿಗೆ ಮನವಿ ಸಲ್ಲಿಕೆ



ಸಂಪೂರ್ಣವಾಗಿ ಹದಗೆಟ್ಟ ಮಡಿಕೇರಿ ತಾಲೂಕಿನ ಅರೆಕಾಡು, ಹೊಸ್ಕೇರಿ ಹಾಗೂ ಅಭ್ಯತ್ ಮಂಗಲ ರಸ್ತೆ.

ಮಡಿಕೇರಿ, ಜ.16–ತಾಲೂಕಿನ ಅರೆಕಾಡು, ಹೊಸ್ಕೇರಿ ಹಾಗೂ ಅಭ್ಯತ್ ಮಂಗಲ ರಸ್ತೆ ಸಂಪೂರ್ಣವಾಗಿ ಹದಗೆಟ್ಟು ವಾಹನಗಳ ಸಂಚಾರ ಅಸಾಧ್ಯವಾಗಿದ್ದು, ಶೀಘ್ರ ರಸ್ತೆ ಅಭಿವೃದ್ಧಿ ಪಡಿಸಬೇಕು ಎಂದು ಕೊಡವ ವೆಲ್‌ಫೇರ್ ಆ್ಯಂಡ್ ರಿಕ್ರಿಯೇಷನ್ ಅಸೋಸಿಯೇಷನ್ ವತಿಯಿಂದ ಲೋಕೋಪಯೋಗಿ ಇಲಾಖೆಗೆ ಮನವಿ ಸಲ್ಲಿಸಲಾಗಿದೆ.

ಈ ರಸ್ತೆ ಅವ್ಯವಸ್ಥೆಯಿಂದ ವಾಹನಗಳು ಮತ್ತು ಪಾದಚಾರಿಗಳ ಸಂಚಾರಕ್ಕೆ ತೊಂದರೆಯಾಗಿದ್ದು, ಹಿಂದೆ ಕೂಡ ರಸ್ತೆ ಅವ್ಯವಸ್ಥೆ ಕುರಿತು ಶಾಸಕರ ಗಮನ ಸೆಳೆಯಲಾಗಿತ್ತು. ನಂತರ ಶಾಸಕರು ಸ್ಥಳ ಪರಿಶೀಲಿಸಿ, ರಸ್ತೆ ಅಭಿವೃದ್ಧಿಯ ಬಗ್ಗೆ ಭರವಸೆ ನೀಡಿದ್ದರು. ಆದರೆ, ಇಲ್ಲಿಯವರೆಗೆ ರಸ್ತೆ ಅಭಿವೃದ್ಧಿಯಾಗಿಲ್ಲ. ಬದಲಿಗೆ ಮತ್ತಷ್ಟು ಹದಗೆಟ್ಟಿದೆ.

ದ್ವಿಚಕ್ರ ವಾಹನ ಸವಾರರು ಹಾಗೂ ಪಾದಚಾರಿಗಳು ರಸ್ತೆಯ ಗುಂಡಿಯೊಳಗೆ ಬೀಳುತ್ತಿರುವ ಘಟನೆಗಳು ಎಷ್ಟೋ ಬಾರಿ ನಡೆದಿದೆ. ಅನೇಕರು ಗಾಯಗೊಂಡಿದ್ದಾರೆ. ಹದಗೆಟ್ಟ ಈ ರಸ್ತೆಯಿಂದ ಜನರ ಜೀವಕ್ಕೆ ಅಪಾಯವಾಗುವ ಸ್ಥಿತಿ ನಿರ್ಮಾಣವಾಗಿದೆ ಎಂದು ಕೊಡವ ವೆಲ್‌ಫೇರ್ ಆ್ಯಂಡ್ ರಿಕ್ರಿಯೇಷನ್ ಅಸೋಸಿಯೇಷನ್ ಅಧ್ಯಕ್ಷ ಕುಕ್ಕೇರ ಬಿ.ಜಯ ಚಿಣ್ಣಪ್ಪ ಆತಂಕ ವ್ಯಕ್ತಪಡಿಸಿದ್ದಾರೆ.

ರಸ್ತೆ ಅಭಿವೃದ್ಧಿಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದರೂ ಇದುವರೆಗೆ ಕಾಮಗಾರಿ ಆರಂಭಿಸಿಲ್ಲ. ರಸ್ತೆಗೆ ಕಾಮಗಾರಿಗೆ ಕೆಲ ಮರಗಳು ಅಡ್ಡಿಯಾಗಿದ್ದು, ಅರಣ್ಯ ಇಲಾಖೆ ತ್ವರಿತವಾಗಿ ಈ ಮರವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು ಮತ್ತು ರಸ್ತೆ ಅಭಿವೃದ್ಧಿ ವಿಚಾರದಲ್ಲಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಹೆಚ್ಚು ಕಾಳಜಿ ವಹಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ.



ಮಡಿಕೇರಿಯ ಮಂಗಳಾದೇವಿ ನಗರದ ಶ್ರೀ ರಾಜರಾಜೇಶ್ವರಿ, ಮಹಾಗಣಪತಿ ಹಾಗೂ ನಾಗದೇವರ ಪುನರ್‌ಪ್ರತಿಷ್ಠಾನ ವಾರ್ಷಿಕೋತ್ಸವ ಅಂಗವಾಗಿ ಬ್ರಹ್ಮಶ್ರೀ ವೇದಮೂರ್ತಿ ಪೊಳಲಿ ಸುಬ್ರಹ್ಮಣ್ಯ ತಂತ್ರಿಗಳ ನೇತೃತ್ವದಲ್ಲಿ ಎರಡು ದಿನ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯ ಜರುಗಿದವು. ನಗರದ ಭಕ್ತರು ದೇವಿಗೆ ವಿಶೇಷ ಪೂಜೆ, ಪ್ರಾರ್ಥನೆ ಸಲ್ಲಿಸಿದರು. ಇದೇ ವೇಳೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಲಾಡ್ಜ್‌ನಲ್ಲಿ ಐಟಿ ಕಂಪನಿ ಉದ್ಯೋಗಿ ಆತ್ಮಹತ್ಯೆ

ಮಡಿಕೇರಿ, ಜ.16–ಬೆಂಗಳೂರು ಮೂಲದ ಐಟಿ ಕಂಪನಿ ಉದ್ಯೋಗಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಡಿಕೇರಿಯ ಕೊಹಿನೂರ್ ರಸ್ತೆಯ ಲಾಡ್ಜ್‌ವೊಂದರಲ್ಲಿ ಮಂಗಳವಾರ ನಡೆದಿದೆ.

ಬೆಂಗಳೂರು ಮೂಲದ ಸಂದೇಶ್ (35) ಆತ್ಮಹತ್ಯೆ ಮಾಡಿಕೊಂಡ ಉದ್ಯೋಗಿ. ಈತ 2 ದಿನಗಳ ಹಿಂದೆ ನಗರದ ಕೊಹಿನೂರ್ ರಸ್ತೆಯ ಲಾಡ್ಜ್‌ವೊಂದರ ರೂಂನಲ್ಲಿ ತಂಗಿದ್ದ. ಆದರೆ, ಮಂಗಳವಾರ ಬೆಳಗ್ಗೆ ಲಾಡ್ಜ್‌ನ ಸಿಬ್ಬಂದಿ ರೂಂ ಬಾಗಿಲು ತಟ್ಟಿದರೂ ಎಷ್ಟುಹೊತ್ತು ಅದರೂ ಬಾಗಿಲು ತೆಗೆಯದಿದ್ದಾಗ ಸಿಬ್ಬಂದಿ ಲಾಡ್ಜ್ ಮಾಲೀಕರಿಗೆ ಮಾಹಿತಿ ನೀಡಿದ್ದಾನೆ.

ನಂತರ ಮಾಲೀಕರು ಬಂದು ನೋಡಿದಾಗ ರೂಂನಲ್ಲೇ ಹಗ್ಗದಿಂದ ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಪತ್ತೆಯಾಗಿದೆ. ತಕ್ಷಣ ಲಾಡ್ಜ್‌ನ ಮಾಲೀಕರು ನಗರ ಠಾಣೆ ಪೊಲೀಸರಿಗೆ ವಿಷಯ ತಿಳಿಸಿದ್ದಾರೆ. ಬಳಿಕ ಸ್ಥಳಕ್ಕೆ ಆಗಮಿಸಿದ ಪೊಲೀಸರು ಪರಿಶೀಲಿಸಿ, ಮೃತದೇಹವನ್ನು ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಿದರು. ಈತನ ಆತ್ಮಹತ್ಯೆಗೆ ನಿಖರವಾದ ಕಾರಣ ತಿಳಿದು ಬಂದಿಲ್ಲ. ಈ ಸಂಬಂಧ ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಫೆ.5ರಿಂದ ಕ್ರೀಡಾ ವಸತಿ ನಿಲಯಕ್ಕೆ ಆಯ್ಕೆ

ಮಡಿಕೇರಿ, ಜ.16– ಜಿಲ್ಲಾ ಕ್ರೀಡಾಂಗಣದ ಕಿರಿಯರ ಕ್ರೀಡಾ ವಸತಿ ನಿಲಯಕ್ಕೆ 2024–25ನೇ ಸಾಲಿನ ಅಥ್ಲೆಟಿಕ್ಸ್ ಮತ್ತು ಹಾಕಿ ಪಂದ್ಯಾವಳಿಯ ಕ್ರೀಡಾಪಟುಗಳ ಆಯ್ಕೆಯನ್ನು ಫೆ.5ರಿಂದ 7ರ ವರೆಗೆ ಆರಂಭಿಸಲಾಗುವುದು.

ಫೆ.5ರಂದು ವಿರಾಜಪೇಟೆ ಮತ್ತು ಪೊನ್ನಂಪೇಟೆ ತಾಲೂಕಿಗೆ ಸಂಬಂಧಿಸಿದಂತೆ ಪೊನ್ನಂಪೇಟೆ ತಾಲೂಕಿನ ಮಿನಿ ಕ್ರೀಡಾಂಗಣದಲ್ಲಿ, ಫೆ.6ರಂದು ಮಡಿಕೇರಿ ತಾಲೂಕಿಗೆ ಸಂಬಂಧಿಸಿದಂತೆ ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಣಗದಲ್ಲಿ ಹಾಗೂ ಫೆ.7ರಂದು ಸೋಮವಾರಪೇಟೆ ಮತ್ತು ಕುಶಾಲನಗರ ತಾಲೂಕಿಗೆ ಸಂಬಂಧಿಸಿದಂತೆ ಕೂಡಿಗೆ ಸರ್ಕಾರಿ ಕ್ರೀಡಾ ಶಾಲೆಯಲ್ಲಿ ಆಯ್ಕೆ ನಡೆಯಲಿದೆ.

ವಿದ್ಯಾರ್ಥಿಗಳು ಆಯಾಯ ದಿನದಂದು ಬೆಳಗ್ಗೆ 9 ಗಂಟೆಗೆ ಹೆಸರು ನೋಂದಾಯಿಸಬೇಕು. ಮಾಹಿತಿಗೆ ದೂ.ಸಂ: 08272–220986 ಅಥವಾ ಮೊ.ಸಂ: 9480032712 ಅನ್ನು ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವಿ.ಟಿ.ವಿಸ್ಮಯಿ ತಿಳಿಸಿದ್ದಾರೆ.

ನೆಲಜಿ–ಕುಂಜಿಲ ಗಡಿಭಾಗದಲ್ಲಿ ಹುಲಿ ಆತಂಕ

● ಭಯಗೊಂಡ ಗ್ರಾಮಸ್ಥರು ● ಅರಣ್ಯ ಸಿಬ್ಬಂದಿ ಪರಿಶೀಲನೆ



ನೆಲಜಿ ಗ್ರಾಮದ ಗಡಿಭಾಗದಲ್ಲಿ ಅರಣ್ಯ ಸಿಬ್ಬಂದಿ ಪರಿಶೀಲನೆ ನಡೆಸಿದರು.

ನಾಪೋಕ್ಲು, ಜ.16–ಸಮೀಪದ ನೆಲಜಿ ಮತ್ತು ಕುಂಜಿಲ ಗ್ರಾಮದ ಗಡಿಭಾಗದಲ್ಲಿ ಹುಲಿ ಕಾಡು ಕುರಿಯನ್ನು ಅಟ್ಟಿಸಿಕೊಂಡು ಹೋಗಿರುವುದನ್ನು ಕಂಡ ಗ್ರಾಮಸ್ಥರಲ್ಲಿ ಆತಂಕ ಮೂಡಿದೆ.

ನೆಲಜಿ ಗ್ರಾಮದ ಅಚ್ಚಾಂಡಿರ ಹಾಗೂ ಕಲಿಯಾಟಂಡ ತೋಟದ ಮಧ್ಯದ ಕೊಲ್ಲಿ ಬಳಿ ಚೀಯಕ ಪೂವಂಡ ಉಮೇಶ್ ಅವರ ಕಾಫಿ ತೋಟದಲ್ಲಿ ಮಂಗಳವಾರ ಬೆಳಗ್ಗೆ ಕಾರ್ಮಿಕ ತಮಿಳರ ವೇಲು ಕೆಲಸ ಮಾಡುತ್ತಿದ್ದಾಗ ಹುಲಿ ಕಾಡುಕುರಿಯನ್ನು ಅಟ್ಟಿಸಿಕೊಂಡು ಹೋಗಿರುವುದನ್ನು ಕಂಡಿದ್ದಾರೆ.

ವಿಷಯ ತಿಳಿದ ಅರಣ್ಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ಇಲ್ಲಿ ಹೊಸದಾಗಿ ನಿರ್ಮಾಣವಾದ ರಸ್ತೆ ಇದ್ದು, ಹುಡಿ ಮಣ್ಣಿನ ರಸ್ತೆಯಲ್ಲಿ ಹೆಜ್ಜೆ ಗುರುತನ್ನು ಸ್ಪಷ್ಟವಾಗಿ ಪತ್ತೆಹಚ್ಚಲು ಸಾಧ್ಯವಾಗುತ್ತಿಲ್ಲ ಎಂದು ಗಸ್ತು ಅರಣ್ಯ ಪಾಲಕ ಕಾಳೇಗೌಡ ತಿಳಿಸಿದರು.

ನೆಲಜಿ ಗ್ರಾಮದ ಮಡಿವಾಳರ ಶಾರದ ಅವರ ಸಾಕುನಾಯಿಯನ್ನು ವಾರದ ಹಿಂದೆ ಕಾಡು ಪ್ರಾಣಿಯೊಂದು ಕಚ್ಚಿಕೊಂಡು ಹೋಗಿದ್ದು, ಇದು ಚಿರತೆ ಆಗಿರಬಹುದು. ಅಲ್ಲದೆ, ಸಮೀಪದ ಮಲ್ಮಬೆಟ್ಟದಲ್ಲಿ ಚಿರತೆಯ ಹಿಕ್ಕೆಯನ್ನು ಗ್ರಾಮಸ್ಥರು ನೋಡಿದ್ದಾರೆ ಎಂದು ನೆಲಜಿ ಗ್ರಾಮದ ಕಾಫಿ ಬೆಳೆಗಾರ ಮಾಳೆಯಂಡ ಅಪ್ಪಣ್ಣ ತಿಳಿಸಿದರು.

ನೆಲಜಿ ಮತ್ತು ಕುಂಜಿಲ ಎರಡು ಗ್ರಾಮಗಳ ಜನರು ಎಚ್ಚರಿಕೆಯಿಂದ ಇದ್ದು, ಕಾಡುಪ್ರಾಣಿಗಳು ಕಂಡು ಬಂದರೆ ಕೂಡಲೇ ನಮ್ಮ ಗಮನಕ್ಕೆ ತರುವಂತೆ ಅರಣ್ಯ ಇಲಾಖೆ ಸಾರ್ವಜನಿಕರಲ್ಲಿ ಮನವಿ ಮಾಡಿದೆ.

ರಿಯಾಯಿತಿ ದರದಲ್ಲಿ ತರಬೇತಿ

ಮಡಿಕೇರಿ, ಜ.16–ಕೇಂದ್ರ ಲೋಕಸೇವಾ ಆಯೋಗದ ಪೂರ್ವಭಾವಿ ಪರೀಕ್ಷೆ ಮೇ26ರಂದು ನಡೆಯಲಿದ್ದು, ಈ ಸಂಬಂಧ ಫೆ.1ರಿಂದ ಬೆಂಗಳೂರಿನ ಕೃಷಿಕ್ ಸರ್ವೋದಯ ಫೌಂಡೇಷನ್ ಕೇಂದ್ರ ಕಚೇರಿಯಲ್ಲಿ ಮೂರು ತಿಂಗಳು ನುರಿತ ವಿಷಯ ತಜ್ಞರಿಂದ ಆಕಾಂಕ್ಷಿಗಳಿಗೆ ರಿಯಾಯಿತಿ ಶುಲ್ಕದಲ್ಲಿ ಆಫ್‌ಲೈನ್ ಹಾಗೂ ಆನ್‌ಲೈನ್ ತರಬೇತಿ ಪ್ರಾರಂಭಿಸಲಾಗುವುದು. ಆಫ್‌ಲೈನ್ ತರಬೇತಿಗೆ 25 ಸಾವಿರ ರೂ. ಹಾಗೂ ಆನ್‌ಲೈನ್ ತರಬೇತಿಗೆ 15 ಸಾವಿರ ರೂ. ನಿಗದಿಯಾಗಿದ್ದು, ತರಬೇತಿಗೆ ಹಾಜರಾಗುವ ಅಭ್ಯರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ಮತ್ತು ವಿದ್ಯಾರ್ಥಿ ವೇತನ ನೀಡಲಾಗುವುದು. ಗ್ರಂಥಾಲಯ ಸೌಲಭ್ಯ ಹಾಗೂ ಪ್ರತ್ಯೇಕ ಸ್ಟಡಿ ಕ್ಯುಬಿಕಲ್ ವ್ಯವಸ್ಥೆಯಿದೆ. ಆಸಕ್ತ ಅಭ್ಯರ್ಥಿಗಳು ಜ.25ರೊಳಗೆ ಮೊ.ಸಂ: 7625000990 ಅಥವಾ ದೂ.ಸಂ: 080–25202299 ಅನ್ನು ಸಂಪರ್ಕಿಸಬಹುದು ಎಂದು ಹಾಸನ ಶಾಖೆಯ ಕೃಷಿಕ್ ಸರ್ವೋದಯ ಫೌಂಡೇಷನ್‌ನ ಗೌರವ ಕಾರ್ಯದರ್ಶಿ ಎಚ್.ಪಿ.ಮೋಹನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಳಿಗಿರಿರಂಗನಾಥಸ್ವಾಮಿಯ ವಿಜೃಂಭಣೆ ರಥೋತ್ಸವ



ಯಳಂದೂರು, ಜ.16–ತಾಲೂಕಿನ ಬಿಳಿಗಿರಿರಂಗನ ಬೆಟ್ಟದಲ್ಲಿ ರಂಗನಾಥ ಸ್ವಾಮಿ ಸಂಕ್ರಾಂತಿ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ರಥೋತ್ಸವ ಹಿನ್ನೆಲೆಯಲ್ಲಿ ವಿವಿಧ ಹೂಗಳಿಂದ ತೇರನ್ನು ಸಿಂಗರಿಸಲಾಗಿತ್ತು. ಭಕ್ತರು ಗೋವಿಂದ ಗೋವಿಂದ ಎಂಬ ಜಯಘೋಷದೊಂದಿಗೆ ತೇರನ್ನು ಎಳೆದರು. ರಥೋತ್ಸವದಲ್ಲಿ ಪ್ರಮುಖವಾಗಿ ಶಂಖ, ಜಾಗಟೆಯ ನಾದ ಮೊಳಗಿದವು. ಬೆಳಗ್ಗೆ 11.50ಕ್ಕೆ ರಥಾರೋಹಣ ನಂತರ 11.53ಕ್ಕೆ ಗರುಡ ಪಕ್ಷಿ ಹಾರಾಡಿತು. 12.25ಕ್ಕೆ ತೇರನ್ನು ಎಳೆಯಲಾಯಿತು. ದೇವಸ್ಥಾನಕ್ಕೆ ಸುತ್ತು ಹಾಕಿದ ತೇರು ಬಳಿಕ ಸ್ವಸ್ಥಾನದಲ್ಲಿ ಬಂದು ಸೇರಿತ್ತು.

ನವದಂಪತಿಗಳು ಹಾಗೂ ಭಕ್ತರು ತೇರಿಗೆ ಹಣ್ಣು–ಜವನ ಎಸೆದು ಹರಕೆ ತೀರಿಸಿದರು. ಹೊಸವರ್ಷದ ಮೊದಲ ರಥೋತ್ಸವ ಹಿನ್ನೆಲೆಯಲ್ಲಿ ಈ ಭಾಗದ ರೈತರು ತಾವು ಬೆಳೆದ ಧಾನ್ಯಗಳನ್ನು ತೇರಿಗೆ ಎಸೆದು ಸಮರ್ಪಿಸಿದರು. ಆ ಮೂಲಕ ಮುಂದಿನ ಇಳುವರಿ ವೃದ್ಧಿಸುವಂತೆ ದೇವರಲ್ಲಿ ಮೊರೆ ಇಟ್ಟರು.

ಪೋಡುಗಳಿಂದ ಆಗಮಿಸಿದ ಸೋಲಿಗರು: ಬಿಳಿಗಿರಿರಂಗನಬೆಟ್ಟ ಸೇರಿದಂತೆ ಸುತ್ತಮುತ್ತಲಿನ ಅರಣ್ಯ ಪೋಡುಗಳ ಸಾವಿರಾರು ಸೋಲಿಗರು ಕಾಲ್ನಡಿಗೆಯಲ್ಲಿ ಬೆಟ್ಟಕ್ಕೆ ಆಗಮಿಸಿ ರಥೋತ್ಸವದಲ್ಲಿ ಪಾಲ್ಗೊಂಡರು. ಸೋಲಿಗರೇ ಇಲ್ಲಿನ ತೇರು ಕಟ್ಟುವುದು ವಿಶೇಷ. ಬಿಳಿಗಿರಿರಂಗನಾಥಸ್ವಾಮಿ ಸೋಲಿಗರ ಕುಸುಮಾಲೆಯನ್ನು ವರಿಸಿದ್ದ ಹಿನ್ನೆಲೆಯಲ್ಲಿ ಸೋಲಿಗರು ರಂಗಭಾವ ಎಂದು ರಂಗಪ್ಪನನ್ನು ಕರೆಯುತ್ತಾರೆ.

ಬ್ಯಾಟ ಮಣೆ ಸೇವೆ: ಜಿಲ್ಲೆ ಹಾಗೂ ಹೊರ ಜಿಲ್ಲೆಗಳಿಂದ ಆಗಮಿಸಿದ ಬಿಳಿಗಿರಿ ರಂಗನಾಥ ಸ್ವಾಮಿ ಒಕ್ಕಲಿನವರು ಹಾಗೂ ಭಕ್ತರು ಅಕ್ಕಿ, ಬೆಲ್ಲ, ಕಾಯಿಯನ್ನು ನೀರಿನಲ್ಲಿ ನೆನೆಸಿ ಅದಕ್ಕೆ ಕಜ್ಜಾಯ ಬೆರೆಸಿ ಬ್ಯಾಟಮಣೆ ಹಾಕಿ ಅದನ್ನು ಪ್ರಸಾದ ಎಂದು ಸ್ವೀಕರಿಸಿದರು.

ಬಿಗಿಪೊಲೀಸ್ ಬಂದೋಬಸ್ತ್: ಜಾತ್ರೆಯಲ್ಲಿ ಬಿಗಿಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಸ್ಥಳಕ್ಕೆ ಎಸ್‌ಪಿ ಪದ್ಮಿನಿ ಸಾಹು, ಎಎಸ್‌ಪಿ ಉದೇಶ್, ಡಿವೈಎಸ್‌ಪಿ.ಸೋಮೇಗೌಡ ಪಿಎಸ್‌ಐ ಮಂದಹಾಸ ನಾಯಕ ಬಿಗಿಭದ್ರತೆ ಕೈಕೊಂಡಿದ್ದರು.

ಎಂ.ಸಿ.ಚಿನ್ನಸ್ವಾಮಪ್ಪ ನಿಧನ



ಚಾಮರಾಜನಗರ, ಜ.16–ತಾಲೂಕಿನ ಲಿಂಗನಪುರ ಗ್ರಾಮದ ನಿವಾಸಿ ಮಲ್ಲಮ್ಮನಹುಂಡಿ ಎಂ.ಸಿ.ಚಿನ್ನಸ್ವಾಮಪ್ಪ (73) ಅನಾರೋಗ್ಯದಿಂದ ಮಂಗಳವಾರ ಮುಂಜಾನೆ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಸ್ವಗ್ರಾಮ ಲಿಂಗನಪುರದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಆಕ್ಸಿಜನ್ ದುರಂತದ ಸಂತ್ರಸ್ತರಿಗೆ ಉದ್ಯೋಗ ನೀಡಿ

ಜನತಾ ದರ್ಶನದಲ್ಲಿ ಸಚಿವ ಕೆ.ವೆಂಕಟೇಶ್‌ಗೆ ಕುಟುಂಬಸ್ಥರ ಮನವಿ



ಆಕ್ಸಿಜನ್ ದುರಂತದಲ್ಲಿ ಮೃತಪಟ್ಟವರ ಕುಟುಂಬದವರಿಗೆ ಸರ್ಕಾರಿ ಉದ್ಯೋಗ ನೀಡಬೇಕು ಎಂದು ಸಂತ್ರಸ್ತರು ಜನತಾ ದರ್ಶನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅವರಿಗೆ ಮನವಿ ಸಲ್ಲಿಸಿದರು.

ಚಾಮರಾಜನಗರ, ಜ.16–ಕೋವಿಡ್ ಸಂದರ್ಭದಲ್ಲಿ ನಗರದ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯಲ್ಲಿ ಸಂಭವಿಸಿದ ಆಕ್ಸಿಜನ್ ದುರಂತದಲ್ಲಿ ಮೃತಪಟ್ಟವರ ಕುಟುಂಬದ ಸದಸ್ಯರೊಬ್ಬರಿಗೆ ಸರ್ಕಾರಿ ಉದ್ಯೋಗ ನೀಡಬೇಕು ಎಂದು ಸಂತ್ರಸ್ತರು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅವರಿಗೆ ಮನವಿ ಸಲ್ಲಿಸಿದರು.

ನಗರದ ಜಿಲ್ಲಾಡಳಿತ ಭವನ ಆವರಣದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಮಂಗಳವಾರ ನಡೆದ ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಆಕ್ಸಿಜನ್ ದುರಂತದ ಸಂತ್ರಸ್ತರು ಸಚಿವರ ಮುಂದೆ ತಮ್ಮ ನೋವು ಹೇಳಿಕೊಂಡರು. ದುರಂತ ನಡೆದು ಮೂರು ವರ್ಷಗಳಾಗಿದ್ದು, ಮೃತರ ಕುಟುಂಬದ ಸದಸ್ಯರೊಬ್ಬರಿಗೆ ಸರ್ಕಾರಿ ನೌಕರಿ ನೀಡುತ್ತೇವೆ ಎಂದು ಕಾಂಗ್ರೆಸ್ ನೀಡಿದ ಭರವಸೆ ಇನ್ನೂ ಈಡೇರಿಲ್ಲ. ಇನ್ನಾದರೂ ನಮ್ಮಗೆ ಉದ್ಯೋಗ ನೀಡಬೇಕು ಎಂದು ಸಚಿವರಿಗೆ ಮನವಿ ಮಾಡಿದರು.

ಇದಕ್ಕೆ ಉತ್ತರಿಸಿದ ಸಚಿವ ವೆಂಕಟೇಶ್, ಈ ಬಗ್ಗೆ ಸರ್ಕಾರ ಗಮನ ಹರಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರಿ ಉದ್ಯೋಗ ನೀಡಲು ಕ್ರಮ ಕೈಗೊಂಡಿದ್ದಾರೆ. ಈ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಅಲ್ಲಿಯವರೆಗೆ ತಾತ್ಕಲಿಕವಾಗಿ ಹೊರಗುತ್ತಿಗೆ ಆಧಾರದಡಿ ಉದ್ಯೋಗ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ನಂತರ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಮಾತನಾಡಿ, ಸಂತ್ರಸ್ತರು ನನ್ನನ್ನು ಭೇಟಿ ಮಾಡಿದ್ದಾರೆ. ಅವರಿಗೆ ಗುತ್ತಿಗೆ ಆಧಾರದಡಿ ಉದ್ಯೋಗ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಖಾತೆ ರದ್ದು ಮಾಡಲು ಒತ್ತಾಯ: ಚಾಮರಾಜನಗರ ತಾಲೂಕು ಆದಿಕರ್ನಾಟಕ ಜನಾಂಗದ ಆಸ್ತಿಯಾದ ನಗರದ ಸರ್ವೇ ನಂ: 295ರ ಆಸ್ತಿಯನ್ನು ಅಕ್ರಮವಾಗಿ ಖಾತೆ ಮಾಡಲಾಗಿದೆ. ಇದನ್ನು ರದ್ದುಪಡಿಸಬೇಕು ಎಂದು ದಲಿತ ಮುಖಂಡರು ಸಚಿವರಿಗೆ ಮನವಿ ಸಲ್ಲಿಸಿದರು.

295/4ಸಿಯಲ್ಲಿ 8 ಗುಂಟೆ ಜಮೀನನ್ನು ಅಧ್ಯಕ್ಷ ನಂಜುಂಡಸ್ವಾಮಿ ಅವರ ಸಂಬಂಧಿಯೊಬ್ಬರ ಹೆಸರಿಗೆ ಅಕ್ರಮವಾಗಿ ನೋಂದಣಿಯಾಗಿದೆ. ಇದರಲ್ಲಿ ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯ ಮೇಲೆ ಅನುಮಾನ ವ್ಯಕ್ತವಾಗಿದೆ. ಆದ್ದರಿಂದ ಆಡಳಿತ ಮಂಡಳಿಯ ಮೇಲೆ ಕಾನೂನು ಕೈಗೊಳ್ಳಬೇಕು. ಆಡಳಿತ ಮಂಡಳಿಯನ್ನು ಸೂಪರ್ ಸೀಡ್ ಮಾಡಿ ಆಡಳಿತಾಧಿಕಾರಿಗಳನ್ನು ನೇಮಿಸಿ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಇದಕ್ಕೆ ಉತ್ತರಿಸಿದ ಸಚಿವ ವೆಂಕಟೇಶ್, ಸಾರ್ವಜನಿಕರ ಆಸ್ತಿಯನ್ನು ರಕ್ಷಣೆ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿ, ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಎಚ್.ಎಂ.ಗಣೇಶಪ್ರಸಾದ್, ಜಿಪಂ ಸಿಇಓ ಆನಂದಪ್ರಕಾಶ್ ಮೀನಾ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಎಎಸ್‌ಪಿ ಉದ್ದೇಶ್, ತಹಸೀಲ್ದಾರ್ ಎಸ್.ಈ.ಬಸವರಾಜು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಅಹವಾಲು, ಕುಂದುಕೊರತೆ ಸಲ್ಲಿಕೆ

ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ ಜನರು ಜನತಾ ದರ್ಶನದಲ್ಲಿ ಸರತಿ ಸಾಲಿನಲ್ಲಿ ನಿಂತು ತಮ್ಮ ಅಹವಾಲು, ಕುಂದುಕೊರತೆ, ದೂರುಗಳನ್ನು ಸಚಿವ ಕೆ.ವೆಂಕಟೇಶ್ ಅವರಿಗೆ ಸಲ್ಲಿಸಿದರು. ಇ–ಸ್ವತ್ತು ವಿಳಂಬ, ಅಕ್ರಮ ಖಾತೆ, ರಸ್ತೆ ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಳ್ಳದಿರುವುದು, ಬದನಗುಪ್ಪೆ–ಕೆಲ್ಲಂಬಳ್ಳಿ ಪ್ರದೇಶದಲ್ಲಿ ಅಕ್ರಮವಾಗಿ ಮಣ್ಣು ತೆಗೆಯುತ್ತಿರುವುದು, ಮದ್ಯ ಮಾರಾಟ ಅಂಗಡಿಗಳಲ್ಲಿ ಅಬಕಾರಿ ನಿಯಮಗಳ ಉಲ್ಲಂಘನೆ, ಕೆರೆಗಳ ಶುದ್ಧೀಕರಣ, ಹೂಳು ತೆಗೆಯುವುದು, ಒತ್ತುವರಿ ತೆರವು, ಸಾಗುವಳಿದಾರರಿಗೆ ಅನುಕೂಲ ಕಲ್ಪಿಸುವುದು ಸೇರಿದಂತೆ ಇನ್ನಿತರ ಮನವಿಗಳು ಸಲ್ಲಿಕೆ ಯಾದವು. ನಂತರ ಮಾತನಾಡಿದ ಸಚಿವರು, ಜನತಾ ದರ್ಶನದಲ್ಲಿ ಸಲ್ಲಿಕೆ ಯಾದ ಅರ್ಜಿಗಳನ್ನು ವಿಳಂಬ ಮಾಡದೇ ಇತ್ಯರ್ಥಗೊಳಿಸಬೇಕು. ಸಮಂಜಸ ಉತ್ತರ, ಪರಿಹಾರವನ್ನು ನೀಡಬೇಕು. ಇದು ಅಧಿಕಾರಿಗಳ ಜವಾಬ್ದಾರಿಯಾಗಿದೆ ಎಂದರು.

ಕಟಾವು ಯಂತ್ರ, ಬೈಕ್ ಡಿಕ್ಕಿ: ಒಂದೇ ಕುಟುಂಬದ ನಾಲ್ವರ ಸಾವು

ಸಂಕ್ರಾಂತಿ ಹಬ್ಬದ ದಿನ ಜಿನಕನಹಳ್ಳಿಯಲ್ಲಿ ದುರ್ಘಟನೆ



ಸಂತೋಷ್



ಸೌಮ್ಯ



ಅಭಿ



ನಿತ್ಯಸಾಕ್ಷಿ

ಕೊಳ್ಳೇಗಾಲ, ಜ.16– ಭತ್ತದ ಕಟಾವು ಯಂತ್ರ ಹಾಗೂ ಬೈಕ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಪತಿ, ಪತ್ನಿ, ಇಬ್ಬರು ಮಕ್ಕಳು ಸೇರಿ ಒಂದೇ ಕುಟುಂಬದ ನಾಲ್ವರು ಮೃತಪಟ್ಟಿರುವ ಘಟನೆ ತಾಲೂಕಿನ ಜಿನಕನಹಳ್ಳಿ ಗ್ರಾಮದ ರಸ್ತೆಯಲ್ಲಿ ಸಂಕ್ರಾಂತಿ ಹಬ್ಬದ ದಿನವಾದ ಸೋಮವಾರ ನಡೆದಿದೆ.

ತಾಲೂಕಿನ ಪಾಳ್ಯ ಗ್ರಾಮದ ನಿವಾಸಿ ಮಾದ ಅವರ ಮಗ ಸಂತೋಷ್ (32), ಈತನ ಪತ್ನಿ ಸೌಮ್ಯ(27), ಪುತ್ರ ಅಭಿ (9) ಹಾಗೂ ಪುತ್ರಿ ನಿತ್ಯಸಾಕ್ಷಿ(4) ಮೃತಪಟ್ಟವರು. ಸಂಕ್ರಾಂತಿ ಹಬ್ಬದ ಅಂಗವಾಗಿ ಈ ನಾಲ್ವರು ಬೈಕ್‌ನಲ್ಲಿ ದೇವರ ದರ್ಶನ ಪಡೆದು, ಬಟ್ಟೆ ಖರೀದಿಸಲು ಪಾಳ್ಯ ಗ್ರಾಮದಿಂದ ಕೊಳ್ಳೇಗಾಲಕ್ಕೆ ತೆರಳುತ್ತಿದ್ದರು. ಈ ವೇಳೆ ಜಿನಕನಹಳ್ಳಿ ಗ್ರಾಮದ ರಸ್ತೆಯಲ್ಲಿ ಎದುರುಗಡೆಯಿಂದ ಬಂದ ಭತ್ತದ ಕಟಾವು ಯಂತ್ರ ಹಾಗೂ ಬೈಕ್ ನಡುವೆ ಡಿಕ್ಕಿ ಸಂಭವಿಸಿದೆ. ಪರಿಣಾಮ ಕಟಾವು ಯಂತ್ರ ಸುಮಾರು 40 ಮೀಟರ್‌ನಷ್ಟು ಬೈಕ್ ಸವಾರನ್ನು ಎಳೆದುಕೊಂಡು ಹೋಗಿದೆ. ದಾರಿಯಲ್ಲಿ ಬರುತ್ತಿದ್ದ ವಾಹನ ಸವಾರರು ಈ ದೃಶ್ಯ ಕಂಡು ಕೂಗಿಕೊಂಡಾಗ ಕಟಾವು ಯಂತ್ರದ ಚಾಲಕ ವಾಹನವನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದಾನೆ.

ಪತಿ ಸಂತೋಷ್, ಪತ್ನಿ ಸೌಮ್ಯ, ಪುತ್ರಿ ನಿತ್ಯಸಾಕ್ಷಿ ಸ್ಥಳದಲ್ಲೇ ಮೃತಪಟ್ಟರೆ, ಪುತ್ರ ಅಭಿ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾನೆ. ಭತ್ತದ ಕಟಾವು ಯಂತ್ರ ಬೈಕ್ ಅನ್ನು 40 ಮೀಟರ್‌ನಷ್ಟು ಎಳೆದುಕೊಂಡು ಹೋದ ಪರಿಣಾಮ ಮೃತದೇಹಗಳು ರಸ್ತೆ ಬದಿಯಲ್ಲಿ ಬಿದ್ದ ದೃಶ್ಯ ಮನಕಲಕುವಂತಿತ್ತು. ಘಟನೆ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಆಗಮಿಸಿದ ಮೃತರ ಸಂಬಂಧಿಕರ ರೋಧನ ಮುಗಿಲು ಮುಟ್ಟುವಂತಿತ್ತು. ಡಿವೈಎಸ್ಪಿ ಸೋಮೇಗೌಡ, ಸರ್ಕಲ್ ಇನ್ಸ್‌ಪೆಕ್ಟರ್ ಕೃಷ್ಣಪ್ಪ, ಗ್ರಾಮಾಂತರ ಪೊಲೀಸ್ ಠಾಣೆ ಸಬ್‌ಇನ್ಸ್‌ಪೆಕ್ಟರ್ ಗಣೇಶ್ ಮತ್ತು ಸಿಬ್ಬಂದಿ ಸ್ಥಳ ಪರಿಶೀಲಿಸಿದರು. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಭತ್ತದ ಕಟಾವು ಯಂತ್ರದ ಬಳಿ ಸಾರ್ವಜನಿಕರು ಜಮಾಯಿಸಿರುವುದು.

ವೆಂಕಟರಮಣಸ್ವಾಮಿ ರಥೋತ್ಸವ



ಗುಂಡ್ಲುಪೇಟೆ ತಾಲೂಕಿನ ಹುಲುಗಿನಮುರುಡಿ ವೆಂಕಟರಮಣಸ್ವಾಮಿಬೆಟ್ಟದಲ್ಲಿ ವೆಂಕಟರಮಣಸ್ವಾಮಿ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಸಂಪನ್ನಗೊಂಡಿತು.

ಗುಂಡ್ಲುಪೇಟೆ, ಜ.16–ತಾಲೂಕಿನ ತೆರಕಣಾಂಬಿ ಸಮೀಪದ ಚಿಕ್ಕತಿರುಪತಿ ಎಂದೇ ಹೆಸರುವಾಸಿಯಾದ ಹುಲುಗಿನ ಮುರುಡಿ ವೆಂಕಟರಮಣಸ್ವಾಮಿಬೆಟ್ಟದಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ರಥೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ವೆಂಕಟರಮಣಸ್ವಾಮಿಬೆಟ್ಟದಲ್ಲಿ ಸೋಮವಾರ ಮಧ್ಯಾಹ್ನ ತಹಶೀಲ್ದಾರ್ ರಮೇಶ್ ಬಾಬು ರಥದ ಚಕ್ರಕ್ಕೆ ತೆಂಗಿನಕಾಯಿ ಒಡೆಯುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ವೆಂಕಟರಮಣ ಗೋವಿಂದ, ಗೋವಿಂದ ಎಂದು ಘೋಷಣೆ ಕೂಗಿದರು. ರಥವನ್ನು ದೇವಸ್ಥಾನ ಆವರಣದಲ್ಲಿ ಒಂದು ಸುತ್ತು ಎಳೆದರು. ಕಾಲುದಾರಿಯಲ್ಲಿ ಮಹಿಳೆಯರು ಸೇರಿದಂತೆ ಸಾವಿರಾರು ಜನರು ನಡಿಗೆಯಲ್ಲಿ ಬೆಟ್ಟ ಏರಿ ದೇವರ ದರ್ಶನ ಪಡೆದರು. ಖಾಸಗಿ ವಾಹನಗಳಿಗೆ ಬೆಟ್ಟಕ್ಕೆ ನಿರ್ಬಂಧ ಹೇರಿದ್ದ ಕಾರಣ ಸಾರಿಗೆ ಬಸ್‌ನಲ್ಲೇ ಭಕ್ತರು ಬೆಟ್ಟಕ್ಕೆ ತೆರಳಿದರು. ತಾಲೂಕು ಆಡಳಿತದಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿತ್ತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಉದೇಶ್, ಡಿವೈಎಸ್ಪಿ ಲಕ್ಷ್ಮಯ್ಯ ದೇವರ ದರ್ಶನ ಪಡೆದರು.

'ಪೂಜಿಸಲೆಂದೇ ಹೂಗಳ ತಂದೆ' ಹಾಡಿಗೆ ಪ್ರಧಾನಿ ಮೋದಿ ಮೆಚ್ಚುಗೆ



ಬೆಂಗಳೂರು: 'ಪೂಜಿಸಲೆಂದೇ ಹೂಗಳ ತಂದೆ...' ಕನ್ನಡ ಹಾಡಿನ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಮೆಚ್ಚುಗೆ ವ್ಯಕ್ತಪಡಿಸಿ, ಗಾಯಕಿ ಶಿವಶ್ರೀ ಸ್ಕಂದ ಪ್ರಸಾದ್ ಹಾಡಿರುವ, ಲಿಂಕ್ ಅನ್ನು ಅವರು 'ಎಕ್ಸ್' ನಲ್ಲಿ ಹಂಚಿಕೊಂಡಿದ್ದಾರೆ. ಕನ್ನಡದಲ್ಲಿ ಶಿವಶ್ರೀ ಸ್ಕಂದ ಪ್ರಸಾದ್ ಅವರ ಈ ನಿರೂಪಣೆಯು ಪ್ರಭು ಶ್ರೀರಾಮನ ಭಕ್ತಿಯ ಭಾವವನ್ನು ಸುಂದರವಾಗಿ ವರ್ಣಿಸಿದೆ. ಇಂತಹ ಪ್ರಯತ್ನಗಳು ನಮ್ಮ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ' ಎಂದು ಪ್ರಧಾನಿ ಮೋದಿ ಬಣ್ಣಿಸಿದ್ದಾರೆ. ನನಗೆ ಇದು ತುಂಬಾ ಸಂತೋಷದ ಕ್ಷಣ. ನಾನು ಈಗ ಅನುಭವಿಸುತ್ತಿರುವ ಭಾವನೆಯನ್ನು ವಿವರಿಸಲು ಪದಗಳು ಸಾಲುತ್ತಿಲ್ಲ. ಇದು ಸ್ವತಃ ಶ್ರೀರಾಮನ ಆಶೀರ್ವಾದ ಎಂದು ಶಿವಶ್ರೀ ಪ್ರತಿಕ್ರಿಯಿಸಿದ್ದಾರೆ. 'ಎರಡು ಕನಸು' ಚಿತ್ರದ ಹಿಟ್ ಹಾಡು ಇದು. 'ಪೂಜಿಸಲೆಂದೇ ಹೂಗಳ ತಂದೆ...', ಇದು 1974ರಲ್ಲಿ ತೆರೆಕಂಡ ದೊರೆ-ಭಗವಾನ್ ನಿರ್ದೇಶನದ ಚಿತ್ರವಿದು. ಚಿ. ಉದಯಶಂಕರ್, ಈ ಹಾಡಿಗೆ ಸಾಹಿತ್ಯ ರಚಿಸಿದರೆ, ಖ್ಯಾತ ಗಾಯಕಿ ಎಸ್.ಜಾನಕಿ ಹಾಡಿದ್ದಾರೆ. ಈ ಚಿತ್ರದಲ್ಲಿ ವರನಟ ರಾಜ್‌ಕುಮಾರ್, ಮಂಜುಳ, ಕಲ್ಪನಾ ಸೇರಿದಂತೆ ಪ್ರಮುಖರು ಅಭಿನಯಿಸಿದ್ದರು.

ಒಂದನೇ ಪುಟದಿಂದ

ಬಾಲರಾಮನ ಪ್ರತಿಷ್ಠಾಪನೆ

ಹಾಗಿ ಅರುಣ್ ಯೋಗಿ ರಾಜ್ ಕೆತ್ತನೆ ಮಾಡಿರುವ ಅತ್ಯಾಕರ್ಷಕ ಮೂರ್ತಿಯನ್ನು ಆಯ್ಕೆ ಮಾಡಿದೆ. ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಈ ವಿಚಾರವನ್ನು ಸೋಮವಾರ ಅಧಿಕೃತವಾಗಿ ಘೋಷಣೆ ಮಾಡಿದ್ದಾರೆ.

ಅಯೋಧ್ಯೆಯ ಭವ್ಯ ಮಂದಿರದ ಗರ್ಭಗುಡಿಯಲ್ಲಿ ಜನವರಿ 22ರಂದು ಮಧ್ಯಾಹ್ನ 12.20 ಗಂಟೆಗೆ ಬಾಲ ರಾಮ (ರಾಮ ಲಲ್ಲಾ)ನ ಮೂರ್ತಿ ಪ್ರತಿಷ್ಠಾಪನೆ ಮಾಡಲು ಸಮಯ ನಿಗದಿ ಮಾಡಲಾಗಿದ್ದು, ಮಧ್ಯಾಹ್ನ 2.10 ಗಂಟೆಗೆ ಧಾರ್ಮಿಕ ವಿಧಿ ವಿಧಾನಗಳು ನಡೆಯಲಿದೆ. ವಾರಣಾಸಿಯ ಗಣೇಶ್ವರ ಶಾಸ್ತ್ರಿ ದ್ರಾವಿಡ್ ಈ ಶುಭ ಮುಹೂರ್ತ ನಿಗದಿ ಮಾಡಿದ್ದಾರೆ ಎಂದು ಚಂಪತ್ ರಾಯ್ ತಿಳಿಸಿದ್ದಾರೆ.

ಪ್ರಾಣ ಪ್ರತಿಷ್ಠಾಪನೆಗೆ ಆರು ದಿನಗಳ ಮೊದಲೇ ಅಂದರೆ ಇಂದಿನಿಂದ ಧಾರ್ಮಿಕ ವಿಧಿ ವಿಧಾನಗಳು ಆರಂಭವಾಗಿದ್ದು, ಜನವರಿ 21 ರವರೆಗೆ ನಿರಂತರವಾಗಿ ನಡೆಯಲಿವೆ. ಈ ಹಿನ್ನೆಲೆ ಜನವರಿ 20 ಮತ್ತು 21 ರಂದು ಸಾರ್ವಜನಿಕರಿಗೆ ದೇಗುಲಕ್ಕೆ ಪ್ರವೇಶ ನಿರ್ಬಂಧಿಸಲಾಗಿದೆ. ಜನವರಿ 22 ರಂದು ಪ್ರಾಣ ಪ್ರತಿಷ್ಠಾಪನೆಯಾದ ಮಾರನೆ ದಿನ ಅಂದರೆ ಜನವರಿ 23 ರಂದು ಸಾರ್ವಜನಿಕರಿಗೆ ಬಾಲ ರಾಮನ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದು ಚಂಪತ್ ರಾಯ್ ಮಾಹಿತಿ ನೀಡಿದರು.

ಜನವರಿ 17 ರಂದು ಅಂದರೆ ನಾಳೆ ರಾಮ ಲಲ್ಲಾ ಮೂರ್ತಿಯನ್ನು ಸರಯೂ ನದಿಯಿಂದ ಮಂಗಳ ಕಳಸದೊಂದಿಗೆ ತರಲಾಗುವುದು. ಜನವರಿ 18 ರಂದು ಗರ್ಭಗುಡಿಯ ಪಾಣಿ ಪೀಠದಲ್ಲಿ ಬಾಲ ರಾಮನ ಮೂರ್ತಿ ಪ್ರತಿಷ್ಠಾಪನೆ ಮಾಡಲಿದ್ದು, ಅಂದು ವಿಘ್ನ ನಿವಾರಕ ಗಣೇಶ ಹಾಗೂ ಅಂಬಿಕಾ, ವರುಣ ಹಾಗೂ ವಾಸ್ತು ಪೂಜೆ ನೆರವೇರಲಿದೆ. ಜನವರಿ 19 ರಂದು ನವಗ್ರಹ ಸ್ಥಾಪನೆ ಮಾಡಲಿದ್ದು, ಹೋಮ ಹವನ ನೆರವೇರಲಿದೆ. ಜನವರಿ 20 ರಂದು ಪವಿತ್ರ ಸರಯೂ ನದಿಯ ಜಲದಿಂದ ದೇಗುಲವನ್ನು ಶುದ್ಧೀಕರಣ ಮಾಡಲಾಗುವುದು. ಜನವರಿ 21 ರಂದು ರಾಮ ಲಲ್ಲಾ ಮೂರ್ತಿಗೆ 125 ಬಿಂದಿಗೆ ನೀರಿನಿಂದ ಜಲಾಭಿಷೇಕ ಮಾಡಲಾಗುವುದು. ಅಂತಿಮವಾಗಿ ಜನವರಿ 22 ರಂದು ಸರಿಯಾಗಿ ಮಧ್ಯಾಹ್ನ 12.20 ಗಂಟೆಗೆ ಶುಭ ಘಳಿಗೆಯಲ್ಲಿ ಭವ್ಯ ಮಂದಿರದ ಗರ್ಭಗುಡಿಯಲ್ಲಿ ಮೃಗಶಿರಾ ನಕ್ಷತ್ರದಲ್ಲಿ ಬಾಲರಾಮನ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಮಾಡಲಾಗುವುದು.

ದೈವ ಕಳೆ, ರಾಜ ಕಳೆ, ಹಸನ್ಮುಖ ಭಾವ, ಬಾಲ ಚವಿ, ಪ್ರಭಾವಳಿ ಮೂರ್ತಿಯಲ್ಲಿದೆ

ಅಯೋಧ್ಯೆಯ ಗರ್ಭಗುಡಿಯಲ್ಲಿ ಪ್ರತಿಷ್ಠಾಪನೆಗೊಳ್ಳುತ್ತಿರುವ ಬಾಲ ರಾಮನ ಮೂರ್ತಿಯ ಫೋಟೋವನ್ನು ಅರುಣ್ ಯೋಗಿ ರಾಜ್ ತೋರಿಸಿದ್ದಾರೆ. ಬಾಲರಾಮನ ಮೂರ್ತಿ ಕೆತ್ತನೆ ಮುಗಿಸಿ ಜನವರಿ ಮೊದಲ ವಾರ ಮೈಸೂರಿಗೆ ಬಂದ ಸಮಯದಲ್ಲಿ ಕುಟುಂಬಸ್ಥರಿಗೆ ಫೋಟೋ ಪ್ರದರ್ಶಿಸಿದ್ದರು. ದೈವ ಕಳೆ, ರಾಜ ಭಾವ, ಬಾಲ ಚವಿ ಹಾಗೂ ಪ್ರಭಾವಳಿಯಿಂದ ಬಾಲರಾಮ ಕಂಗೊಳಿಸಿದ್ದಾನೆ. ಸುಮಾರು 150ರಿಂದ 200 ಕೆಜಿ ತೂಕವಿರುವ ಬಾಲರಾಮನ ಮೂರ್ತಿ 51 ಇಂಚು ಎತ್ತರವಿದ್ದು, ಮೂರು ಅಡಿ ಅಗಲವಿದೆ. ಬಾಲ ರಾಮನ



ಮೂರ್ತಿ ಕೆತ್ತನೆಗಾಗಿ ಅರುಣ್ ಯೋಗಿರಾಜ್ ಬಹಳ ಪರಿಶ್ರಮ ವಹಿಸಿದ್ದರು. ಬಾಲರಾಮ ಮೂರ್ತಿಗೆ ಯಾವ ರೂಪ ಕೊಡಬೇಕೆಂದು ಶಾಲೆ, ಪಾರ್ಕ್‌ಗಳಿಗೆ ಹೋಗಿ 5 ವರ್ಷದ ಮಕ್ಕಳ ಹಾವ-ಭಾವ ಹೇಗಿರುತ್ತದೆ ಎಂದು ಅಧ್ಯಯನ ಮಾಡಿದ್ದರು. ಸುಮಾರು 5 ಸಾವಿರ ಫೋಟೋಗಳನ್ನು ಇಂಟರ್‌ನೆಟ್‌ನಲ್ಲಿ ಡೌನ್‌ಲೋಡ್ ಮಾಡಿ ಅವುಗಳನ್ನು ಅವಲೋಕಿಸುತ್ತಿದ್ದರು. ಬಾಲರಾಮನ ಪರಿಕಲ್ಪನೆ ಬಗ್ಗೆ ಪ್ರತಿದಿನ ತಲ್ಲೀನರಾಗಿದ್ದರು.

– ವಿಜೇತ, ಶಿಲ್ಪಿ ಅರುಣ್ ಯೋಗಿರಾಜ್ ಪತ್ನಿ

ನಾನು ಕೆತ್ತನೆ ಮಾಡಿರುವ ಬಾಲರಾಮನನ್ನು ವಿಶ್ವವೇ ನೋಡುತ್ತಿದೆ. ಆದರೆ....

ನಾನು ಕೆತ್ತನೆ ಮಾಡಿರುವ ಬಾಲರಾಮನ ಮೂರ್ತಿಯನ್ನು ಭಾರತ ಮಾತ್ರವಲ್ಲದೆ ಇಡೀ ವಿಶ್ವವೇ ಬೆರಗುಗಣ್ಣಿನಿಂದ ನೋಡುತ್ತದೆ. ಆದರೆ ನನಗೆ ಶಿಲ್ಪ ಕೆತ್ತನೆ ಕಲೆಯನ್ನು ಧಾರೆ ಎರೆದ ನನ್ನ ತಂದೆ ಹಾಗೂ ಗುರು ಬಸವಣ್ಣ ಶಿಲ್ಪಿ ನೋಡುವ ಭಾಗ್ಯವಿಲ್ಲವೆಂಬ ಕೊರಗಿದೆ ಎಂದು ನನ್ನ ಮಗ ನೋವು ತೋಡಿಕೊಂಡಿದ್ದನು. ಎಂಬಿಎ ಪದವಿ ಪಡೆದಿರುವ ನನ್ನ ಮಗ ಅರುಣ್ ಯೋಗಿರಾಜ್ ಹಾಗೂ ಅವನ ಅಣ್ಣ ಸೂರ್ಯ ಪ್ರಕಾಶ್‌ಗೆ ಕೆಲಸ ಸಿಕ್ಕಿದ್ದರೂ ಹೋಗಲಿಲ್ಲ. ತಾತ ಮುತ್ತಾತನ ಕಾಲದಿಂದ ಕರಗತವಾಗಿ ಬಂದಿರುವ ಈ ವೃತ್ತಿಯಲ್ಲೇ ತೊಡಗುತ್ತೇವೆ ಎಂದು ಸಿಕ್ಕಿದ ಉದ್ಯೋಗ ನಿರಾಕರಿಸಿದರು. ಅಯೋಧ್ಯೆಯ ರಾಮ ಮಂದಿರದ ಗರ್ಭಗುಡಿಯಲ್ಲಿ ನನ್ನ ಮಗ ಕೆತ್ತನೆ ಮಾಡಿರುವ ಬಾಲ ರಾಮನ ಮೂರ್ತಿ ಪ್ರತಿಷ್ಠಾಪನೆಗೊಳ್ಳುತ್ತಿರುವುದು ನಮ್ಮ ಕುಟುಂಬದ ಸಂತೋಷವನ್ನು ಇಮ್ಮಡಿಗೊಳಿಸಿದೆ.



– ಸರಸ್ವತಿ, ಶಿಲ್ಪಿ ಅರುಣ್ ಯೋಗಿ ರಾಜ್ ತಾಯಿ

ಬಯಸದೆ ಬಂದ ಭಾಗ್ಯ

ಬಾಲರಾಮ ಮೂರ್ತಿ ಕೆತ್ತನೆ ಮಾಡಿರುವುದಕ್ಕೆ ಟ್ರಸ್ಟ್ ನೀಡುವ ಹಣದ ಬಗ್ಗೆ ನಮಗೆ ಆಸಕ್ತಿ ಇಲ್ಲ. ನನ್ನ ಸಹೋದರ ಕೆತ್ತನೆ ಮಾಡಿರುವ ಬಾಲ ರಾಮನ ಮೂರ್ತಿ ಗರ್ಭಗುಡಿಯಲ್ಲಿ ಪ್ರತಿಷ್ಠಾನೆ ಆಗುತ್ತಿರುವುದು ನಮ್ಮ ಪೂರ್ವಜ ಜನ್ಮದ ಪುಣ್ಯ. ಇದು ಬಯಸದೆ ಬಂದ ಭಾಗ್ಯ. ಬಾಲರಾಮನ ಮೂರ್ತಿ ಕೆತ್ತನೆ ಮಾಡಿ ಬಂದ ಮೇಲೆ ನನ್ನ ಸಹೋದರನ ಮುಖದಲ್ಲಿ ತೃಪ್ತ ಭಾವವಿತ್ತು. ಮನಃಪೂರ್ವಕವಾಗಿ ಕೆತ್ತನೆ ಮಾಡಿ ಮುಗಿಸಿರುವ ಅನುಭವವಿತ್ತು. ಕೆತ್ತನೆ ಮಾಡಿರುವ ಬಾಲ ರಾಮನ ಫೋಟೋವನ್ನು ಅರುಣ್ ತೋರಿಸಿದ್ದನು. ಬಾಲ ರಾಮನಲ್ಲಿ ಮಗುವಿನ ಮುಗ್ಧತೆ ಇದೆ, ರಾಜಕುಮಾರನ ಶೋಭೆ ಇದೆ, ದೈವಿಕ ಕಾಂತಿ ಇದೆ. ನನ್ನ ಸಹೋದರನ ಜೊತೆ ನಮ್ಮ ಕುಟುಂಬಸ್ಥರೇ ಆದ ಜಗದೀಶ್, ಚಲುವರಾಜು, ನಾಗರಾಜ್, ಸಿದ್ದರಾಜ್, ಅಜಯ್, ಯೋಗಿ ಅವರಿದ್ದಾರೆ. ಜೂನ್ ತಿಂಗಳಲ್ಲಿ ಅಲ್ಲಿಗೆ ಹೋದವರು ಅಲ್ಲೇ ಇದ್ದು, ಬಾಲ ರಾಮನ ಕೆತ್ತನೆಯಲ್ಲಿ ತೊಡಗಿದ್ದು, ಇನ್ನೂ ಕೂಡ ಬಂದಿಲ್ಲ. **– ಚೇತನ, ಶಿಲ್ಪಿ ಅರಣ್ ಯೋಗಿ ರಾಜ್ ಸಹೋದರಿ**

ಅರುಣ್ ಹ್ಯಾಟ್ರಿಕ್ ಗರಿ

ಅಯೋಧ್ಯೆಯ ರಾಮಮಂದಿರದ ಗರ್ಭಗುಡಿಯಲ್ಲಿ ಬಾಲರಾಮನ ಮೂರ್ತಿ ಕೆತ್ತನೆ ಮಾಡುವ ಮೂಲಕ ಶಿಲ್ಪಿ ಅರುಣ್ ಯೋಗಿರಾಜ್ ಹ್ಯಾಟ್ರಿಕ್ ಸಾಧನೆ ಮಾಡಿದ್ದಾರೆ. ಉತ್ತರಾಖಂಡದ ಕೇದಾರನಾಥದಲ್ಲಿ 12 ಅಡಿ ಎತ್ತರದ ಶಂಕರಾಚಾರ್ಯರ ಮೂರ್ತಿಯನ್ನು ಇದೇ ಅರುಣ್ ಯೋಗಿ ರಾಜ್ ಕೆತ್ತನೆ ಮಾಡಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಂದ ಸೈ ಎನಿಸಿಕೊಂಡಿದ್ದರು.

ತರುವಾಯ ನವದೆಹಲಿಯ ಇಂಡಿಯಾ ಗೇಟ್ ಬಳಿ ನೇತಾಜಿ ಸುಭಾಶ್ ಚಂದ್ರಬೋಸರ 6 ಅಡಿ ಎತ್ತರ ಮೂರ್ತಿಯನ್ನು ಕೆತ್ತನೆ ಮಾಡಿ ನಿಬ್ಬೇರಗಾಗುವಂತೆ ಮಾಡಿದ್ದರು. ಈಗ ಶ್ರೀರಾಮನ ಜನ್ಮಸ್ಥಳ ಅಯೋಧ್ಯೆಯ ರಾಮಮಂದಿರದಲ್ಲಿ ಪ್ರತಿಷ್ಠಾಪನೆ ಮಾಡುತ್ತಿರುವ ಬಾಲರಾಮನ ಮೂರ್ತಿ ಕೆತ್ತನೆ ಮಾಡುವ ಮೂಲಕ ಅರಣ್ ಇಡೀ ವಿಶ್ವದ ಮನೆ ಮಾತಾಗಿದ್ದಾರೆ. ಇಂತಹ ಶಿಲ್ಪಿ ನಮ್ಮ ಮೈಸೂರಿನವರು ಎಂದು ಹೇಳಿಕೊಳ್ಳುವುದು ಹೆಮ್ಮೆಯ ಸಂಗತಿ.

ಬಣ್ಣ ಮಾಸದ ಮೂರ್ತಿ ಸ್ವರೂಪ

ಮೈಸೂರಿನ ಅರುಣ್ ಯೋಗಿರಾಜ್ ಕೆತ್ತನೆ ಮಾಡಿರುವ ಬಾಲರಾಮನ ಮೂರ್ತಿಯ ಕೃಷ್ಣ ಶಿಲೆ ವಿಶಿಷ್ಟವಾಗಿದೆ. ಮೂರ್ತಿಗೆ ಹಾಲು, ತುಪ್ಪ ಸೇರಿದಂತೆ ಯಾವುದೇ ದ್ರವ್ಯದಿಂದ ಅಭಿಷೇಕ ಮಾಡಿದರೂ ಮೂರ್ತಿಯ ಅಂದ ಹಾಗೂ ಮೂಲ ಸ್ವರೂಪ ಮಾಸುವುದಿಲ್ಲ. ಅಭಿಷೇಕದ ನಂತರ ಜಲಾಭಿಷೇಕ ಮಾಡಿದರೆ ಮೂರ್ತಿ ಸಹಜ ಕಾಂತಿಯಲ್ಲಿ ಹೊಳೆಯುತ್ತದೆ. ರಸ್ಟ್ ಪ್ರೂಫ್ ಇರುವ ಕೃಷ್ಣ ಶಿಲೆ ಬಹಳ ಗಟ್ಟಿಯಾಗಿದೆ. ಕಬ್ಬಿಣ ಕೂಡ 850 ಡಿಗ್ರಿ ಸೆಲ್ಸಿಯಸ್‌ನಲ್ಲಿ ಕಾಯಿಸಿದರೆ ಕರಗಿ ಹೋಗುತ್ತದೆ. ಆದರೆ ಈ ಕೃಷ್ಣ ಶಿಲೆ ಅತೀ ಹೆಚ್ಚು ಬೆಂಕಿಗೂ ಕರಗುವುದಿಲ್ಲ, ಸಿಡಿಯುವುದಿಲ್ಲ. ಜೊತೆಗೆ ಆಯಾ ಕಾಲದ ಹವಾಮಾನಕ್ಕೂ ಹೊಂದಿಕೊಳ್ಳುತ್ತದೆ.

ಕುಕ್ಕರಹಳ್ಳಿಕೆರೆಗೆ ನೀರು ಹರಿದು ಬರುವ

'ಪೂರ್ಣಯ್ಯ ನಾಲೆ'ಯ ಪೂರ್ಣ ಪ್ರಮಾಣದ ಸಂರಕ್ಷಣೆ ಅಗತ್ಯ

ಪೂರ್ಣಯ್ಯ ನಾಲೆ ಪುನಶ್ಚೇತನ ಕಾರ್ಯಾಗಾರದಲ್ಲಿ ನಿವೃತ್ತ ನ್ಯಾಯಮೂರ್ತಿ ಸುಭಾಷ್ ಬಿ.ಆಡಿ ಅಭಿಮತ



ಮೈಸೂರಿನ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ 'ಕುಕ್ಕರಹಳ್ಳಿಕೆರೆ, ಪೂರ್ಣಯ್ಯ ನಾಲೆ' ಸಂರಕ್ಷಣೆ ಕುರಿತು ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಾಗಾರವನ್ನು ನಿವೃತ್ತ ನ್ಯಾಯಮೂರ್ತಿ ಸುಭಾಷ್ ಬಿ.ಆಡಿ ಉದ್ಘಾಟಿಸಿದರು.

ಇಂದೋರ್ ನಗರದಲ್ಲಿ ಎಲ್ಲಿಯೂ ಪೋಸ್ಟರ್, ಗೋಡೆ ಬರಹ ಇಲ್ಲ!

ಮೈಸೂರು,ಜ.16(ಪಿಎಂ)– ಸ್ವಚ್ಛ ನಗರ ಪಟ್ಟಿಯಲ್ಲಿ ಸತತ ಏಳನೇ ಬಾರಿಗೆ ಮೊದಲ ಸ್ಥಾನ ಪಡೆದುಕೊಂಡ ಮಧ್ಯಪ್ರದೇಶದ ಇಂದೋರ್ ನಗರದಲ್ಲಿ ಎಲ್ಲಿಯೂ ಒಂದು ಪೋಸ್ಟರ್ ಮತ್ತು ಗೋಡೆ ಬರಹ ಇಲ್ಲ!

ಮೈಸೂರಿನ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಮಂಗಳವಾರ ನಡೆದ ಕಾರ್ಯಾಗಾರದಲ್ಲಿ ನಿವೃತ್ತ ನ್ಯಾಯಮೂರ್ತಿ ಸುಭಾಷ್ ಬಿ.ಆಡಿ ಈ ವಿಷಯ ತಿಳಿಸಿದರು. 2016ರ ಸ್ವಚ್ಛ ಸರ್ವೇಕ್ಷಣೆಯಲ್ಲಿ ಮೈಸೂರು ನಗರ ಇಡೀ ದೇಶಕ್ಕೆ ಸ್ವಚ್ಛ ನಗರಿ ಎಂಬ ಹಿರಿಮೆಗೆ ಭಾಜನವಾಗಿತ್ತು. ಆದರೆ ಈ ಬಾರಿ 27ನೇ ಸ್ಥಾನಕ್ಕೆ ಕುಸಿದಿದೆ. ಅಂತೆಯೇ ಬೆಂಗಳೂರು 125ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ. ಯಾವುದೇ ಸಾಧನೆಗೆ ಜನತೆಯ ಸಹಭಾಗಿತ್ವ ಅತ್ಯಂತ ಮುಖ್ಯ ಎಂದು ಅವರು ತಿಳಿಸಿದರು.

ಸತತವಾಗಿ ಸ್ವಚ್ಛ ನಗರವಾಗಿ ಹೊರಹೊಮ್ಮುತ್ತಿರುವ ಹಿನ್ನೆಲೆಯಲ್ಲಿ ಇಂದೋರ್ ನಗರಕ್ಕೆ ನಾವೊಂದು ತಂಡ ಭೇಟಿ ನೀಡಿದ್ದೆವು. ಅಲ್ಲಿಯ ನಾಗರಿಕರು ತಾವು ಇಂದೋರ್ ನಗರದವರು ಎಂದು ಹೇಳಿಕೊಳ್ಳಲು ಹೆಮ್ಮೆ ಹೊಂದಿದ್ದಾರೆ. ಯಾರಾದರೂ ತ್ಯಾಜ್ಯ ಎಸೆದರೆ ಅವರು ಅದನ್ನು ಕಸದ ಬುಟ್ಟಿಗೆ ಹಾಕಿ ನಂತರ ಆ ರೀತಿ ಮಾಡದಂತೆ ಮನವಿ ಮಾಡುತ್ತಾರೆ. ಇಡೀ ನಗರದಲ್ಲಿ ಎಲ್ಲಿಯೂ ಗೋಡೆ ಬರಹ, ಪೋಸ್ಟರ್ ಕಾಣಲಿಲ್ಲ. ಅಗತ್ಯ ಮಾಹಿತಿ ಫಲಕಗಳು ಅಲ್ಲಿ ಡಿಜಿಟಲ್ ರೂಪದಲ್ಲಿ ಇವೆ. ಅಲ್ಲಿನ ನಾಗರಿಕರ ಪಾಲ್ಗೊಳ್ಳುವಿಕೆಯಿಂದ ಅದು ಸಾಧ್ಯವಾಗಿದೆ. ಇದನ್ನು ಮಾದರಿಯಾಗಿ ಮೈಸೂರಿಗರು ಸ್ವೀಕರಿಸಬೇಕಿದೆ ಎಂದು ಹೇಳಿದರು.

ಮೈಸೂರು,ಜ.16(ಪಿಎಂ)– ಕುಕ್ಕರಹಳ್ಳಿಕೆರೆಗೆ ನೀರು ಹರಿದು ಬರುವ ಪೂರ್ಣಯ್ಯ ನಾಲೆಯ ಕೊನೆ ಮೂರು ಕಿ.ಮೀ. ಮಾತ್ರವಲ್ಲ, ಪೂರ್ಣ ಪ್ರಮಾಣದಲ್ಲಿ ನಾಲೆ ಸಂರಕ್ಷಣೆ ಮಾಡಬೇಕು. ಇದಕ್ಕೆ ಮೈಸೂರು ಸಾರ್ವಜನಿಕರ ಸಹಭಾಗಿತ್ವವೂ ಅಗತ್ಯ ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಕರ್ನಾಟಕ ರಾಜ್ಯಮಟ್ಟದ ಉಸ್ತುವಾರಿ ಸಮಿತಿ ಅಧ್ಯಕ್ಷರೂ ಆದ ನಿವೃತ್ತ ನ್ಯಾಯಮೂರ್ತಿ ಸುಭಾಷ್ ಬಿ.ಆಡಿ ಹೇಳಿದರು.

ಮೈಸೂರಿನ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಮೈಸೂರು ವಿವಿ, ಮೈಸೂರು ಗ್ರಾಹಕರ ಪರಿಷತ್ತು (ಎಂಜಿಪಿ), ವಾಟರ್ ಫೋರಂ ಮೈಸೂರು, ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್ ಸಂಯುಕ್ತಾಶ್ರಯದಲ್ಲಿ 'ಕುಕ್ಕರಹಳ್ಳಿ ಕೆರೆಗೆ ನೀರು ; ಪೂರ್ಣಯ್ಯ ನಾಲೆ, ರಾಜ ಕಾಲುವೆ ಪುನಶ್ಚೇತನ, ಇಂದಿನ ಪರಿಸ್ಥಿತಿ ಮತ್ತು ಮುಂದಿನ ಅವಕಾಶ' ಕುರಿತು ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ಕುಕ್ಕರಹಳ್ಳಿಕೆರೆಗೆ ನೀರು ಹರಿಸಲು ಕೊನೆಯ ಮೂರು ಕಿ.ಮೀ. ಪೂರ್ಣಯ್ಯ ನಾಲೆ ಸಂರಕ್ಷಣೆ ಮಾಡಿದರೆ ಸಾಕಾದರೂ ಪೂರ್ಣ ಪ್ರಮಾಣದಲ್ಲಿ ಸಂರಕ್ಷಣೆ ಮಾಡಬೇಕಿದೆ. ಮೈಸೂರು ನಗರದ ಪ್ರತಿಯೊಂದು ಕೆರೆಯೂ ಅಂತರ ಸಂಪರ್ಕ ಹೊಂದಿವೆ. ಇದರ ಹಿಂದೆ ವೈಜ್ಞಾನಿಕ ಕಾರಣ ಇದ್ದು, ಕೆರೆಗಳು ಒಂದಕ್ಕೊಂದು ಸಂಪರ್ಕ ಕಲ್ಪಿಸುವ ಮೂಲಕ ಜನವಸತಿ ಪ್ರದೇಶದಲ್ಲಿ ಪ್ರವಾಹ ತಲೆದೂರುವುದನ್ನು ತಪ್ಪಿಸುವ ಉದ್ದೇಶ ಹೊಂದಿರುವುದನ್ನು ಕಾಣಬಹುದು ಎಂದು ತಿಳಿಸಿದರು.

ಪರಿಸರ ಸಂರಕ್ಷಣೆ ಸಂಬಂಧ ಕೇವಲ ಆಡಳಿತವನ್ನು ದೂರುವುದಕ್ಕಿಂತಲೂ ಮೈಸೂರಿನ ನಾಗರಿಕರು ಜವಾಬ್ದಾರಿ ಅರಿಯಬೇಕು. ಸಂವಿಧಾನದಲ್ಲಿ ಕಲ್ಪಿಸಿರುವ ಮೂಲಭೂತ ಹಕ್ಕುಗಳ ಬಗ್ಗೆ ಮಾತನಾಡುವುದೇ ಹೆಚ್ಚು. ಆದರೆ ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಮೂಲಭೂತ ಕರ್ತವ್ಯವೇ ಆಗಿದೆ. ಹಾಗಾಗಿ ದೇಶದ ಯಾವುದೇ ಭಾಗವೇ ಆಗಲಿ, ಪ್ರತಿಯೊಬ್ಬರು ಕೆರೆ, ನಾಲೆ ಒತ್ತುವರಿ ಸೇರಿದಂತೆ ಪರಿಸರ ಸಂರಕ್ಷಣೆ ವಿಚಾರದಲ್ಲಿ ಆಡಳಿತ ವರ್ಗದ ಗಮನಕ್ಕೆ ತರಬೇಕು. ಆ ಮೂಲಕ ಪರಿಸರ ಸಂರಕ್ಷಣೆಯ ಕರ್ತವ್ಯ ನಿರ್ವಹಿಸಬೇಕು ಎಂದು ಹೇಳಿದರು.

ಪರಿಸರ ಸಂರಕ್ಷಣಾ ಕಾಯ್ದೆ 1986ರಲ್ಲಿ ಜಾರಿಗೆ ಬಂದಿದ್ದು, ಪರಿಸರ ಉಳಿಸುವುದು ನಮ್ಮ ಕೈಯ್ಯಲ್ಲೇ ಇದೆ. ಜನಸಂಖ್ಯೆ ಹೆಚ್ಚಾದಂತೆ ನಗರೀಕರಣ ಹೆಚ್ಚಾಗುತ್ತಿದೆ. ಹಳ್ಳಿಗಳಲ್ಲಿ ಈಗ ಜನಸಂಖ್ಯೆ ಕಡಿಮೆಯಾಗಿದ್ದು, ಇಲ್ಲಿ ವೃದ್ಧರು ಮಾತ್ರ ಉಳಿಯುತ್ತಿದ್ದರೆ, ಅವರ ಮಕ್ಕಳು ನಗರ ಪ್ರದೇಶ ಇಲ್ಲವೇ ಬೇರೆ ದೇಶಗಳತ್ತ ಮುಖ ಮಾಡಿದ್ದಾರೆ. ಅವರ ಜೀವನೋಪಾಯಕ್ಕೆ ವಲಸೆ ಹೋಗುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಕುಕ್ಕರಹಳ್ಳಿಕೆರೆ, ಪೂರ್ಣಯ್ಯ ನಾಲೆ ಸಂರಕ್ಷಣೆ ವಿಚಾರವನ್ನು ಒಂದು ಕೀ ಸ್ಟೋನ್ ತರ ನೋಡಬೇಕಿದ್ದು, ಇದು ಮೈಸೂರು ಕೆರೆಗಳ ಸಂರಕ್ಷಣೆಗೆ ಮಾದರಿಯಾಗಬೇಕು. ಇದರ ಸಂರಕ್ಷಣೆ ಮೂಲಕ ಮೈಸೂರು ಪರಿಸರ ಸಂರಕ್ಷಣೆಗೆ ಆದ್ಯತೆ ನೀಡಿ ಪುನಃ ಮೈಸೂರಿನ ಸುವರ್ಣ ಯುಗ ಮರುಕಳಿಸುವಂತಾಗಬೇಕು. ಈ ಕೆರೆ ವಾತಾವರಣದಲ್ಲೇ ನಮ್ಮ ಪೂರ್ವಜರು ಬೆಳೆದಿರುವುದಾಗಿದೆ ಎಂದು ನುಡಿದರು.

ಕುಕ್ಕರಹಳ್ಳಿ ಕೆರೆ, ಪೂರ್ಣಯ್ಯ ನಾಲೆ ಸಂರಕ್ಷಣೆಗೆ ಅಗತ್ಯ ಸಹಕಾರ ನೀಡಲಾಗುವುದು. ಮೈಸೂರಿನ ಪರಿಸರ ಸಂರಕ್ಷಣೆಗೆ ಅರಮನೆ ಕಡೆಯಿಂದ ಎಲ್ಲಾ ರೀತಿ ಬೆಂಬಲ ನೀಡಲಾಗುವುದು. ಮೈಸೂರು ತನ್ನ ಸುಂದರ ಪರಿಸರದಿಂದಲೇ ಹಿಂದೆ ಶ್ರೇಷ್ಠ ಸಂಸ್ಥಾನ ಎಂದು ಹೆಸರು ಗಳಿಸಿತ್ತು. ಅದನ್ನು ಉಳಿಸುವುದು ಬಹಳ ಮುಖ್ಯ. ಅದಕ್ಕೆ ಮೊದಲ ಹಂತ ನಮ್ಮ ಕುಕ್ಕರಹಳ್ಳಿ ಕೆರೆ ಸಂರಕ್ಷಣೆ ವಿಚಾರವಾಗಿದೆ ಎಂದರು.

ಕೆರೆಯ ಕೊನೆ ಹಂತದಲ್ಲಿರುವ ಮೂರ್‍ನಾಲ್ಕು ಕಿ.ಮೀ. ನಾಲೆ ಸಂರಕ್ಷಣೆ ಮಾಡಿದರೆ ಕೆರೆಗೆ ನೀರು ಲಭ್ಯವಾಗಲಿದೆ. ಬಾಕಿ ಉಳಿಯುವ ನಾಲೆಯ ಭಾಗದಲ್ಲಿ ಉದ್ಯಾನವನಗಳ ನಿರ್ಮಿಸುವ ಮೂಲಕ ಸಾರ್ವಜನಿಕರ ಉಪಯೋಗಕ್ಕಾಗಿ ಮೀಸಲಿಡಬೇಕಿದೆ. ಮೈಸೂರಲ್ಲಿ ಉತ್ತಮ ಪರಿಸರ ಸೃಷ್ಟಿಸುವ ಮೂಲಕ ಬೇರೆ ವಲಯದಿಂದ ವ್ಯಕ್ತವಾಗುವ ಮಾಲಿನ್ಯ ತಡೆಯಲು ಸಾಧ್ಯವಿದೆ. ಅಭಿವೃದ್ಧಿ ಮತ್ತು ನಗರೀಕರಣ ಅಗತ್ಯವಾದರೂ ಅದು ಪರಿಸರಕ್ಕೆ ಪೂರಕವಾಗಿರಬೇಕು ಎಂದು ತಿಳಿಸಿದರು.

ವಾಟರ್ ಫೋರಂ ಮೈಸೂರು ಸಂಚಾಲಕ ಯು.ಎನ್.ರವಿಕುಮಾರ್, ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್ ಡೀನ್ ಡಾ.ಹೆಚ್.ಎಸ್.ಚಂಪಾ, ಸಂಪನ್ಮೂಲ ವ್ಯಕ್ತಿಗಳಾದ ಶಿವಪ್ರಕಾಶ್, ಯದುಪತಿ ಪುಟ್ಟಿ, ವಿಶ್ವನಾಥ್ ಶಂಕರಪ್ಪ, ಎಸ್.ಶೈಲಾಜೇಶ್ ಅವರು ಪಿಪಿಟಿ ಮೂಲಕ ಸವಿಸ್ತಾರವಾಗಿ ಕುಕ್ಕರಹಳ್ಳಿಕೆರೆ ಮತ್ತು ಪೂರ್ಣಯ್ಯ ನಾಲೆಯ ಹಿನ್ನೆಲೆ ಹಾಗೂ ಸಂರಕ್ಷಣೆ ಸೇರಿದಂತೆ ವಿವಿಧ ಆಯಾಮಗಳನ್ನು ವಿವರಿಸಿದರು. ಮೈಸೂರು ವಿವಿ ಮೌಲ್ಯಮಾಪನ ಕುಲಸಚಿವ ಪ್ರೊ.ಕೆ.ಎಂ. ಮಹದೇವನ್, ಎಂಜಿಪಿ ಕಾರ್ಯಾಧ್ಯಕ್ಷೆ ಎಸ್. ಶೋಭನಾ ವೇದಿಕೆಯಲ್ಲಿದ್ದರು. ಪಾರಂಪರಿಕ ತಜ್ಞ ಡಾ.ಎನ್.ಎಸ್.ರಂಗರಾಜು, ಎಂಜಿಪಿ ಭಾಮೀ ವಿ.ಶೆಣೈ ಸೇರಿದಂತೆ ಮತ್ತಿತರರು ಹಾಜರಿದ್ದರು.

ಇಂದು ಬುಡಕಟ್ಟು ಹಾಡಿ ಜನರಿಗೆ ಆಶಾ ಜ್ಯೋತಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಎಸ್.ಶಾಮ್‌ಸುಂದರ್ ಮಾತನಾಡಿದರು.

ಮೈಸೂರು,ಜ.16(ಎಂಟಿವೈ)– ಹುಣಸೂರು ತಾಲೂಕಿನ ಬಿಲ್ಲೇನ ಹೊಸಹಳ್ಳಿ ಬುಡಕಟ್ಟು ಹಾಡಿಯಲ್ಲಿ ಜ.17ರಂದು ಬೆಳಗ್ಗೆ 11 ಗಂಟೆಗೆ ನವೀಕರಿಸಬಹುದಾದ ಮೈಕ್ರೋಗ್ರಿಡ್ ವಿದ್ಯುತ್ ಯೋಜನೆ 'ಆಶಾ ಜ್ಯೋತಿ' ಘಟಕದ ಉದ್ಘಾಟನಾ ಸಮಾರಂಭ ನಡೆಯಲಿದೆ ಎಂದು ಎನ್‌ಐಇ-ಕ್ರೆಸ್ಟ್ ಮುಖ್ಯಸ್ಥ ಎಸ್.ಶಾಮ್ ಸುಂದರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಡಿ ಜನರಿಗೆ ನವೀಕರಿಸಬಹುದಾದ ಇಂಧನದ ನೆರವಿನಿಂದ ವಿದ್ಯುತ್ ಉತ್ಪಾದನೆ ಮಾಡಿ ಸರಬರಾಜು ಮಾಡುವ ನಿಟ್ಟಿನಲ್ಲಿ ಮೈಸೂರಿನ ಎನ್‌ಐಇ ಕಾಲೇಜು ಮತ್ತು ಬೆಂಗಳೂರಿನ ಆಶ್ರಯ ಹಸ್ತ ಟ್ರಸ್ಟ್ ಮೈಕ್ರೋಗ್ರಿಡ್ ವಿದ್ಯುತ್ ಯೋಜನೆ ರೂಪಿಸಿತ್ತು. ಈ ಯೋಜನೆ ಅನುಸಾರ ಹುಣಸೂರು ತಾಲೂಕಿನ ಬಿಲ್ಲೇನ ಹೊಸಹಳ್ಳಿ ಬುಡಕಟ್ಟು ಹಾಡಿಯಲ್ಲಿ ನವೀಕರಿಸಬಹುದಾದ ಮೈಕ್ರೋಗ್ರಿಡ್ ವಿದ್ಯುತ್ ಯೋಜನೆ ಆಶಾ ಜ್ಯೋತಿ ಘಟಕವನ್ನು ನಿರ್ಮಿಸಲಾಗಿದೆ. ಜ.17ರಂದು ಬೆಳಿಗ್ಗೆ 11ಕ್ಕೆ ಉದ್ಘಾಟಿಸಲಾಗುತ್ತಿದೆ. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಜಿ.ಪಂ ಸಿಇಓ ಕೆ.ಎಂ.ಗಾಯತ್ರಿ, ಶಾಸಕ ಜಿ.ಡಿ.ಹರೀಶ್ ಗೌಡ, ಆಶ್ರಯ ಹಸ್ತ ಟ್ರಸ್ಟ್ ವ್ಯವಸ್ಥಾಪಕ ಟ್ರಸ್ಟಿ ಕೆ.ದಿನೇಶ್, ಆಶಾ ದಿನೇಶ್, ಎನ್‌ಐಇ-ಎಂಸಿ ಗೌರವ ಕಾರ್ಯದರ್ಶಿ ಎಸ್.ಬಿ.ಉದಯ ಶಂಕರ್, ಹಾಗೂ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಈ ಯೋಜನೆಯಿಂದ ಲಕ್ಷ್ಮಣಾಪುರ ಹಾಗೂ ಬಿಲ್ಲೇನ ಹೊಸಹಳ್ಳಿಯಲ್ಲಿನ 73 ಮನೆಗಳಿಗೆ ವಿದ್ಯುತ್ ಒದಗಿಸಲಾಗಿದೆ. ಯೋಜನೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಬಳಸಿದ್ದು ಸೌರ ಮತ್ತು ಬಯೋಡೀಸೆಲ್ ಎರಡರ ಮೂಲಕವೂ ಕಾರ್ಯನಿರ್ವಹಿಸುತ್ತದೆ. ಸಂಪೂರ್ಣ ಪರಿಸರಸ್ನೇಹಿಯಾಗಿದ್ದು, ರಿಮೋಟ್ ಮೂಲಕ ನಿಯಂತ್ರಿಸಬಹುದು ಎಂದರು.

ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಪ್ರೊ. ಪಿ.ಪರಮೇಶ್, ಪಿಆರ್‌ಓ ಗಾಯಕ್ ವಾಡ್, ಆಶ್ರಯ ಹಸ್ತ ಟ್ರಸ್ಟ್‌ನ ವಿಶ್ವನಾಥ್ ರೆಡ್ಡಿ, ರಚನಾ ಎನರ್ಜೀರ್ ವ್ಯವಸ್ಥಾಪಕ ನಿರ್ದೇಶಕ ಅನಿಲ್ ಕುಮಾರ್ ನಾಡಿಗೇರ್ ಉಪಸ್ಥಿತರಿದ್ದರು.

ಪ್ರತಾಪ್ ಸಿಂಹ ಈಗ ಪತ್ರಕರ್ತರಲ್ಲ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ನಗರ ವಕ್ತಾರ ಎಸ್.ರಾಜೇಶ್ ಮಾತನಾಡಿದರು.

ಮೈಸೂರು, ಜ.16(ಎಂಟಿವೈ)– ಲೋಕಸಭಾ ಚುನಾವಣಾ ರಾಜಕೀಯಕ್ಕಾಗಿ ಪತ್ರಿಕೋದ್ಯಮಕ್ಕೆ ಮಸಿ ಬಳಿಯುವ ಕೆಲಸ ಮಾಡಬಾರದು ಎಂದು ಕಾಂಗ್ರೆಸ್ ನಗರ ಘಟಕದ ವಕ್ತಾರ ಎಸ್.ರಾಜೇಶ್ ಕಿಡಿಕಾರಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಸಂಸದ ಪ್ರತಾಪ್ ಸಿಂಹ ಹೇಳಿಕೆ ನೀಡಿ, ಈ ಬಾರಿ ಲೋಕಸಭಾ ಚುನಾವಣೆ ಪತ್ರಕರ್ತ ವರ್ಸಸ್ ಸಿದ್ದರಾಮಯ್ಯ ಮಗ ಎಂದಿರುವುದು ಖಂಡನೀಯ. ಚುನಾವಣಾ ರಾಜಕೀಯಕ್ಕಾಗಿ ಪತ್ರಿಕಾ ಕ್ಷೇತ್ರದ ಹೆಸರು ಮುನ್ನೆಲೆಗೆ ತರುವುದು ಸರಿಯಲ್ಲ. ಸಂಸದ ಪ್ರತಾಪ್ ಸಿಂಹ ಈಗ ಪತ್ರಕರ್ತನಲ್ಲ. ಈಗ ಪ್ರತಾಪ ಸಿಂಹ ರಾಜ್ಯದ ಯಾವ ಪತ್ರಿಕೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ? ರಾಜಕೀಯ ಲಾಭಕ್ಕಾಗಿ ಪತ್ರಕರ್ತ ಎಂದು ಹೇಳಿಕೊಳ್ಳುತ್ತಿರುವುದು ಸರಿಯಲ್ಲ. ಅವರ ವಿರುದ್ಧ ಪತ್ರಕರ್ತರ ಸಂಘ ಕ್ರಮ ಕೈಗೊಳ್ಳಬೇಕು. ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ವಿರೋಧಿಸಲು ಪತ್ರಿಕೋದ್ಯಮಕ್ಕೆ ಮಸಿ ಬಳಿಯುತ್ತಿದ್ದಾರೆ. ಈ ಕುತಂತ್ರ ಫಲ ನೀಡುವುದಿಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಕಾರ್ಮಿಕ ವಿಭಾಗದ ಕಾರ್ಯದರ್ಶಿ ರವಿ, ಯುವ ಕಾಂಗ್ರೆಸ್ ಕಾರ್ಯದರ್ಶಿ ನವೀದ್ ಪಾಷ, ಸಾಹುಕಾರ್ ಚನ್ನಯ್ಯ ಬ್ಲಾಕ್ ಕಾಂಗ್ರೆಸ್ ಕಾರ್ಯದರ್ಶಿ ಎಸ್.ಎ.ರಹೀಂ, ಮುಖಂಡ ಕುರುಬರಹಳ್ಳಿ ಪ್ರಕಾಶ್ ಇದ್ದರು.

ನಾಳೆ ಜೇನು ಸಾಕಾಣಿಕೆ ಅಕಾಡೆಮಿ ಕೇಂದ್ರ ಉದ್ಘಾಟನೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬೀ-9 ಸಂಸ್ಥೆಯ ಚೀತಾ ಯಜ್ಞೇಶ್ ಶೆಟ್ಟಿ ಮಾತನಾಡಿದರು.

ಮೈಸೂರು, ಜ.16(ಎಂಟಿವೈ)– ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದ ಮೀನಕುಂಟೆಯಲ್ಲಿ ಬೀ-9 ಸಂಸ್ಥೆ ಆರಂಭಿಸಿರುವ ಜೇನು ಸಾಕಾಣಿಕೆ ಅಕಾಡೆಮಿ ಮತ್ತು ತರಬೇತಿ ಕೇಂದ್ರದ ಉದ್ಘಾಟನಾ ಸಮಾರಂಭ ಜ.18ರಂದು ಬೆಳಿಗ್ಗೆ 11.30ಕ್ಕೆ ಜರುಗಲಿದೆ ಎಂದು ಸಂಸ್ಥೆಯ ಚೀತಾ ಯಜ್ಞೇಶ್ ಶೆಟ್ಟಿ ತಿಳಿಸಿದ್ದಾರೆ

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೀ-9 ಸಂಸ್ಥೆಯು ರೈತರಿಗೆ ಜೇನು ಸಾಕಾಣಿಕೆ ತರಬೇತಿ ನೀಡುತ್ತಾ ಬಂದಿದೆ. ಇದೀಗ ಮೈಸೂರಲ್ಲಿ ನೂತನ ಕೇಂದ್ರ ಸ್ಥಾಪಿಸಲಾಗಿದ್ದು, ಜ.18ರಂದು ಕಾರ್ಮಿಕ ಇಲಾಖೆ ಸಚಿವ ಸಂತೋಷ್ ಎಸ್.ಲಾಡ್ ಘಟಕ ಉದ್ಘಾಟಿಸಲಿದ್ದಾರೆ. ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆ ಮ್ಯಾನೇಜರ್ ಎ.ಭರತ್, ಪ್ರೀತಂ ಶೆಣೈ ಇದ್ದರು.



ಮೈಸೂರಿನ ವೀರ ಮಡಿವಾಳ ಮಾಚಿದೇವರ ಸಂಘದ ನೂತನ ವರ್ಷದ ದಿನದರ್ಶಿಕೆಯನ್ನು ಕುಕ್ಕರಹಳ್ಳಿ ಕೆರೆ ಬಳಿಯ ಮಾಚಿದೇವ ದೇವಸ್ಥಾನದಲ್ಲಿ ಶಾಸಕ ಹರೀಶ್ ಗೌಡ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಮಡಿಕಟ್ಟೆಯ ಪದಾಧಿಕಾರಿಗಳು ಹಾಗೂ ಶ್ರೀ ವೀರ ಮಡಿವಾಳ ಮಾಚಿದೇವರ ಸಂಘದ ಅಧ್ಯಕ್ಷ ಸಿ.ಎಸ್ ಮಹೇಶ್, ಶಿವಶಂಕರ್, ರಮೇಶ್, ಮಂಜು, ರಂಗಪ್ಪ, ಗೋಪಾಲ್, ಶ್ರೀನಿವಾಸ್, ರಾಜು ಮತ್ತಿತರರು ಹಾಜರಿದ್ದರು.

'ಮೈಸೂರು-ಶ್ರೀರಂಗಪಟ್ಟಣ ಗೈಡ್ ಬುಕ್' ಪುಸ್ತಕ ಬಿಡುಗಡೆ

ಮೈಸೂರು, ಜ.16(ಎಸ್‌ಪಿಎನ್)– ಮೈಸೂರು ಕೃಷ್ಣರಾಜ ಬುಲೆವಾರ್ಡ್ ರಸ್ತೆಯ ಒಡೆಯರ್ ಸೆಂಟರ್ ಆಫ್ ಆರ್ಕಿಟೆಕ್ಚರಲ್ ಸಭಾಂಗಣದಲ್ಲಿ 'ದಿ ಡೆಕ್ಕನ್ ಹೆರಿಟೇಜ್ ಫೌಂಡೇಶನ್' ವತಿಯಿಂದ ಹೊರತಂದಿರುವ 'ಮೈಸೂರು-ಶ್ರೀರಂಗಪಟ್ಟಣದ ಗೈಡ್ ಬುಕ್' ಪುಸ್ತಕವನ್ನು ಫೌಂಡೇಶನ್‌ನ ಸಹ ಸಂಸ್ಥಾಪಕ ಡಾ.ಜಾರ್ಜ್ ಮಿಚೆಲ್ ಮಂಗಳವಾರ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಅವರು, ಮೈಸೂರು ಮತ್ತು ಶ್ರೀರಂಗಪಟ್ಟಣದ ಭವ್ಯ ಪರಂಪರೆ ತಿಳಿಯಲು ಆಗಮಿಸುವ ದೇಶ-ವಿದೇಶ ಪ್ರವಾಸಿಗರಿಗೆ 'ಮೈಸೂರು-ಶ್ರೀರಂಗಪಟ್ಟಣದ ಗೈಡ್ ಬುಕ್' ಪುಸ್ತಕ ಬಹಳ ಉಪಯುಕ್ತವಾಗಿದೆ. ಈ ಪುಸ್ತಕವನ್ನು ನನ್ನೊಂದಿಗೆ ಲೇಖಕರಾದ ಮಾಳವಿಕಾ ಮೂರ್ತಿ, ಕ್ಯಾಲೆಬ್ ಸಿಮ್ಮನ್ಸ್, ಶೀವೇಂದ್ರ ಅರಸ್ ಒಂದು ತಂಡವಾಗಿ ಕೆಲಸ ಮಾಡಿರುವುದರಿಂದ ಈ ಅಮೂಲ್ಯ ಪುಸ್ತಕ ಇಂದು ಲೋಕಾರ್ಪಣೆಗೊಳ್ಳುತ್ತಿದೆ. ಇದು ಹೆಮ್ಮೆಯ ವಿಷಯ ಎಂದರು.

ಪ್ರತಿಯೊಬ್ಬ ಪ್ರವಾಸಿಗರೂ ಮೈಸೂರು ಅರಮನೆ ವಾಸ್ತುಶಿಲ್ಪ, ಇಲ್ಲಿನ ರಾಜ ಮನೆತನ ಆಡಳಿತ ವೈಖರಿ, ಅವರು (ಮೈಸೂರು ಒಡೆಯರ್ ಅವರು) ಜಾರಿಗೆ ತಂದಿದ್ದ ಜನೋಪಯೋಗಿ ಕಾರ್ಯಗಳ ಕುರಿತು ತಿಳಿದುಕೊಳ್ಳುವ ಆಸಕ್ತಿಯಿಂದ ಮೈಸೂರಿಗೆ ಪ್ರತಿ ವರ್ಷ ಭೇಟಿ ನೀಡುತ್ತಾರೆ. ಹಾಗೆಯೇ ಶ್ರೀರಂಗಪಟ್ಟಣಕ್ಕೂ ಭೇಟಿ ನೀಡಿ, ಅಲ್ಲಿನ ಆಡಳಿತ ಹಾಗೂ ವಾಸ್ತುಶಿಲ್ಪದ ಬಗ್ಗೆಯೂ ತಿಳಿದುಕೊಳ್ಳಲು ಈ ಪುಸ್ತಕ ಸಹಕಾರಿಯಾಗಲಿದೆ ಎಂದು ತಿಳಿಸಿದರು.



'ದಿ ಡೆಕ್ಕನ್ ಹೆರಿಟೇಜ್ ಫೌಂಡೇಶನ್' ವತಿಯಿಂದ ಹೊರ ತಂದಿರುವ 'ಮೈಸೂರು-ಶ್ರೀರಂಗಪಟ್ಟಣದ ಗೈಡ್ ಬುಕ್' ಪುಸ್ತಕವನ್ನು ಫೌಂಡೇಶನ್‌ನ ಸಹ ಸಂಸ್ಥಾಪಕ ಡಾ.ಜಾರ್ಜ್ ಮಿಚೆಲ್ ಮಂಗಳವಾರ ಬಿಡುಗಡೆಗೊಳಿಸಿದರು.

ಮೈಸೂರು ಅರಮನೆಯ ಇಂಡೋ-ಸಾರ್ಸೆನಿಕ್ ಮಾದರಿಯಲ್ಲಿ ನಿರ್ಮಾಣಗೊಂಡಿದ್ದು, ಇದರ ವಾಸ್ತುಶಿಲ್ಪಿ ಹೆನ್ರಿ ಇರ್ವಿನ್ ಕುರಿತು ಮಾಹಿತಿ, ಮೈಸೂರು ರಾಜಮನೆತನದ ಇತಿಹಾಸ ಹಾಗೂ ಪ್ರತಿಯೊಂದು ಸ್ಥಳದ ಭಾವಚಿತ್ರ, ಅದನ್ನು ನಿರ್ಮಿಸಿದ ಐತಿಹಾಸಿಕ ವ್ಯಕ್ತಿಗಳ ವಿವರ ಸೇರಿದಂತೆ ಸ್ಥಳದ ಪರಿಚಯವನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ ಎಂದು ತಿಳಿಸಿದರು.

ಮೈಸೂರು ಅರಮನೆಗೆ ಭೇಟಿ ನೀಡಿ ಕಣ್ತುಂಬಿಕೊಳ್ಳುವ ಪ್ರವಾಸಿಗರು, ಅರಮನೆಗೆ ಅನತಿ ದೂರದಲ್ಲಿರುವ ಚಾಮುಂಡಿಬೆಟ್ಟ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ವೀಕ್ಷಣೆ, ಮೃಗಾಲಯ ಸೇರಿದಂತೆ ಇತರೆ ಪ್ರವಾಸಿ ಸ್ಥಳಗಳು, ರಾಜಮನೆತನ ಆಳ್ವಿಕೆಯಲ್ಲಿ ನಿರ್ಮಾಣಗೊಂಡಿರುವ ಪಾರಂಪರಿಕಗಳನ್ನು, ಕಟ್ಟಡಗಳನ್ನು ವೀಕ್ಷಿಸುತ್ತಾರೆ. ಇಲ್ಲಿನ ಎಲ್ಲಾ ಕಟ್ಟಡಗಳ ಮಾಹಿತಿ ಬಗ್ಗೆ ಈ ಪುಸ್ತಕದಲ್ಲಿ ಉಲ್ಲೇಖಿಸಲಾಗಿದೆ. ಈ ನಿಟ್ಟಿನಲ್ಲಿ 'ದಿ ಡೆಕ್ಕನ್ ಹೆರಿಟೇಜ್ ಫೌಂಡೇಶನ್' ಕಾರ್ಯ ಶ್ಲಾಘನೀಯ ಎಂದರು.

ಡಾ.ಹೆಲೆನ್ ಫಿಲೋನ್ ಮಾತನಾಡಿ, ಭಾರತದ ಇತಿಹಾಸ ಸಂರಕ್ಷಿಸಲು ಮತ್ತು ಉತ್ತೇಜಿಸಲು ಹಲವಾರು ಉಪಯುಕ್ತ ಕ್ರಮಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕೈಗೊಂಡಿವೆ. ಮಹಾರಾಷ್ಟ್ರ, ಗೋವಾ, ಕರ್ನಾಟಕ, ತೆಲಂಗಾಣ ಮತ್ತು ಆಂಧ್ರ ಪ್ರದೇಶ ಸೇರಿದಂತೆ ದೇಶದ ಇತರೆ ರಾಜ್ಯಗಳಲ್ಲೂ ಐತಿಹಾಸಿಕ ಸ್ಮಾರಕಗಳ ರಕ್ಷಣೆಗೆ ಆಯಾಯ ರಾಜ್ಯಗಳು ಮುಂದಾಗಿವೆ. ಭಾರತ ಪ್ರವಾಸೋದ್ಯಮ ಮಾಹಿತಿಗಳನ್ನು ಕಲೆ ಹಾಕುವಲ್ಲಿ 'ದಿ ಡೆಕ್ಕನ್ ಹೆರಿಟೇಜ್ ಫೌಂಡೇಶನ್' ಕಾರ್ಯ ಉತ್ತಮ. ಇಲ್ಲಿಯವರೆಗೆ ಪ್ರವಾಸಿಗರಿಗೆ ಉಪಯೋಗವಾಗುವ 14 ಪುಸ್ತಕಗಳನ್ನು ಹೊರತಂದಿದೆ ಎಂದರು. ಈ ವೇಳೆ ಮೈಸೂರು ವಿವಿ ಕುಲಪತಿ ಪ್ರೊ ಎನ್.ಕೆ.ಲೋಕನಾಥ್ ಪುಸ್ತಕ ಬಿಡುಗಡೆಗೊಳಿಸಿ, ಶುಭ ಹಾರೈಸಿದರು.

ವೇದಿಕೆಯಲ್ಲಿ ಡಿಎಚ್ ಎಫ್‌ನ ಸಹ ಸ್ಥಾಪಕ ಟ್ರಸ್ಟಿ ಸ್ಟೀಫನ್ ಬ್ಲೋಚ್ ಸಲೋಜ್, ಅಮೆರಿಕನ್ ಫ್ರೆಂಡ್ ಆಫ್ ದಿ ಡೆಕ್ಕನ್ ಹೆರಿಟೇಜ್ ಫೌಂಡೇಶನ್ ಅಧ್ಯಕ್ಷೆ ಎಲೆನಾ ವರ್ನರ್, ಲೇಖಕರಾದ ಶಿವೇಂದ್ರ ಅರಸ್, ಮಾಳವಿಕಾ ಮೂರ್ತಿ ಸೇರಿದಂತೆ ಇತರರಿದ್ದರು.

ಮೈಸೂರು ಮಿತ್ರ ಬುಧವಾರ 17 ಜನವರಿ 2024

ಇಂದು 'ವಿರಾಟಪುರ ವಿರಾಗಿ' ಸಿನಿಮಾ ಉಚಿತ ಪ್ರದರ್ಶನ



ಮೈಸೂರು: ಕಾರಣಿಕ ಪುರುಷ ಹಾನಗಲ್ ಶ್ರೀ ಕುಮಾರ ಶಿವಯೋಗಿಗಳ ಜೀವನ ಚರಿತ್ರೆ ಆಧರಿಸಿದ 'ವಿರಾಟಪುರ ವಿರಾಗಿ' ಸಿನಿಮಾ ಪ್ರದರ್ಶನವನ್ನು ಜನವರಿ 17ರಂದು ಸಂಜೆ 4 ಗಂಟೆಗೆ ಬನ್ನಿಮಂಟಪದ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಸಭಾಂಗಣದಲ್ಲಿ ಉಚಿತವಾಗಿ ಏರ್ಪಡಿಸಲಾಗಿದೆ. ಮೊದಲು ಬಂದವರಿಗೆ ಮೊದಲ ಆದ್ಯತೆ.

ಶ್ರೀ ಗುರುದೇವ ಸೇವಾ ಸಂಸ್ಥೆ (ಸಮಾಧಾನ) ನಿರ್ಮಿಸಿರುವ ಈ ಸಿನಿಮಾವನ್ನು ಬಿ.ಎಸ್.ಲಿಂಗದೇವರು ನಿರ್ದೇಶಿಸಿದ್ದಾರೆ. 19ನೇ ಶತಮಾನದಲ್ಲಿ ವೀರಶೈವ ಮಹಾಸಭೆಯು ಹಾನಗಲ್ ಕುಮಾರ ಶಿವಯೋಗಿಗಳ ನೇತೃತ್ವದಲ್ಲಿ ನಡೆಯಿತು. ಮಠಾಧಿಪತಿಗಳಾಗುವವರಿಗೆ ಧಾರ್ಮಿಕ ಶಿಕ್ಷಣ ಕೊಡುವುದಕ್ಕಾಗಿ ಮಲಪ್ರಭಾ ನದಿ ದಂಡೆಯ ಮೇಲೆ ಈಗಿನ ಬಾಗಲಕೋಟೆ ಜಿಲ್ಲೆಯ ಶಿವಯೋಗಮಂದಿರವನ್ನು ಹಾನಗಲ್ ಕುಮಾರ ಶಿವಯೋಗಿಗಳು ಆರಂಭಿಸಿದರು. ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ನಿಂಬಾಳದ ಮೌನತಪಸ್ವಿ ಜಡೆಯ ಶಾಂತಲಿಂಗ ಸ್ವಾಮೀಜಿ ಸೇರಿದಂತೆ ವಿವಿಧ ಮಠಾಧೀಶರು ಸಿನಿಮಾ ವೀಕ್ಷಿಸುವರು.

ಈ ಸಿನಿಮಾ ಬಿಡುಗಡೆಗೂ ಮುನ್ನ ಪ್ರೀಮಿಯರ್ ಪ್ರದರ್ಶನದಲ್ಲಿ ಸುಮಾರು 160 ಹೌಸ್‌ಫುಲ್ ಪ್ರದರ್ಶನ ಕಂಡಿದೆ. ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಏಷಿಯನ್ ಸ್ಪರ್ಧಾ ವಿಭಾಗದಲ್ಲಿ ಪ್ರಶಸ್ತಿ ಹಾಗೂ ಚಿತ್ರದ ಅತ್ಯುತ್ತಮ ಸಂಭಾಷಣೆಗಾಗಿ ಹುಣಸೂರು ಕೃಷ್ಣಮೂರ್ತಿ ಹೆಸರಲ್ಲಿ ರಾಘವೇಂದ್ರ ಚಿತ್ರವಾಣಿ ಪ್ರಶಸ್ತಿ ಪುರಸ್ಕೃತವಾಗಿದೆ.



ಮೈಸೂರು ನಗರಪಾಲಿಕೆ ವಾರ್ಡ್ ನಂಬರ್ 2ರ ಮಂಚೇಗೌಡನಕೊಪ್ಪಲಲ್ಲಿ ಶಾಸಕ ಕೆ. ಹರೀಶ್‌ಗೌಡರ ಕಚೇರಿ ಉದ್ಘಾಟನೆ ಮತ್ತು ರವಿ ಸ್ನೇಹ ಬಳಗ ಸೇವಾ ಟ್ರಸ್ಟ್ ನೂತನ ಕ್ಯಾಲೆಂಡರ್ ಜೊತೆಗೆ ಎಂಸಿಸಿ ಕಾರ್ಮಿಕರಿಗೆ ಸಂಕ್ರಾಂತಿಯ ಎಳ್ಳುಬೆಲ್ಲ ಬೀರಲಾಯಿತು. ಕಚೇರಿಯನ್ನು ಶಾಸಕ ಹರೀಶ್‌ಗೌಡ ಉದ್ಘಾಟಿಸಿದರು. ಈ ವೇಳೆ ಎಮ್.ಆರ್. ರವಿಕುಮಾರ್ (ಡೆಲ್ಲಿ), ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಮೂರ್ತಿ, ಇಂದಿರಾಗಾಂಧಿ ಬ್ಲಾಕ್‌ನ ರವಿ ಮಂಚೇಗೌಡನ ಕೊಪ್ಪಲು, ಶಿವಮಾದು, ವಾರ್ಡ್ ಅಧ್ಯಕ್ಷ ಕೃಷ್ಣ, ಮುಖಂಡರಾದ ಸುಶ್ರುತ್‌ಗೌಡ, ಮೂರ್ತಿ, ಕೆಂಪ, ಶ್ರೀಧರ್, ಜಯರಾಮಚಾರಿ, ರವಿ ಭಾಗವಹಿಸಿದ್ದರು.

ಅಯೋಧ್ಯೆಯಲ್ಲಿ ಶ್ರೀರಾಮಲಲ್ಲಾ ಪ್ರತಿಷ್ಠಾಪನೆ;ವಿಷ್ಣುಸಹಸ್ರನಾಮ ಪಾರಾಯಣ

ಮೈಸೂರು, ಜ. 16– ಅಯೋಧ್ಯೆಯಲ್ಲಿ ಶ್ರೀರಾಮನ ಪ್ರತಿಷ್ಠಾಪನೆ ಅಂಗವಾಗಿ ಜಯನಗರದ ಶ್ರೀರಾಮಮಂದಿರದಲ್ಲಿ ಜ.21ರಂದು ಸಂಜೆ 7.30ಕ್ಕೆ ವಿಷ್ಣುಸಹಸ್ರನಾಮ ಪಾರಾಯಣ, ಅರ್ಚನೆ, ಆರತಿ, ಪ್ರಸಾದ ವಿನಿಯೋಗ, ಜ. 22 ರಂದು ಬೆಳಗ್ಗೆ 7 ಗಂಟೆಗೆ ಧ್ವಜಾರೋಹಣ ನಂತರ ಶ್ರೀರಾಮರಿಗೆ ವಿಶೇಷವಾಗಿ 16 ದ್ರವ್ಯಗಳಿಂದ ಮಹಾಭಿಷೇಕ, ವಿಷ್ಣುಸಹಸ್ರನಾಮ ಹೋಮ, ಶ್ರೀ ರಾಮ ತಾರಕ ಹೋಮ, ಪೂರ್ಣಹುತಿ, ರಾಮರ ಭಜನೆ, ಅಯೋಧ್ಯೆಯ ಕಾರ್ಯಕ್ರಮಗಳನ್ನು ದೊಡ್ಡ ಪರದೆಯ ಮೇಲೆ ನೇರ ಪ್ರಸಾರ ವೀಕ್ಷಣೆ ಮಾಡಲು ವ್ಯವಸ್ಥೆ ಮಾಡಲಾಗಿದೆ. ಸಂಜೆ 6.30ಕ್ಕೆ ಶ್ರೀ ರಾಮಮಂದಿರದ ಭಜನಾ ಮಂಡಳಿಯವರಿಂದ ಭಜನೆ ಕಾರ್ಯಕ್ರಮ, ರಾಮಮಂದಿರದ ಸುತ್ತ ಪ್ರಾಕಾರೋತ್ಸವ, ದೀಪಾರಾಧನೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ.

ಜ.21ರಂದು ಬ್ರಹ್ಮಾಕುಮಾರೀಸ್‌ನಿಂದ 'ಪಾಸಿಟಿವ್ ಪೇರೆಂಟಿಂಗ್' ಕಾರ್ಯಾಗಾರ

ಮೈಸೂರು, ಜ.16–ನಗರದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ, ನಂ.422, 4ನೇ ಮುಖ್ಯರಸ್ತೆ ಸರ್ದಾರ್ ವಲ್ಲಭಬಾಯಿ ಪಟೇಲ್ ನಗರದಲ್ಲಿ ಜ.21ರಂದು ಭಾನುವಾರ ಬೆಳಗ್ಗೆ 11ರಿಂದ 12.30ರವರೆಗೆ ಉಚಿತ 'ಪಾಸಿಟಿವ್ ಪೇರೆಂಟಿಂಗ್' ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ಪ್ರತಿ ಮಗು, ವಿದ್ಯಾರ್ಥಿಯು ನಮ್ಮ ದೇಶದ ಆಸ್ತಿ. ಆದ್ದರಿಂದ ಹೇಗೆ ಅವರನ್ನು 'ಯಂಗ್ ಮೈಂಡ್ಸ್'ನಿಂದ 'ಪವರ್‌ಫುಲ್ ಮೈಂಡ್ಸ್'ಗೆ ಸಬಲಗೊಳಿಸಬೇಕು ಎಂಬ ವಿಷಯದ ಕುರಿತು ಮನಃಶಾಸ್ತ್ರಜ್ಞರಾದ ಬಿ.ಎಲ್.ವೇದಪ್ರದಾರವರು ಮಾತನಾಡಲಿದ್ದಾರೆ. ನೋಂದಣಿ ಕಡ್ಡಾಯವಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ಮೊಬೈಲ್ 9880792079 ಅಥವಾ 9900264937 ಸಂಪರ್ಕಿಸಬಹುದು.



ಮೈಸೂರಿನ ವಿದ್ಯಾವರ್ಧಕ ಕಾನೂನು ಕಾಲೇಜಿನ ಐಕ್ಯೂಎಸಿ ಹಾಗೂ ಎನ್‌ಎಸ್‌ಎಸ್ ಘಟಕದ ವತಿಯಿಂದ "ಸ್ವಾಮಿ ವಿವೇಕಾನಂದರ ಜಯಂತಿ ಹಾಗೂ ರಾಷ್ಟ್ರೀಯ ಯುವ ದಿನ"ವನ್ನು ಕಾಲೇಜಿನ ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣದಲ್ಲಿ ಆಚರಿಸಲಾಯಿತು. ಈ ವೇಳೆ ಚಿಂತಕ ನಿತ್ಯಾನಂದ ವಿವೇಕವಂಶಿ, ಪ್ರೊ. ಇಂದುಮತಿ, ನಿರ್ದೇಶಕ ಪ್ರೊ.ಕೆ.ಬಿ.ವಾಸುದೇವ, ಪ್ರಾಂಶುಪಾಲ ಡಾ.ಪಿ.ದೀಪು ಕಾರ್ಯಕ್ರಮ ಸಂಯೋಜಕ ಡಾ.ಎನ್.ಜೆ.ಕುಮಾರ ಮತ್ತಿತರರು ಉಪಸ್ಥಿತರಿದ್ದರು.




ಮಂಡ್ಯದ ಸಿರಿಗನ್ನಡ ವೇದಿಕೆ ರಾಜ್ಯಘಟಕದ ವತಿಯಿಂದ ಸ್ವಾಮಿ ವಿವೇಕಾನಂದ ಜಯಂತಿ ಪ್ರಯುಕ್ತ ಮೈಸೂರಿನ ನಜರ್‌ಬಾದ್ ಪೀಪಲ್ಸ್‌ಪಾರ್ಕ್ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಅವರಿಗೆ "ವಿವೇಕಶ್ರೀ" ಪ್ರಶಸ್ತಿ ಪ್ರದಾನ ಮಾಡಲಾಯಿತು. ಕಾರ್ಯಕ್ರಮದಲ್ಲಿ ಮಂಡ್ಯದ ಹಿರಿಯ ವಕೀಲ ಎಂ ಗುರುಪ್ರಸಾದ್, ಸಿರಿಗನ್ನಡ ವೇದಿಕೆ ರಾಜ್ಯಘಟಕದ ಅಧ್ಯಕ್ಷ ಪೋತೇರ ಮಹದೇವು, ಎಸ್.ಡಿ.ಎಂ.ಸಿ ಅಧ್ಯಕ್ಷ ಫಯಾಜ್ ಷರೀಫ್, ಉಪಪ್ರಾಂಶುಪಾಲ ಬಿ.ಸೋಮಶೇಖರ್, ಡಾ.ಸುಮಿತ್ರ ಮಳವಳ್ಳಿ, ಯಶೋಧ ರಾಮಕೃಷ್ಣ, ಮಂಜುಳ ರಮೇಶ್, ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ, ಯೋಗಗುರು ಎಂ.ಮಲ್ಲಿಕಾರ್ಜುನಸ್ವಾಮಿ ಉಪಸ್ಥಿತರಿದ್ದರು.

ಅಯೋಧ್ಯೆ: ಧಾರ್ಮಿಕ ವಿಧಿ, ವಿಧಾನಕ್ಕೆ ಚಾಲನೆ

ಅಯೋಧ್ಯ,ಜ.16– ಅಯೋಧ್ಯೆಯ ರಾಮಮಂದಿರದಲ್ಲಿ ಈ ತಿಂಗಳ 22 ರಿಂದ ನಡೆಯಲಿರುವ ರಾಮಲಲ್ಲನ ಪ್ರಾಣಪ್ರತಿಷ್ಠಾಪನೆಂಯ ಧಾರ್ಮಿಕ ವಿಧಿವಿಧಾನಗಳು ಇಂದಿನಿಂದ ಆರಂಭವಾದವು. ಇಂದು ಆರಂಭವಾದ ಪೂಜಾ ವಿಧಿವಿಧಾನಗಳು ಜ. 21ರವರೆಗೂ ನಡೆಯಲಿದ್ದು, 22 ರಂದು ರಾಮಲಲ್ಲನ ಪ್ರಾಣಪ್ರತಿಷ್ಠಾಪನೆ ನಡೆಯಲಿದೆ.

ಇಂದು ಮಧ್ಯಾಹ್ನ ಧಾರ್ಮಿಕ ಪಂಡಿತರ ನೇತೃತ್ವದಲ್ಲಿ ದಶವಿಧಿ ಸ್ನಾನದೊಂದಿಗೆ ಧಾರ್ಮಿಕ ವಿಧಿವಿಧಾನಗಳು ಆರಂಭವಾದವು. ಪ್ರತಿಮೆ ನಿರ್ಮಾಣ ಸ್ಥಾನದಲ್ಲಿ ಕರ್ಮಕುಟಿಗೆ ಪೂಜೆ ಸಲ್ಲಿಸಲಾಯಿತು. ಸಂಜೆ ಪ್ರತಿಮೆ ನಿರ್ಮಾಣ ಸ್ಥಳ ವಿವೇಕ ಸೃಷ್ಟಿಯಲ್ಲಿ ಹವನ ನಡೆಯಿತು. ರಾಮನೂರು ಅಯೋಧ್ಯೆಯಲ್ಲಿ ನಿರಂತರ ಜಪ–ತಪ, ಮಂತ್ರಗಳ ಧ್ವನಿ ಮೊಳಗಲಿವೆ.

ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಕಡೆದಿರುವ ರಾಮಲಲ್ಲನ ವಿಗ್ರಹ 150 ರಿಂದ 200 ಕೆಜಿಗಳಷ್ಟು ಭಾರವಿದ್ದು, ಜ. 18 ರಂದು ದೇವಸ್ಥಾನದ ಗರ್ಭಗುಡಿಯಲ್ಲಿ ಇರಿಸಲಾಗುತ್ತದೆ.



ಅಯೋಧ್ಯೆಯ ರಾಮಮಂದಿರ

ಪ್ರಾಣಪ್ರತಿಷ್ಠಾನ ಕಾರ್ಯಕ್ರಮ ಜ. 22 ರಂದು ಮಧ್ಯಾಹ್ನ 12.20ಕ್ಕೆ ಆರಂಭವಾಗಿ 1 ಗಂಟೆಗೆ ಮುಕ್ತಾಯಗೊಳ್ಳಲಿದ್ದು, ವಾರಣಾಸಿ ಮೂಲದ ಗಣೇಶ್ವರ ಶಾಸ್ತ್ರಿ ದ್ರಾವಿಡ್ ಪ್ರಾಣಪ್ರತಿಷ್ಠಾಪನೆಯ ಮುಹೂರ್ತ ನಿಗದಿ ಮಾಡಿದ್ದು, ಗಣೇಶ್ವರ ಶಾಸ್ತ್ರಿಗಳು ವಾರಣಾಸಿಯವರೇ ಆದ ಲಕ್ಷ್ಮಿಕಾಂತ ದೀಕ್ಷಿತ್ ಅವರ ನೇತೃತ್ವದಲ್ಲಿ ಪ್ರಾಣ ಪ್ರತಿಷ್ಠಾಪನಾ ಪೂಜಾ ವಿಧಿವಿಧಾನಗಳು ನಡೆಯಲಿವೆ.

ರಾಮಮಂದಿರದ ಪೂಜಾವಿಧಿವಿಧಾನವು ಮೊದಲು ಪ್ರಾಯಶ್ಚಿತ್ತ ಪೂಜೆಯೊಂದಿಗೆ ಪ್ರಾರಂಭವಾಗಿದೆ ಮತ್ತು ಇದರೊಂದಿಗೆ ಪ್ರಾಣ ಪ್ರತಿಷ್ಠಾ ಕಾರ್ಯಕ್ರಮವು ಔಪಚಾರಿಕವಾಗಿ ಪ್ರಾರಂಭವಾದಂತಾಗಿದೆ. ಇಂದು ಬೆಳಗ್ಗೆ 9:30ರಿಂದ ಪ್ರಾಯಶ್ಚಿತ್ತ ಪೂಜೆ ಸುಮಾರು 5 ಗಂಟೆಗಳ ಕಾಲ ನಡೆಯಿತು. 121 ಪುರೋಹಿತರು ಈ ಪ್ರಾಯಶ್ಚಿತ್ತ ಪೂಜೆಯನ್ನು ಪೂರ್ಣಗೊಳಿಸಿದರು. ಇದನ್ನು ರಾಮಲಲ್ಲ ಅವರ ಜೀವನ ಸಮರ್ಪಣೆಯ ಪ್ರಾರಂಭವೆಂದು ಪರಿಗಣಿಸಲಾಗುವುದು.

ಪ್ರಾಯಶ್ಚಿತ್ತ ಪೂಜೆ ಎಂದರೇನು: ವಾಸ್ತವವಾಗಿ, ಪ್ರಾಯಶ್ಚಿತ್ತವು ಆರಾಧನೆಯ ವಿಧಾನವಾಗಿದೆ, ಇದರಲ್ಲಿ ಪ್ರಾಯಶ್ಚಿತ್ತವನ್ನು ದೈಹಿಕ, ಆಂತರಿಕ, ಮಾನಸಿಕ ಮತ್ತು ಬಾಹ್ಯ ಮೂರು ವಿಧಾನಗಳಲ್ಲಿ ಮಾಡಲಾಗುತ್ತದೆ. ಧಾರ್ಮಿಕ ತಜ್ಞರು ಮತ್ತು ಪಂಡಿತರ ಪ್ರಕಾರ, ಬಾಹ್ಯ ಪ್ರಾಯಶ್ಚಿತ್ತಕ್ಕಾಗಿ ಸ್ನಾನದ 10 ವಿಧಾನಗಳನ್ನು ನಡೆಸಲಾಗುತ್ತದೆ. ಇದರಲ್ಲಿ ಪಂಚ ದ್ರವ್ಯವಲ್ಲದೆ ಬೂದಿ ಸೇರಿದಂತೆ ಹಲವು ಔಷಧೀಯ ವಸ್ತುಗಳು ಮತ್ತು ಭಸ್ಮದಿಂದ ಸ್ನಾನವನ್ನು ಮಾಡಲಾಗುತ್ತದೆ. ಇಷ್ಟೇ ಅಲ್ಲ, ಇನ್ನೊಂದು ಪ್ರಾಯಶ್ಚಿತ್ತ ದಾನ ಮತ್ತು ನಿರ್ಣಯವೂ ಇದೆ. ಇದರಲ್ಲಿ ಆತಿಥೇಯರು ಗೋದಾನದ ಮೂಲಕ ಪ್ರಾಯಶ್ಚಿತ್ತ ಮಾಡುತ್ತಾರೆ. ಸ್ವಲ್ಪ ಹಣವನ್ನು ದಾನ ಮಾಡುವ ಮೂಲಕ ಪ್ರಾಯಶ್ಚಿತ್ತವನ್ನು ಸಾಧಿಸಲಾಗುತ್ತದೆ, ಇದರಲ್ಲಿ ಚಿನ್ನವನ್ನು ದಾನ ಮಾಡುವುದು ಸಹ ಸೇರಿದೆ

ಪ್ರಾಯಶ್ಚಿತ್ತ ಪೂಜೆ ಎಂದರೆ ವಿಗ್ರಹ ಮತ್ತು ದೇವಾಲಯವನ್ನು ಮಾಡಲು ಬಳಸುವ ಉಳಿ ಮತ್ತು ಸುತ್ತಿಗೆಯನ್ನು ಈ ಪೂಜೆಯಲ್ಲಿ ಪ್ರಾಯಶ್ಚಿತ್ತ ಮಾಡಲಾಗುತ್ತದೆ ಮತ್ತು ಇದರೊಂದಿಗೆ ವಿಗ್ರಹವನ್ನು ಪ್ರತಿಷ್ಠಾಪಿಸಲಾಗುತ್ತದೆ. ಆತಿಥೇಯರು ತಿಳಿದೋ ತಿಳಿಯದೆಯೋ ಮಾಡಿದ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳುವುದು ಪ್ರಾಯಶ್ಚಿತ್ತ ಪೂಜೆಯ ಹಿಂದಿನ ಮೂಲ ಭಾವನೆ. ನಾವು ಅನೇಕ ರೀತಿಯ ತಪ್ಪುಗಳನ್ನು ಮಾಡುತ್ತೇವೆ. ಅದು ನಮಗೆ ತಿಳಿದಿರುವುದಿಲ್ಲ. ಆದ್ದರಿಂದ ಶುದ್ಧೀಕರಣವು ಬಹಳ ಮುಖ್ಯವಾಗಿದೆ. ಈ ಕಾರಣದಿಂದಾಗಿಯೇ ಜೀವನ ಸಮರ್ಪಣೆಗೆ ಮೊದಲು ಪ್ರಾಯಶ್ಚಿತ್ತ ಪೂಜೆಯ ಮಹತ್ವವು ಹೆಚ್ಚಾಗುತ್ತದೆ.

ಜನವರಿ 22 ರಂದು ಮಧ್ಯಾಹ್ನ 1 ಗಂಟೆಗೆ ಪ್ರಾಣ ಪ್ರತಿಷ್ಠಾ ಆಚರಣೆಯೊಂದಿಗೆ ಸ್ಥಾಪನೆಯ ಪ್ರಕ್ರಿಯೆಯು ಪೂರ್ಣಗೊಳ್ಳುತ್ತದೆ. ಇದಾದ ನಂತರವೇ ಹೊಸ ಗರ್ಭಗುಡಿಯಲ್ಲಿ ರಾಮಲಾಲನ ದರ್ಶನ ಮತ್ತು ಪೂಜೆಯು ಆರಂಭಗೊಳ್ಳಲಿದೆ.

ಮಣ್ಣು ಉಳಿಸಿ ಜನ ಜಾಗೃತಿ ಅಭಿಯಾನಕ್ಕೆ ಚಾಲನೆ

ಭೂಮಿಪುತ್ರ ಚಂದನ್‌ಗೌಡರಿಗೆ 'ರೈತ ರತ್ನ' ಪ್ರಶಸ್ತಿ ಪ್ರದಾನ

ಮೈಸೂರು, ಜ.16(ಎಂಟಿವೈ)– ಮೈಸೂರಿನ ಉತ್ತಿಷ್ಠ ಭಾರತ ಪ್ರತಿಷ್ಠಾನದ ವತಿಯಿಂದ ಮಣ್ಣು ಉಳಿಸಿ ಜನಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ಅವರು ಗಿಡಕ್ಕೆ ನೀರೆರೆಯುವ ಮೂಲಕ ಮಣ್ಣು ಉಳಿಸಿ ಅಭಿಯಾನಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮಣ್ಣಿನ ಸವಕಳಿ ಸೇರಿದಂತೆ ವಿವಿಧ ಸಮಸ್ಯೆ ಉಂಟಾಗುತ್ತಿದೆ. ಮಣ್ಣಿನ ರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ದೊಡ್ಡಮಟ್ಟದಲ್ಲಿ ಸಮಸ್ಯೆ ಕಾಡುತ್ತದೆ. ಮಣ್ಣನ್ನು ಸಂರಕ್ಷಿಸದಿದ್ದರೆ ಪರಿಸರ ಸಂರಕ್ಷಣೆ ಮಾಡುವುದು ಅಸಾಧ್ಯ. ನಮ್ಮಲ್ಲಿ ಮಿತಿ ಮೀರಿದ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರ ಬಳಕೆ ಮಾಡುವುದರಿಂದ ಶೇ.62 ರಷ್ಟು ಮಣ್ಣಿನ ಗುಣಮಟ್ಟ ಕಳೆದುಕೊಂಡಿದ್ದೇವೆ. ಇನ್ನಾದರೂ ಸರ್ಕಾರ ಮಣ್ಣಿನ ಸಂರಕ್ಷಣೆ ಕಾಯ್ದೆ ಜಾರಿಗೊಳಿಸಬೇಕು. ಅಲ್ಲದೆ, ಮಣ್ಣಿನ ರಕ್ಷಣೆಗೆ ಕಾರ್ಯಕ್ರಮ ರೂಪಿಸಬೇಕು ಎಂದು ಒತ್ತಾಯಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಉತ್ತಿಷ್ಠ ಭಾರತ ಪ್ರತಿಷ್ಠಾನದ ವತಿಯಿಂದ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ಅವರಿಗೆ 'ರೈತ ರತ್ನ' ಪ್ರಶಸ್ತಿ ನೀಡಿ, ಗೌರವಿಸಲಾಯಿತು.

ಉತ್ತಿಷ್ಠ ಭಾರತ ಪ್ರತಿಷ್ಠಾನದ ವತಿಯಿಂದ ಪ್ರಕಟಿಸಿರುವ ಕಾರ್ಟೂನ್ ಚಿತ್ರವುಳ್ಳ ಕ್ಯಾಲೆಂಡರ್ ಅನ್ನು ಸಮಾಜ ಸೇವಕ ರಘುರಾಮ್ ವಾಜಪೇಯಿ ಬಿಡುಗಡೆ ಮಾಡಿ ಮಾತನಾಡಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸಿರುವ ವ್ಯಂಗ್ಯ ಚಿತ್ರಕಾರ ಕಾರ್ಟೂನ್ ಬಾಬು ಅವರ ಕೈಚಳಕದ ಕಾರ್ಟೂನ್ ಚಿತ್ರದೊಂದಿಗೆ ಮೂಡಿಬಂದಿರುವ ಕ್ಯಾಲೆಂಡರ್ ಸೊಗಸಾಗಿದೆ. ಇತ್ತೀಚಿನ ವರ್ಷದಲ್ಲಿ ಭಾರತದಲ್ಲಿ ಆಗಿರುವ ಪ್ರಗತಿ ಕುರಿತಂತೆ ಕಾರ್ಟೂನ್ ಚಿತ್ರಗಳು ಸಂದೇಶ ಸಾರುತ್ತವೆ. ಚಂದ್ರಯಾನ, ಶ್ರೀರಾಮ ಮಂದಿರ ಸೇರಿದಂತೆ ದೇಶದ ಸಾಧನೆಯ ಚಿತ್ರವುಳ್ಳ ಕ್ಯಾಲೆಂಡರ್ ಉತ್ತಮವಾಗಿ ಮೂಡಿಬಂದಿದೆ ಎಂದರು.

ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ಪ್ರಸ್ತುತ ಸಂದರ್ಭದಲ್ಲಿ ಮಣ್ಣು ಉಳಿಸಿ ಅಭಿಯಾನ ನಡೆಸುತ್ತಿರುವುದು ಅರ್ಥಪೂರ್ಣವಾಗಿದೆ. ಮಣ್ಣು ಉಳಿಸುವ ಅಭಿಯಾನ ಕೈಗೊಳ್ಳುವ ಅನಿವಾರ್ಯತೆ ಇತ್ತು ಇತ್ತೀಚಿನ ವರ್ಷಗಳಲ್ಲಿ ಅನೇಕ ಕಾರಣದಿಂದ ಮಣ್ಣಿನ ಮೇಲೆ ದೌರ್ಜನ್ಯ ನಡೆಯುತ್ತಿದೆ. ಇದರ ಜೊತೆ ರಸಾಯನಿಕ ವಸ್ತುಗಳ ಬಳಕೆಯಿಂದ ಫಲವತ್ತತೆ ಕಳೆದುಕೊಳ್ಳುತ್ತಿದೆ. ಇಂತಹ ಸಂದರ್ಭದಲ್ಲಿ ಜನಜಾಗೃತಿ ಮೂಡಿಸಲು ಅಭಿಯಾನ ನಡೆಸುತ್ತಿರುವುದು ಶ್ಲಾಘನೀಯ ಎಂದು ಅಭಿಪ್ರಾಯಪಟ್ಟರು.

ರೈತ ರತ್ನ ಪ್ರಶಸ್ತಿ: ಇದೇ ವೇಳೆ ಈಗಾಗಲೇ ಮಣ್ಣು ಉಳಿಸಿ ಅಭಿಯಾನ ನಡೆಸುತ್ತಿರುವ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ಅವರಿಗೆ ಉತ್ತಿಷ್ಠ ಭಾರತ ಪ್ರತಿಷ್ಠಾನದ ವತಿಯಿಂದ 'ರೈತ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ದತ್ತಕ್ರಿಯಾ ಯೋಗ ಶಿಕ್ಷಕ ಜಿ.ಮೋಹನ್, ಪ್ರತಿಷ್ಠಾನದ ಕಾರ್ಯದರ್ಶಿ ಎಂ.ವಿ.ನಾಗೇಂದ್ರ ಬಾಬು, ಕಾರ್ಯಕಾರಿ ಸಮಿತಿ ಸದಸ್ಯರಾದ ಜಯಸಿಂಹ ಶ್ರೀಧರ್, ಎನ್.ಅನಂತ್ ಉಪಸ್ಥಿತರಿದ್ದರು.

ಪಿಎಸ್‌ಐ ಪರೀಕ್ಷೆಗೆ ಜೀನ್ಸ್ ಪ್ಯಾಂಟ್, ಶೂ ನಿಷೇಧ

ಬೆಂಗಳೂರು: ಪೊಲೀಸ್ ಇನ್‌ಸ್ಪೆಕ್ಟರ್ (ಪಿಎಸ್‌ಐ) 545 ಹುದ್ದೆಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಇದೇ 23ರಂದು ಮರು ಲಿಖಿತ ಪರೀಕ್ಷೆ ನಡೆಸಲಿದ್ದು, ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ವಸ್ತ್ರ ಸಂಹಿತೆ ಕಡ್ಡಾಯಗೊಳಿಸಿದೆ.

ಪುರುಷ ಅಭ್ಯರ್ಥಿಗಳು ಪೂರ್ಣ ತೋಳಿನ ಶರ್ಟ್ ಧರಿಸಲು ಅವಕಾಶ ಇಲ್ಲ. ಅದರ ಬದಲು ಅರ್ಧ ತೋಳಿನ ಶರ್ಟ್ ಧರಿಸಬೇಕು. ಸಾಧ್ಯವಾದಷ್ಟು ಕಾಲರ್‌ರಹಿತ ಶರ್ಟ್ ಧರಿಸಬೇಕು. ಜೇಬು ಇಲ್ಲದಿರುವ ಅಥವಾ ಕಡಿಮೆ ಜೇಬುಗಳಿರುವ ಪ್ಯಾಂಟ್ ಧರಿಸಬೇಕು. ಹಾಗೆಂದು, ಕುರ್ತಾ, ಪೈಜಾಮ, ಜೀನ್ಸ್ ಪ್ಯಾಂಟ್ ಧರಿಸಲು ಅನುಮತಿ ಇಲ್ಲ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕರು ತಿಳಿಸಿದ್ದಾರೆ.

ಧರಿಸುವ ಬಟ್ಟೆಗಳು ಹಗುರವಾಗಿರಬೇಕು. ಅಂದರೆ, ಜಿಪ್ ಪಾಕೆಟ್‌ಗಳು, ದೊಡ್ಡ

ಎಂತಹ ಕಾಲ ಬಂತಪ್ಪಾ!



ಬಟನ್‌ಗಳು, ವಿಸ್ತಾರವಾದ ಕಸೂತಿ ಇರುವ ಬಟ್ಟಗಳು ಬಟ್ಟೆಯಲ್ಲಿ ಇರಬಾರದು. ಪರೀಕ್ಷೆಯ ಹಾಲ್ ಒಳಗೆ ಶೂಗಳನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಸ್ಯಾಂಡಲ್ ಅಥವಾ ತೆಳುವಾದ ಅಡಿಭಾಗ ಇರುವ ಚಪ್ಪಲಿಗಳನ್ನು ಧರಿಸುವುದು ಸೂಕ್ತ. ಕುತ್ತಿಗೆಯ ಸುತ್ತ ಯಾವುದೇ ಲೋಹದ ಆಭರಣ ಧರಿಸುವುದು ಅಥವಾ ಕಿವಿಯೋಲೆ, ಉಂಗುರ, ಕಡಗಗಳನ್ನು ಧರಿಸುವುದನ್ನೂ ನಿಷೇಧಿಸಲಾಗಿದೆ ಎಂದಿದ್ದಾರೆ.

ಮಹಿಳಾ ಅಭ್ಯರ್ಥಿಗಳು ವಿಸ್ತಾರವಾದ ಕಸೂತಿ, ಹೂಗಳು, ಬ್ರೂಚ್‌ಗಳು ಅಥವಾ ಬಟನ್‌ಗಳನ್ನು ಹೊಂದಿರುವ ಬಟ್ಟೆಗಳನ್ನು ಧರಿಸುವುದನ್ನು ನಿಷೇಧಿಸಲಾಗಿದೆ. ಪೂರ್ಣ ತೋಳಿನ ಬಟ್ಟೆ, ಜೀನ್ಸ್ ಪ್ಯಾಂಟ್ ಧರಿಸಬಾರದು. ಎತ್ತರವಾದ ಹಿಮ್ಮಡಿಯ ಮತ್ತು ದಪ್ಪವಾದ ಅಡಿಭಾಗ ಹೊಂದಿರುವ ಶೂ ಅಥವಾ ಚಪ್ಪಲಿ ಧರಿಸಬಾರದು. ತೆಳುವಾದ ಅಡಿಭಾಗ ಹೊಂದಿರುವ ಚಪ್ಪಲಿ ಧರಿಸುವುದು ಕಡ್ಡಾಯ. ಮಂಗಳಸೂತ್ರ ಮತ್ತು ಕಾಲುಂಗುರ ಹೊರತುಪಡಿಸಿ ಬೇರೆ ಯಾವುದೇ ರೀತಿಯ ಲೋಹದ ಆಭರಣಗಳನ್ನು ಧರಿಸಬಾರದು ಎಂದೂ ಅವರು ಹೇಳಿದ್ದಾರೆ.

ಎಲೆಕ್ಟ್ರಾನಿಕ್ ವಸ್ತುಗಳು, ಮೊಬೈಲ್ ಫೋನ್, ಪೆನ್ ಡ್ರೈವ್, ಇಯರ್ ಫೋನ್, ಮೈಕ್ರೋ

ಮಹಿಳಾ ಅಭ್ಯರ್ಥಿಗಳು ಕಸೂತಿ, ಹೂಗಳಿರುವ ಬಟ್ಟೆ ಧರಿಸುವಂತಿಲ್ಲ

ಫೋನ್, ಬ್ಲೂಟೂತ್ ಸಾಧನ, ಕೈ ಗಡಿಯಾರವನ್ನು ಪರೀಕ್ಷಾ ಕೊಠಡಿಯ ಒಳಗೆ ತೆಗೆದುಕೊಂಡು ಹೋಗುವಂತಿಲ್ಲ ಕುಡಿಯುವ ನೀರಿನ ಬಾಟಲಿ, ತಿಂಡಿ, ತಿನಿಸುಗಳನ್ನು ತರುವುದು, ತಿನ್ನುವುದನ್ನು ನಿಷೇಧಿಸಲಾಗಿದೆ. ತಲೆಯ ಮೇಲೆ ಟೋಪಿ ಧರಿಸಬಾರದು, ಯಾವುದೇ ರೀತಿಯ ಮಾಸ್ಕ್ ಧರಿಸುವಂತಿಲ್ಲ ಎಂದು ಕಟ್ಟುನಿಟ್ಟಿನ ಸೂಚನೆ ನೀಡಿರುವ ಅವರು, ನಿಯಮ ಪಾಲಿಸದ ಅಭ್ಯರ್ಥಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಜ್ಞಾನವಾಪಿ ಪ್ರಕರಣ

ಶಿವಲಿಂಗ ಆಕೃತಿ ಸ್ಥಳದ ಸಂಪೂರ್ಣ ಸ್ವಚ್ಛತೆಗೆ 'ಸುಪ್ರೀಂ' ಆದೇಶ

ನವದೆಹಲಿ, ಜ.16– ಜ್ಞಾನವಾಪಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಿವಾದಿತ ಮಸೀದಿ ಆವರಣದಲ್ಲಿರುವ ಶಿವಲಿಂಗ ಆಕೃತಿ ಸ್ಥಳದ ಸಂಪೂರ್ಣ ಸ್ವಚ್ಛತೆಗೆ 'ಸುಪ್ರೀಂಕೋರ್ಟ್' ಆದೇಶ ನೀಡಿದೆ.

ವಾರಣಾಸಿಯ ಜ್ಞಾನವಾಪಿ (Gyanvapi mosque) 'ವಜುಖಾನಾ' (Wazu khana) ಪ್ರಕರಣದ ವಿಚಾರಣೆ ವೇಳೆ ಸುಪ್ರೀಂಕೋರ್ಟ್ (Supreme Court) ಮಂಗಳವಾರ ಮಹತ್ವದ ತೀರ್ಪು ನೀಡಿದ್ದು, ಮಸೀದಿ ಸಂಕೀರ್ಣದ ವಜುಖಾನಾದ ಸಂಪೂರ್ಣ ಪ್ರದೇಶವನ್ನು ಸ್ವಚ್ಛಗೊಳಿಸಲು ಸುಪ್ರೀಂಕೋರ್ಟ್ ಗ್ರೀನ್‌ಸಿಗ್ನಲ್ ಕೊಟ್ಟಿದೆ.

ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ಜೆ.ಬಿ. ಪರ್ದಿವಾಲಾ ಹಾಗೂ ನ್ಯಾ. ಮನೋಜ್ ಮಿಶ್ರಾ ಅವರಿದ್ದ ಪೀಠವು ಅರ್ಜಿಯ ವಿಚಾರಣೆ ನಡೆಸಿತು. ವಾರಣಾಸಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರ ಮೇಲುಸ್ತುವಾರಿಯಲ್ಲಿ ನೀರಿನ ತೊಟ್ಟಿ ಶುಚಿಗೊಳಿಸಲು ಆದೇಶಿಸಿತು. ಈ ಕುಬ್ಬದಲ್ಲಿ ಶಿವಲಿಂಗವಿದೆ ಎಂದು ಹಿಂದೂಗಳ ಪರ ವಕೀಲರು ವಾದಿಸಿದ್ದರು. ಇದೇ ವಿಚಾರವಾಗಿ ಜ್ಞಾನವಾಪಿಯ ಮುಚ್ಚಿದ ಪ್ರದೇಶವನ್ನು ತೆರೆಯಬೇಕು ಮತ್ತು ತಕ್ಷಣ ಸ್ವಚ್ಛಗೊಳಿಸಬೇಕು ಎಂದು ಹಿಂದೂಗಳು ಮನವಿ ಸಲ್ಲಿಸಿದ್ದರು.

ಇದೀಗ ಹಿಂದೂಗಳ ಬೇಡಿಕೆಯನ್ನು ಪುರಸ್ಕರಿಸಿರುವ ಸುಪ್ರೀಂಕೋರ್ಟ್ ಆ ಪ್ರದೇಶ (ವಜುಖಾನಾ)ದ ಸ್ವಚ್ಛತೆಗೆ ಆದೇಶ ನೀಡಿದೆ. ಜಿಲ್ಲಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಸ್ವಚ್ಛತೆಗೆ ಕೋರ್ಟ್ ಅನುಮತಿ ನೀಡಿದೆ.

ಸುಪ್ರೀಂಕೋರ್ಟ್ ಆದೇಶದ ಮೇರೆಗೆ 2022 ರಲ್ಲಿ 'ವಜುಖಾನಾ' ಪ್ರದೇಶವನ್ನು ಸೀಲ್ ಮಾಡಲಾಗಿತ್ತು. ಇಲ್ಲಿ 'ಶಿವಲಿಂಗ' ಆಕಾರದ ಕಲ್ಲು ಪತ್ತೆಯಾಗಿದ್ದು, ನಂತರ ಅದನ್ನು ಮುಚ್ಚಲು ಆದೇಶ ನೀಡಲಾಗಿತ್ತು 16 ಮೇ 2022 ರಂದು ಕಾಶಿ ವಿಶ್ವನಾಥ ದೇವಸ್ಥಾನದ ಪಕ್ಕದಲ್ಲಿರುವ ಮಸೀದಿಯ ಸಮೀಕ್ಷೆಯ ಸಮಯದಲ್ಲಿ ಕೊಳವೊಂದು ಪತ್ತೆಯಾಗಿತ್ತು. ಇದನ್ನು ಹಿಂದೂಗಳು 'ಶಿವಲಿಂಗ' ಎಂದು ವಾದಿಸಿದರೆ, ಮುಸ್ಲಿಮರು 'ಕಾರಂಜಿ' ಎಂದು ಪ್ರತಿಪಾದಿಸಿದ್ದರು.

ಬಿಜೆಪಿ ಮೈಸೂರು ನಗರಾಧ್ಯಕ್ಷರಾಗಿ ಎಲ್.ನಾಗೇಂದ್ರ; ಜಿಲ್ಲಾಧ್ಯಕ್ಷರಾಗಿ ಎಲ್.ಆರ್.ಮಹದೇವಸ್ವಾಮಿ ಪದಗ್ರಹಣ





ಬಿಜೆಪಿ ಮೈಸೂರು ನಗರ ಘಟಕದ ಅಧ್ಯಕ್ಷರಾಗಿ ಮಾಜಿ ಶಾಸಕ ಎಲ್.ನಾಗೇಂದ್ರ ಹಾಗೂ ಗ್ರಾಮಾಂತರ ಘಟಕದ ಅಧ್ಯಕ್ಷರಾಗಿ ಎಲ್.ಆರ್.ಮಹದೇವಸ್ವಾಮಿ ಸೋಮವಾರ ಅಧಿಕಾರ ಸ್ವೀಕರಿಸಿದರು.

ಮೈಸೂರು, ಜ.16(ಎಸ್‌ಪಿಎನ್)– ಬಿಜೆಪಿ ಮೈಸೂರು ನಗರ ಘಟಕದ ಅಧ್ಯಕ್ಷರಾಗಿ ಮಾಜಿ ಶಾಸಕ ಎಲ್.ನಾಗೇಂದ್ರ ಹಾಗೂ ಗ್ರಾಮಾಂತರ ಘಟಕದ ಅಧ್ಯಕ್ಷರಾಗಿ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಸೋಮವಾರ ಅಧಿಕಾರ ಸ್ವೀಕರಿಸಿದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಭಾನುವಾರದಂದು 39 ಸಂಘಟನಾತ್ಮಕ ಜಿಲ್ಲಾ ಅಧ್ಯಕ್ಷರ ನೇಮಕಾತಿ ಆದೇಶ ಹೊರಡಿಸಿದ್ದರು. ಈ ಹಿನ್ನೆಲೆಯಲ್ಲಿ ಮೈಸೂರು ನಗರದ ಚಾಮರಾಜಪುರಂನಲ್ಲಿರುವ ಬಿಜೆಪಿ ನಗರ ಕಚೇರಿಯಲ್ಲಿ ಸೋಮವಾರ ಬೆಳಗ್ಗೆ ಏರ್ಪಡಿಸಿದ್ದ ಪದಗ್ರಹಣ ಕಾರ್ಯಕ್ರಮದಲ್ಲಿ ನಿಕಟಪೂರ್ವ ಅಧ್ಯಕ್ಷರೂ ಆದ ಶಾಸಕ ಟಿ.ಎಸ್.ಶ್ರೀವತ್ಸ, ಎಲ್.ನಾಗೇಂದ್ರ ಅವರಿಗೆ ಬಿಜೆಪಿ ಬಾವುಟ ನೀಡುವ ಮೂಲಕ ಅಧಿಕಾರ ಹಸ್ತಾಂತರಿಸಿದರೆ, ಸಂಜೆ ನಡೆದ ಪದಗ್ರಹಣ ಕಾರ್ಯಕ್ರಮದಲ್ಲಿ ನಿಕಟಪೂರ್ವ ಜಿಲ್ಲಾಧ್ಯಕ್ಷ ಮಂಗಳಾ ಸೋಮಶೇಖರ್ ಅವರು, ಎಲ್.ಆರ್. ಮಹದೇವಸ್ವಾಮಿ ಅವರಿಗೆ ಬಿಜೆಪಿ ಬಾವುಟ ನೀಡುವ ಮೂಲಕ ಅಧಿಕಾರ ಹಸ್ತಾಂತರಿಸಿದರು.

ಬಳಿಕ ಮಾತನಾಡಿದ ಎಲ್.ನಾಗೇಂದ್ರ, ಪಕ್ಷದ ಎಲ್ಲಾ ಮುಖಂಡರು, ಕಾರ್ಯಕರ್ತರು, ಬೂತ್ ಅಧ್ಯಕ್ಷರೆಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷ ಮುನ್ನಡೆಸಿಕೊಂಡು ಹೋಗುವುದಾಗಿ ಹೇಳಿದರು. ಮೈಸೂರು ನಗರದಲ್ಲಿ ಪಕ್ಷವನ್ನು ತಳಮಟ್ಟದಿಂದ ಸಂಘಟಿಸಲು ಎಲ್ಲಾ ಮುಖಂಡರ ವಿಶ್ವಾಸ ಗಳಿಸಿ, ಕೆಲಸ ಮಾಡುತ್ತೇನೆ. ಪಕ್ಷದ ಸಂಘಟನೆಗಾಗಿ ಹಗಲಿರುಳು ದುಡಿಯುವುದರ ಜತೆಗೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮತ್ತೊಮ್ಮೆ ಮೋದಿ ಅವರನ್ನು ಪ್ರಧಾನಿಯಾಗಿಸಲು ಪಕ್ಷದ ಅಭ್ಯರ್ಥಿ ಗೆಲುವಿಗೆ ಶ್ರಮಿಸಲಾಗುವುದು ಎಂದು ಭರವಸೆ ನೀಡಿದರು.

ಮುಂದಿನ ದಿನಗಳಲ್ಲಿ ಮೈಸೂರು ನಗರಪಾಲಿಕೆ ಚುನಾವಣೆ ಎದುರಾಗಲಿದ್ದು, ಈ ಬಾರಿ ಮೂರೂ ವಿಧಾನಸಭಾ ಕ್ಷೇತ್ರಗಳಲ್ಲೂ ಹೆಚ್ಚಿನ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಪಾಲಿಕೆಯಲ್ಲಿ ಸ್ವತಂತ್ರವಾಗಿ ಬಿಜೆಪಿ ಅಧಿಕಾರಕ್ಕೆ ತರುವುದು ನಮ್ಮ ಸಂಕಲ್ಪವಾಗಿದೆ ಎಂದರು.

ಎಲ್.ನಾಗೇಂದ್ರ ಅವರ ಸಂಘಟನಾತ್ಮಕ ಹೆಜ್ಜೆ ಗುರುತು: ನೂತನ ನಗರಾಧ್ಯಕ್ಷ ಎಲ್.ನಾಗೇಂದ್ರ ಅವರಿಗೆ ಲೋಕಸಭಾ ಚುನಾವಣೆ ಹೊತ್ತಿನಲ್ಲಿ ಹೊಸ ಜವಾಬ್ದಾರಿ ವಹಿಸಿಕೊಂಡಿದ್ದು, ಈ ಹಿಂದೆ ನಗರ ಯುವ ಮೋರ್ಚಾ ಉಪಾಧ್ಯಕ್ಷರಾಗಿ, ಕೆ.ಆರ್.ಕ್ಷೇತ್ರದ ಪ್ರಧಾನ ಕಾರ್ಯದರ್ಶಿಯಾಗಿ, ನಗರ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ, ಬಳಿಕ ಸ್ಲಂ ಮೋರ್ಚಾ ರಾಜ್ಯ ಕಾರ್ಯದರ್ಶಿ, ಸ್ಲಂ ಮೋರ್ಚಾ ರಾಜ್ಯಾಧ್ಯಕ್ಷ ಹಾಗೂ ಮೈಸೂರು ವಿಭಾಗ ಪ್ರಭಾರಿಯಾಗಿ ಸಮರ್ಥ ರೀತಿ ಸೇವೆ ಸಲ್ಲಿಸಿದ್ದರು. 3 ಬಾರಿ ಪಾಲಿಕೆ ಸದಸ್ಯರಾಗಿ, ಮುಡಾ ಅಧ್ಯಕ್ಷರಾಗಿಯೂ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ. 2018ರಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದಿಂದ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದರು. 2023ರಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಅಲ್ಪಮತದ ಅಂತರದಿಂದ ಪರಾಭವಗೊಂಡಿದ್ದರು.

ಎಲ್‌ಆರ್‌ಎಂ ಸಂಘಟನೆಯ ಹಾದಿ: ನೂತನ ಜಿಲ್ಲಾಧ್ಯಕ್ಷ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ಅಧಿಕಾರ ಸ್ವೀಕರಿಸಿದ ಬಳಿಕ ಪಕ್ಷ ಸಂಘಟನೆಯ ಭರವಸೆ ಮೂಡಿಸಿದ್ದಾರೆ. ಅಲ್ಲದೆ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಎಲ್‌ಆರ್‌ಎಂ, ಈ ಹಿಂದೆ ಮೈಸೂರು ತಾಪಂ ಸದಸ್ಯರಾಗಿ, ಬಳಿಕ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಕಳೆದ ಬಿಜೆಪಿ ಸರ್ಕಾರದಲ್ಲಿ ಕರ್ನಾಟಕ ಮೃಗಾಲಯದ ಪ್ರಾಧಿಕಾರದ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು. ಈ ಹಿಂದೆ ವರುಣ ವಿಧಾನಸಭಾ ಕ್ಷೇತ್ರದ ಯುವ ಮೋರ್ಚಾದ ಅಧ್ಯಕ್ಷರಾಗಿ, ಗ್ರಾಮಾಂತರ ಘಟಕದ ಯುವ ಮೋರ್ಚಾದ ಅಧ್ಯಕ್ಷರಾಗಿಯೂ ಪಕ್ಷ ಕಟ್ಟುವ ಕೆಲಸದಲ್ಲಿ ತೊಡಗಿಸಿಕೊಂಡಿದ್ದರು.

ಈ ವೇಳೆ ಸಂಸದ ಪ್ರತಾಪ ಸಿಂಹ, ಮಾಜಿ ಸಚಿವರಾದ ಎಸ್.ಎ.ರಾಮದಾಸ್, ಸಿ.ಎಚ್. ವಿಜಯಶಂಕರ್, ಮಾಜಿ ಮೇಯರ್ ಶಿವಕುಮಾರ್, ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಮಾಜಿ ಸಚಿವ ಕೋಟೆ ಎಂ.ಶಿವಣ್ಣ, ಮುಖಂಡರಾದ ಮೈ.ವಿ.ರವಿಶಂಕರ್, ಸಿದ್ದರಾಜು, ಡಾ.ಅನಿಲ್ ಥಾಮಸ್, ಗಿರಿಧರ್, ವಾಣೀಶ್, ಫಣೀಶ್, ಎಂ.ಜೆ.ಕಿರಣ್‌ಗೌಡ, ವಕೀಲ ವಸಂತಕುಮಾರ್ ಇನ್ನಿತರರಿದ್ದರು.

ದೊಡ್ಡಹೆಜ್ಜೂರಿನಲ್ಲಿ ವೈಭವದ ರಥೋತ್ಸವ

ಸಾವಿರಾರು ಮಂದಿ ಭಾಗಿ, ರಥ ಎಳೆದು ರಥೋತ್ಸವಕ್ಕೆ ಚಾಲನೆ ನೀಡಿದ ಶಾಸಕ ಹರೀಶ್‌ಗೌಡ



ದೊಡ್ಡಹೆಜ್ಜೂರಿನಲ್ಲಿ ನಡೆದ ವೀರಾಂಜನೇಯ ರಥೋತ್ಸವದಲ್ಲಿ ಭಾಗಿಯಾಗಿರುವ ಜನಸಾಗರ

ಹನಗೋಡು, ಜ.16– ಹುಣಸೂರು ತಾಲೂಕು ಹನಗೋಡು ಹೋಬಳಿಯ ಇತಿಹಾಸ ಪ್ರಸಿದ್ಧ ದೊಡ್ಡ ಹೆಜ್ಜೂರಿನ ಶ್ರೀ ಆಂಜನೇಯ ಸ್ವಾಮಿಯ ರಥೋತ್ಸವವು ಮಂಗಳವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು. ಹುಣಸೂರು ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಡಿ.ಹರಿಶ್‌ಗೌಡರು ಸಾವಿರಾರು ಭಕ್ತರ ಸಮ್ಮುಖದಲ್ಲಿ ರಥ ಎಳೆಯುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು.

ರಥೋತ್ಸವಕ್ಕೂ ಮುನ್ನ ದೇವಸ್ಥಾನದಿಂದ ಶ್ರೀ ಆಂಜನೇಯ ಉತ್ಸವ ಮೂರ್ತಿಯನ್ನು ಮಂಗಳವಾದ್ಯ ದೊಂದಿಗೆ ಹೊತ್ತು ತಂದು ದೇವಾಲಯದ ಸುತ್ತ ಒಂದು ಸುತ್ತು ಪ್ರದಕ್ಷಿಣೆ ಹಾಕಿ ನಂತರ ಮಧ್ಯಾಹ್ನ 1.30 ಗಂಟೆಗೆ ರಥಕ್ಕೆ ಶ್ರೀ ವೀರಾಂಜನೇಯ ಉತ್ಸವ ಮೂರ್ತಿ ಕೂರಿಸಲಾಯಿತು. ನಂತರ ಸಾವಿರಾರು ಭಕ್ತರು ಸ್ವಾಮಿಗೆ ಜೈಕಾರ ಹಾಕುತ್ತಾ ರಥವನ್ನು ದೇವಾಲಯದ ಸುತ್ತ ಒಂದು ಸುತ್ತು ಎಳೆದು ತಂದು ಸ್ವಸ್ಥಾನಕ್ಕೆ ನಿಲ್ಲಿಸಿದರು. ರಥೋತ್ಸವದ ವೇಳೆ ನವದಂಪತಿಗಳು ಸೇರಿದಂತೆ ಎಲ್ಲಾ ಭಕ್ತರು ಹಣ್ಣು ಜವನ ಎಸೆದು ಸ್ವಾಮಿ ಕೃಪೆಗೆ ಪಾತ್ರರಾದರು.

ಭಾರಿ ಜನಸ್ತೋಮ: ಕಳೆದ ನಾಲ್ಕು ವರ್ಷ ಗಳಿಂದ ದೇವಾಲಯ ಪುನರ್ ನಿರ್ಮಾಣದಿಂದ ಹಾಗೂ ಕೊರೊನಾದಿಂದ ತಾಲೂಕು ಆಡಳಿತ ಸರಳವಾಗಿ ಪೂಜಾ ಕೈಂಕರ್ಯಕ್ಕೆ ಸೀಮಿತಗೊಳಿಸಿ ಜಾತ್ರೆಗೆ ನಿರ್ಬಂದಗೊಳಿಸಿತ್ತು. ಆದರೆ ಈ ಬಾರಿ ಯಾವುದೇ ನಿರ್ಬಂಧವಿಲ್ಲದ ಕಾರಣ ಜಾತ್ರೆಗೆ ಬೆಳಗ್ಗೆಯಿಂದಲೇ ಜನರು ಸಾರಿಗೆಬಸ್, ಕಾರು, ಆಟೋ, ಟ್ರ್ಯಾಕ್ಟರ್, ಸ್ಕೂಟರ್ ಸೇರಿದಂತೆ ವಿವಿಧ ವಾಹನಗಳಲ್ಲಿ ಆಗಮಿಸಿದ ರಥೋತ್ಸವದ ವೇಳೆಗೆ ಇಡೀ ಜಾತ್ರಾಮಾಳ ಭರ್ತಿಯಾಗಿತ್ತು. ಮುಂಜಾನೆ ಯಿಂದಲೇ ದೇವಾಲಯದ ಅರ್ಚಕರು ಸ್ವಾಮಿಗೆ ವಿಶೇಷ ಪೂಜಾ ಕೈಂಕರ್ಯ, ಅಭಿಷೇಕ ನಡೆಸಿದರು. ನಂತರ ದೇವಾಲಯದ ಸುತ್ತಾ ಉತ್ಸವ ಮೂರ್ತಿ ಹೊತ್ತು ಪ್ರದಕ್ಷಿಣೆ ಹಾಕಿದರು. ದೇವರ ದರ್ಶನ ಪಡೆಯಲು ಸಾವಿರಾರು ಮಂದಿ ಸರತಿ ಸಾಲಿನಲ್ಲಿ ನಿಂತು ಪೂಜೆ ಸಲ್ಲಿಸಿದರು.

ಭಕ್ತರು ಹರಕೆ ಸಲ್ಲಿಸಿದರು : ದೇವರಿಗೆ ಹರಕೆ ಹೊತ್ತವರು ಹಿಂದಿನ ದಿನವೇ ಜಾತ್ರಾ ಮಾಳದಲ್ಲಿ ಬೀಡು ಬಿಟ್ಟಿದ್ದರು. ಲಕ್ಷ್ಮಣತೀರ್ಥ ನದಿ ದಂಡೆಯಲ್ಲಿ ತಲೆ ಮುಡಿಕೊಟ್ಟು ಬಂದವರು, ಬಾಯಿಬೀಗ ಹಾಕಿಕೊಂಡು ನಡೆದು ಬಂದು ದೇವಾಲಯ ಸುತ್ತ ಉರುಳು ಸೇವೆ ಸಲ್ಲಿಸಿದರು. ನದಿ ದಂಡೆಯಲ್ಲೇ ಅಡುಗೆ ತಯಾರಿಸಿ ಊಟ ಮಾಡಿದರು. ಕೆಲ ಭಕ್ತರು ಮನೆಯಿಂದ ತಂದಿದ್ದ ತಿಂಡಿ–ಊಟವನ್ನು ನದಿ ದಂಡೆ, ಕೆರೆಯಂಗಳ ಹಾಗೂ ಗದ್ದೆ ಬಯಲಲ್ಲಿ ಪರಸ್ಪರ ಹಂಚಿಕೊಂಡು ಊಟ ಮಾಡಿದರು.

ಗ್ರಾ.ಪಂ. ಅಧ್ಯಕ್ಷೆ ಅಂಬಿಕ, ಉಪಾಧ್ಯಕ್ಷ ವೆಂಕಟೇಶ್, ಎ.ಪಿ.ಎಂ.ಸಿ ಮಾಜಿ ಅಧ್ಯಕ್ಷರಾದ ಕಿರಂಗೂರು ಬಸವರಾಜ್, ಮುದಗನೂರು ಸುಭಾಷ್, ಟಿಎಪಿಎಂಎಸ್ ಮಾಜಿ ಅಧ್ಯಕ್ಷ ಕೆಂಪೇಗೌಡ, ಜೆಡಿಎಸ್ ಮುಖಂಡ ರಾದ ರಂಜಿತ ಚಿಕ್ಕಮಾದು, ತಾ.ಪಂ.ಮಾಜಿ ಸದಸ್ಯರಾದ ಎಚ್.ಆರ್.ರಮೇಶ್, ಕೆ.ಗಣಪತಿ, ಮಾಜಿ ಅಧ್ಯಕ್ಷ ದಾ.ರಾ.ಮಹೇಶ್, ಶಿವಶಂಕರ್, ದೇವರಾಜ್, ದೇವಾಲಯ ಸಮಿತಿ ಅಧ್ಯಕ್ಷ ಶೇಖರೇ ಗೌಡ, ಕಾರ್ಯದರ್ಶಿ ನಟರಾಜ್ ಸೇರಿದಂತೆ ಇತರೆ ಗಣ್ಯರು ಹಾಜರಿದ್ದರು. ರಥೋತ್ಸವದಲ್ಲಿ 10 ಸಾವಿರ ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ಜಾತ್ರೆಯಲ್ಲಿ ಕಂಡು ಬಂದ ವಿಶೇಷತೆಗಳು : ಜಾತ್ರೆ ಅಂಗವಾಗಿ ಬಗೆ–ಬಗೆಯ ಹತ್ತಾರು ಸಿಹಿ ತಿಂಡಿ ಅಂಗಡಿಗಳು ತೆರೆದಿದ್ದವು. ಮಹಿಳೆಯರು ಶೃಂಗಾರ ಸಾಧನಗಳ ಮಾರಾಟ ಜೋರಾಗಿತ್ತು. ಖರ್ಜೂರ, ಐಸ್ ಕ್ರೀಂ, ಕಾರಾಪುರಿ, ಮಕ್ಕಳ ಆಟಿಕೆ ಅಂಗಡಿಗಳಲ್ಲಿ ವ್ಯಾಪಾರ ಭರ್ಜರಿಯಾಗಿ ನಡೆಯಿತು. ಮಕ್ಕಳು ಆಟವಾಡುವ ಬಗೆ ಬಗೆಯ ಜಾಯಿಂಟ್ ವೀಲ್‌ಗಳು ಜಾತ್ರೆಗೆ ಕಳೆಗಟ್ಟಿದ್ದವು.

ಹೆಚ್ಚಾಗಿ ಹಾಡಿಯ ಗಿರಿಜನರು ಜಾತ್ರೆಯಲ್ಲಿ ಭಾಗವಹಿಸಿದ್ದರು. ಸಾರಿಗೆ ಸಂಸ್ಥೆ ವಿಶೇಷ ಬಸ್ ವ್ಯವಸ್ಥೆ ಕಲ್ಪಿಸಿತ್ತು. ಹುಣಸೂರಿನ ವೆಂಕಟೇಶ್ವರ ಆಸ್ಪತ್ರೆ ವತಿಯಿಂದ ತಾತ್ಕಾಲಿಕ ಸೇವಾಕೇಂದ್ರ ತೆರೆದು ಬಿಪಿ, ಶುಗರ್ ಪರೀಕ್ಷೆ ನಡೆಸಿದರು. ಹರಕೆ ಹೊತ್ತ ಭಕ್ತರು ಅನ್ನದಾಸೋಹ ನಡೆಸಿದರು.

ದಯಾಮರಣಕ್ಕೆ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದ ಕುಟುಂಬ

ವಾಸವಿರುವ ಜಾಗದಿಂದ ಒಕ್ಕಲೆಬ್ಬಿಸುತ್ತಿರುವ ಆರೋಪ



ನಂಜನಗೂಡು ತಾಲೂಕಿನ ರಾಂಪುರ ಗ್ರಾಮದ ಸರ್ವೆ ನಂ. 39ರಲ್ಲಿ ವಾಸವಿರುವ ಜ್ಯೋತಿ ಕುಟುಂಬ ದಯಾಮರಣ ಕೋರಿ ಅರ್ಜಿ ಸಲ್ಲಿಸಿದೆ.

ನಂಜನಗೂಡು, ಜ.16– ತಾಲೂಕಿನ ರಾಂಪುರ ಗ್ರಾಮದ ಸರ್ವೆ ನಂ. 39 ರ 18 ಗುಂಟೆ ಪ್ರದೇಶದಲ್ಲಿ ತಲೆ ತಲಾಂತರದಿಂದ ವಾಸವಿರುವ ತಮ್ಮ ಕುಟುಂಬವನ್ನು ಒಕ್ಕಲೆಬ್ಬಿಸಿ, ಸಮು ದಾಯ ಭವನ ನಿರ್ಮಿಸಲು ಗ್ರಾಮಸ್ಥರು ಮುಂದಾಗಿರುವ ಹಿನ್ನೆಲೆಯಲ್ಲಿ ಜ್ಯೋತಿ ಮತ್ತು ಅವರ ಕುಟುಂಬ ದಯಾ ಮರಣಕ್ಕೆ ಅನುಮತಿ ನೀಡುವಂತೆ ತಹಸೀಲ್ದಾರ್ ಅವರಿಗೆ ಮನವಿ ಸಲ್ಲಿಸಿದೆ.

ವಿವಾದಿತ ಒಂದು ಎಕರೆ ಖರಾಬು ಪ್ರದೇಶದಲ್ಲಿ ದೇವಾಲಯ ನಿರ್ಮಿಸ ಲಾಗಿದೆ, ಉಳಿದ 18 ಗುಂಟೆ ಜಮೀನಿ ನಲ್ಲಿ ಕಳೆದ 90 ವರ್ಷಗಳಿಂದ ಜ್ಯೋತಿ ಅವರ ಕುಟುಂಬ ಕೃಷಿಯಲ್ಲಿ ತೊಡಗಿ ಕೊಂಡಿದೆ. ಮನೆ ನಿರ್ಮಾಣ ಕಾರ್ಯ ನಡೆಸಿದೆ. ಜಮೀನಿನಲ್ಲಿ ವಾಸವಿರುವ ಕುಟುಂಬವನ್ನು ಒಕ್ಕಲೆಬ್ಬಿಸಲು ಗ್ರಾಮಸ್ಥರು ಹುನ್ನಾರ ನಡೆಸಿರುವ ಹಿನ್ನೆಲೆಯಲ್ಲಿ ಇಡೀ ಕುಟುಂಬ ತಹಸೀಲ್ದಾರ್ ಮಂಜು ನಾಥ್ ಕಾಸ್ನೂರು ಅವರಿಗೆ ದಯಾ ಮರಣ ಕೋರಿ ಅರ್ಜಿ ಸಲ್ಲಿಸಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಜ್ಯೋತಿ, ನಮ್ಮ ಕುಟುಂಬವನ್ನು ಒಕ್ಕ ಲೆಬ್ಬಿಸಿ, ಸದರಿ ಜಾಗದಲ್ಲಿ ಅಡುಗೆ ಮನೆ ನಿರ್ಮಿಸಲು ಗ್ರಾಮಸ್ಥರು ಮುಂದಾಗಿ ಕಿರುಕುಳ ನೀಡುತ್ತಿದ್ದಾರೆ. ಸದರಿ ಜಾಗದಲ್ಲಿ ಜನತಾ ಮನೆ ನಿರ್ಮಿಸಲು ಸರ್ಕಾರದಿಂದ ಮಂಜೂರಾತಿ ಪತ್ರ ದೊರೆತಿದೆ. ವಾಸದ ಮನೆ ನಿರ್ಮಾಣ ಕಾರ್ಯ ಪ್ರಾರಂಭ ಮಾಡಿದ್ದೇವೆ. ಇದರಿಂದ ಬೇಸತ್ತಿರುವ ನಾವು ದಯಾ ಮರಣ ಕೋರಿ ಪತ್ರ ಬರೆದಿದ್ದೇವೆ. ಯಾವುದೇ ಕಾರಣಕ್ಕೂ ಇಲ್ಲಿಂದ ಜಾಗ ಖಾಲಿ ಮಾಡುವುದಿಲ್ಲ. 90 ವರ್ಷಗಳಿಂದ ನಮ್ಮ ಹಿರಿಯರು ಬದುಕಿದ ಜಾಗದಲ್ಲೇ ವಾಸ ಮಾಡಲು ಅವಕಾಶ ಮಾಡಿ ಕೊಡಬೇಕೆಂದು ಒತ್ತಾಯಿಸಿದರು.

ಗೋಪಾಲಪುರ ಡೇರಿ ಅಧ್ಯಕ್ಷ, ಉಪಾಧ್ಯಕ್ಷರಿಂದ ಅಭಿನಂದನೆ



ಮೈಸೂರು ತಾಲೂಕು ಗೋಪಾಲಪುರ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಗೋವಿಂದೇಗೌಡ, ಉಪಾಧ್ಯಕ್ಷ ಮಾದೇಗೌಡರು ಪಕ್ಷದ ನಾಯಕರಾದ ಶಾಸಕ ಜಿ.ಡಿ.ಹರೀಶ್‌ಗೌಡರನ್ನು ಅಭಿನಂದಿಸಿದರು. ಗೋಪಾಲಪುರ ಗ್ರಾಪಂ ಅಧ್ಯಕ್ಷ ಜಿ.ಕೆ.ಬಸವೇಗೌಡ, ಡೇರಿ ನಿರ್ದೇಶಕರು ಹಾಗೂ ಪಕ್ಷದ ಮುಖಂಡರುಗಳು ಈ ವೇಳೆ ಉಪಸ್ಥಿತರಿದ್ದರು.

ವನಸಿರಿ ನಾಡು ಮೇವು ಸಹಕಾರ ಸಂಘಕ್ಕೆ ಈರೇಗೌಡ ಅಧ್ಯಕ್ಷ

ಬೂದನೂರು ಬಸವರಾಜಪ್ಪ ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆ



ವನಸಿರಿ ನಾಡು ಮೇವು ರೈತ ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಅಭಿನಂದಿಸಿದ ಸಂದರ್ಭ

ಹೆಚ್.ಡಿ.ಕೋಟೆ, ಜ.16– ಹೆಚ್.ಡಿ. ಕೋಟೆ, ಸರಗೂರು ತಾಲೂಕು ವನಸಿರಿ ನಾಡು ಮೇವು ರೈತ ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಮೈಮುಲ್ ನಿರ್ದೇಶಕ ಕೆ.ಈರೇಗೌಡ, ಉಪಾ ಧ್ಯಕ್ಷರಾಗಿ ಬೂದನೂರು ಬಸವರಾಜಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹೆಚ್.ಡಿ.ಕೋಟೆ ಕ್ಷೇತ್ರದ ವನಸಿರಿ ನಾಡು ಮೇವು ರೈತ ಉತ್ಪಾದಕರ ಸಹಕಾರ ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಪ್ರತಿಸ್ಪರ್ಧಿಗಳು ಯಾರೂ ಇಲ್ಲದೆ ಇವರಿಬ್ಬರು ಅಧ್ಯಕ್ಷ–ಉಪಾಧ್ಯಕ್ಷರಾಗಿ ಆಯ್ಕೆಗೊಂಡರು.

ಇದಕ್ಕೂ ಮುನ್ನ ತಾಲೂಕಿನ ಇಂದಿರಾ ನಗರದಲ್ಲಿ ನಡೆದ ಚುನಾವಣೆಯಲ್ಲಿ ವಿವಿಧ ಮೀಸಲಾತಿಗಳಿಗೆ ನಡೆದ 13 ಸ್ಥಾನಗಳಿಗೆ 26 ಜನರು ಸ್ಪರ್ಧಿಸಿದ್ದರು. ಮೈಮುಲ್ ನಿರ್ದೇಶಕ ಕೆ. ಈರೇಗೌಡ, ಇಂದಿರಾನಗರದ ಜಯಶಂಕರ್, ಪ್ರಕಾಶ್, ಬೂದನೂರು ಬಸವರಾಜಪ್ಪ, ಬೌಚೆಗೌಡನಹಳ್ಳಿ ಬೀರೇಗೌಡ, ಮಲಾರ ಪ್ರಕಾಶ್, ಹೆಗ್ಗನೂರು ಸುಧೀರ್, ಮರಳೂರನಾಯಕ, ವಿರೂಪಾಕ್ಷ, ಮಾಗುಡಿಲು ಶಿವಕುಮಾರ, ದಡದಳ್ಳಿ ಶಿವರಾಜು, ಕೆ.ಎಂ.ಹುಂಡಿ ಲತಾ, ಭೀಮನಹಳ್ಳಿ ಶೋಭಾವತಿ ಅವರುಗಳು ಭರ್ಜರಿ ಜಯಗಳಿಸಿದ್ದರು.

ಇಂದು ನಡೆದ ಅಧ್ಯಕ್ಷರು, ಉಪಾ ಧ್ಯಕ್ಷರ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಮೈಮುಲ್ ನಿರ್ದೇಶಕ ಕೆ. ಹಿರೇಗೌಡ, ಉಪಾಧ್ಯಕ್ಷರಾಗಿ ಬೂದನೂರು ಬಸವ ರಾಜಪ್ಪ ಅವಿರೋಧವಾಗಿ ಆಯ್ಕೆ ಯಾಗಿದ್ದ ಹಿನ್ನೆಲೆಯಲ್ಲಿ ಅಧ್ಯಕ್ಷರು ಉಪಾ ಧ್ಯಕ್ಷರನ್ನು, ಸನ್ಮಾನಿಸಿ ಗೌರವಿಸಿ, ಸಿಹಿ ಹಂಚಿ ಸಂಭ್ರಮಾಚರಣೆ ಮಾಡಲಾಯಿತು.

ಚುನಾವಣಾಧಿಕಾರಿ ಪಿಡಿಒ ರೇಣುಕಾ, ಮುಖಂಡರುಗಳಾದ ಗಿರಿಗೌಡ ಇಂದಿರಾನಗರ ಶೇಖರ್ ಸೇರಿದಂತೆ ಮುಂತಾದವರು ಹಾಜರಿದ್ದರು.

ಸಿಡಿಮದ್ದು ಸ್ಫೋಟಗೊಂಡು ಎತ್ತಿಗೆ ಗಂಭೀರ ಗಾಯ

ನಂಜನಗೂಡು, ಜ.16– ಕಾಡುಹಂದಿ ಬೇಟೆಗಾಗಿ ಜಮೀನಿನಲ್ಲಿ ಅಕ್ರಮವಾಗಿ ಸಂಗ್ರಹಿಸಿ ಇಡಲಾಗಿದ್ದ ಸಿಡಿಮದ್ದು ಸ್ಫೋಟ ಗೊಂಡು ಎತ್ತು ಗಂಭೀರವಾಗಿ ಗಾಯಗೊಂಡಿ ರುವ ಘಟನೆ ತಾಲೂಕಿನ ಈರೇಗೌಡನ ಹುಂಡಿ ಗ್ರಾಮದಲ್ಲಿ ಜರುಗಿದೆ.

ಈರೇಗೌಡನಹುಂಡಿ ಗ್ರಾಮದ ಮಹ ದೇವಯ್ಯ ಎಂಬುವರ ಜಮೀನಿನಲ್ಲಿ ಕಾಡು ಹಂದಿ ಬೇಟೆಯಾಡುವ ಉದ್ದೇಶದಿಂದ ಅಕ್ರಮವಾಗಿ ಸಿಡಿಮದ್ದನ್ನು ಸಂಗ್ರಹಿಸಿ ಇಡಲಾಗಿತ್ತು ಎನ್ನಲಾಗಿದೆ. ಈ ಬಗ್ಗೆ ಗ್ರಾಮಸ್ಥರೂ ಕೂಡ ಎಚ್ಚರಿಕೆ ನೀಡಿದ್ದರು ಎನ್ನಲಾಗಿದೆ. ಆದರೂ ಗ್ರಾಮಸ್ಥರ ಮಾತಿಗೆ ಕ್ಯಾರೆ ಎನ್ನದೆ ಅಕ್ರಮವಾಗಿ ಸಿಡಿಮದ್ದನ್ನು ಜಮೀನಿನಲ್ಲಿ ಸಂಗ್ರಹಿಸಿ ಇಡಲಾಗಿತ್ತು.

ಸೋಮವಾರ ಎತ್ತು ಜಮೀನಿನಲ್ಲಿ ಮೇಯುತ್ತಿದ್ದ ವೇಳೆ ಸಿಡಿಮದ್ದಿಗೆ ಬಾಯಿ ಹಾಕಿದ ಪರಿಣಾಮ ಸಿಡಿಮದ್ದು ಸ್ಫೋಟಗೊಂಡು ಎತ್ತಿನ ಬಾಯಿ ಸಂಪೂರ್ಣವಾಗಿ ಸಿಡಿದು ಹೋಗಿದ್ದು ಚಿಕಿತ್ಸೆ ಕೊಡಿಸಲಾಗಿದೆ. ಹುಲ್ಲಹಳ್ಳಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಈ ಪ್ರಕರಣ ಜರುಗಿದೆ. ಈ ಸಂಬಂಧ ಯಾವುದೇ ಪ್ರಕರಣ ದಾಖಲಾಗಿಲ್ಲ.

ಜ.20, ಉಚಿತ ಆರೋಗ್ಯ ತಪಾಸಣಾ ಶಿಬಿರ



ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವ ಕರವೇ ಅಧ್ಯಕ್ಷ ಪುರುಷೋತ್ತಮ್

ಹುಣಸೂರು, ಜ.16– ಕನ್ನಡ ಪರ ಹೋರಾಟ ಹಾಗೂ ವಿವಿಧ ಜನಪರ ಕಾರ್ಯಕ್ರಮಗಳನ್ನು ಮಾಡುವುದರ ಜೊತೆಗೆ ಆರೋಗ್ಯ ಪರ ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳುವ ನಿಟ್ಟಿನಲ್ಲಿ ಆರೋಗ್ಯ ಶಿಬಿರವನ್ನು ಮಾಡುತ್ತಿದ್ದೇವೆ. ತಾಲೂಕಿನ ಜನರು ಇದರ ಉಪ ಯೋಗವನ್ನು ಪಡೆದುಕೊಳ್ಳಬೇಕೆಂದು ತಾಲೂಕು ಕರವೇ ಅಧ್ಯಕ್ಷ ಪುರುಷೋತ್ತಮ್ ತಿಳಿಸಿದರು.

ಪತ್ರಕರ್ತರ ಕಚೇರಿಯಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅಮು, ಹೆಚ್.ಶಿವರಾಮೇಗೌಡರ ಸಾರಥ್ಯದಲ್ಲಿ ಕನ್ನಡ ಪರ ಹೋರಾಟಗಳನ್ನು ಮಾಡಿ ಕೊಂಡು ಬರುತ್ತಿರುವ ಕರ್ನಾಟಕ ರಕ್ಷಣಾ ವೇದಿಕೆ ವಿವಿಧ ಜನಪರ ಕಾರ್ಯಕ್ರಮ ಗಳನ್ನು ಮಾಡುವುದರ ಜೊತೆಗೆ ಆರೋಗ್ಯ ಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ನಿಟ್ಟಿನಲ್ಲಿ ಹುಣಸೂರಿನ ಕಾವೇರಿ ಆಸ್ಪತ್ರೆ ಮತ್ತು ಮೈಸೂರಿನ ಲಯನ್ಸ್ ಸಹಯೋಗದೊಂದಿಗೆ ನಗರದ ಸ್ಟೋರ್ ಬೀದಿಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ (ಜ.20) ಉಚಿತ ಆರೋಗ್ಯ ಶಿಬಿರವನ್ನು ಏರ್ಪಡಿಸಲಾಗಿದೆ ಎಂದರು.

ಶಿಬಿರದಲ್ಲಿ ಉಚಿತ ಕಣ್ಣಿನ ತಪಾಸಣೆ, ನುರಿತ ವೈದ್ಯರಿಂದ ಕಿವಿ, ಮೂಗು, ಗಂಟಲು ತಪಾಸಣೆ ರಕ್ತದ ಒತ್ತಡ, ಮಧುಮೇಹ, ಸ್ತ್ರೀರೋಗ ತಪಾಸಣೆ ಹಾಗೂ ದಿವಂಗತ ಪುನಿತ್ ರಾಜ್‌ಕುಮಾರ್ ಪ್ರೇರಿತ ರಕ್ತದಾನ ಮತ್ತು ನೇತ್ರದಾನ ನೊಂದಣಿ ಕಾರ್ಯ ಕ್ರಮ ಆಯೋಜಿಸಲಾಗಿದೆ. ನಾಗರಿಕರು ಈ ಅವಕಾಶವನ್ನು ಉಪಯೋಗಿಸಿಕೊಳ್ಳ ಬೇಕೆಂದು ಮನವಿ ಮಾಡುತ್ತೇವೆ ಎಂದರು

ಬೂತ್ ಮಟ್ಟದಿಂದ ಪಕ್ಷ ಸಂಘಟಿಸಿ, ಲೋಕಸಭೆಗೆ ಸಿದ್ಧರಾಗೋಣ

ಬಿಜೆಪಿ ನೂತನ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಕರೆ



ಬಿಜೆಪಿ ಮುಖಂಡ ಡಾ. ರೇವಣ್ಣ ಅವರು ತಮ್ಮ ಬೆಂಬಲಿಗರೊಂದಿಗೆ ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷರಾಗಿ ನೇಮಕಗೊಂಡಿರುವ ಎಲ್.ಆರ್.ಮಹಾದೇವಸ್ವಾಮಿ ಅವರನ್ನು ಅಭಿನಂದಿಸಿದರು.

ತಿ.ನರಸೀಪುರ, ಜ.16– ಬಿಜೆಪಿ ಕಾರ್ಯಕರ್ತರು ಪಕ್ಷವನ್ನು ಬೂತ್ ಮಟ್ಟದಿಂದ ಸಂಘಟಿಸಿ ಲೋಕಸಭಾ ಚುನಾವಣೆಗೆ ಸಜ್ಜಾಗಬೇಕು ಎಂದು ಬಿಜೆಪಿ ಜಿಲ್ಲಾ ಗ್ರಾಮಾಂತರ ನೂತನ ಅಧ್ಯಕ್ಷ ಎಲ್ ಆರ್. ಮಹದೇವಸ್ವಾಮಿ ಕರೆ ನೀಡಿದರು.

ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡ ಡಾ. ರೇವಣ್ಣ ತಮ್ಮ ಬೆಂಬಲಿಗರೊಂದಿಗೆ ಅವರನ್ನು ಸನ್ಮಾನಿಸಿದರು. ನಂತರ ಮಾತನಾಡಿದ ಮಹದೇವಸ್ವಾಮಿ, ಬೂತ್ ಮಟ್ಟದಿಂದ ಸಂಘಟಿಸಿ ಮತ್ತೆ ಚಾಮರಾಜನಗರ ಲೋಕಸಭಾ ಕ್ಷೇತ್ರ ಬಿಜೆಪಿ ವಶವಾಗುವಂತೆ ಮಾಡೋಣ. ಇದಕ್ಕೆ ಎಲ್ಲ ವರ್ಗದ ಜನರು ಕೈಜೋಡಿಸಿ ಎಂದರು.

ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ಅವರ ಕಲ್ಪನೆ. ಹೀಗಾಗಿ ಬೂತ್ ಮಟ್ಟದಲ್ಲಿ ಪಕ್ಷ ಸಂಘಟನೆ ಮಾಡುವಂತೆ ಕಾರ್ಯ ಕರ್ತರಿಗೆ ಮನವಿ ಮಾಡಿದರು.ಬೂತ್ ಮಟ್ಟದಲ್ಲಿ ಕೆಲಸ ಮಾಡಿ ಹಲವು ನಾಯಕರು ಬೆಳೆದಿದ್ದಾರೆ. ಹೀಗಾಗಿ ಎಲ್ಲರನ್ನೂ ಒಗ್ಗೂಡಿಸಿ ಬೂತ್ ಮಟ್ಟದಲ್ಲಿ ಪಕ್ಷವನ್ನು ಸಂಘಟನೆ ಮಾಡುತ್ತೇವೆ ಎಂದರು.

ತಿ. ನರಸೀಪುರ ಕ್ಷೇತ್ರದಲ್ಲಿ ಈ ಬಾರಿ ಲೋಕಸಭಾ ಚುನಾವಣೆಯಾಗಲಿ, ತಾಪಂ ಚುನಾವಣೆಯಾಗಲಿ ಯಾರೇ ಅಭ್ಯರ್ಥಿಯಾದರೂ ಅವರ ಪರ ಕೆಲಸ ಮಾಡಿ ಅಧಿಕಾರ ಹಿಡಿಯುವಲ್ಲಿ ಯಶಸ್ವಿ ಆಗಬೇಕು ಎಂದರು.

ಡಾ. ರೇವಣ್ಣ ಮಾತನಾಡಿ, ಈ ಬಾರಿ ಯುವಕರಿಗೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ಮುಂದೆ ಬರುವ ಯಾವುದೇ ಚುನಾವಣೆ ಆಗಲಿ ಆ ಚುನಾವಣೆಯಲ್ಲಿ ಗೆಲ್ಲುವ ಮೂಲಕ ನಮ್ಮ ಶಕ್ತಿ ಏನೆಂದು ತೋರಿಸೋಣ. ಎಲ್ಲರೂ ಕೈ ಜೋಡಿಸಿ. ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡುವ ಮೂಲಕ ಮತ್ತು ಸರ್ಕಾರದ ತಪ್ಪುಗಳನ್ನು ಎತ್ತಿ ಹಿಡಿಯುವ ಮೂಲಕ ನಾವು ಸಂಘಟಿತರಾಗೋಣ ಎಂದರು.

ಟೌನ್ ಅಧ್ಯಕ್ಷ ಹಾಗೂ ಪುರಸಭಾ ಸದಸ್ಯ ಎಸ್.ಕೆ. ಕಿರಣ್, ಜಿಲ್ಲಾ ಸಂಚಾಲಕ ಎಸ್ ಬಿ ಟಿ ಸುರೇಶ್, ಜಿಲ್ಲಾ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಚೌಪ್ಹಳ್ಳಿ ಸಿದ್ದರಾಜು, ಯುವ ಮೋರ್ಚಾ ಕಾರ್ಯದರ್ಶಿ ಬೆನಕನಹಳ್ಳಿ ವಿಜಯಕುಮಾರ್, ಜಿಲ್ಲಾ ಉಪಾಧ್ಯಕ್ಷ ಎಂ.ದಾಸಯ್ಯ, ಪ್ರಧಾನ ಕಾರ್ಯದರ್ಶಿ ಕೋತ್ತೆಗಾಲ ಕಿಟ್ಟಿ, ಎಸ್ಸಿ ಮೋರ್ಚಾ ಅಧ್ಯಕ್ಷ ತೊಟ್ಟವಾಡಿ ಅನಿಲ್ ಕುಮಾರ್, ಕಾರ್ಯದರ್ಶಿ ನಂದನ್ ಕುಮಾರ್ ಮತ್ತಿತರ ಕಾರ್ಯಕತರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
ಗುಂಟೂರು ಖಾರಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಮೇರಿ ಕ್ರಿಸ್ಮಸ್(ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಕಾಟೇರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಟೇರ (ಕ)	4 ಪ್ರದರ್ಶನಗಳು
ರಾಜಕಮಲ್	
ಆಯಲಾಮ್ (ತ)	4 ಪ್ರದರ್ಶನಗಳು
ಸಂಗಂ	
ಕ್ಯಾಪ್ಟನ್ ಮಿರರ್(ಕ) 2 ಪ್ರದರ್ಶನಗಳು ಕ್ಯಾಪ್ಟನ್ ಮಿರರ್(ತ)	2 ಪ್ರದರ್ಶನಗಳು
ಲಿಡೋ	
ಹನುಮಾನ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಟೈಗರ್–3 (ಹಿಂ)	4 ಪ್ರದರ್ಶನಗಳು
ಪ್ರಭಾ	
ಗುಂಟೂರು ಖಾರಂ(ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಗುಂಟೂರು ಕಾರಂ (ತೆ): ಬೆ.9.05ಕ್ಕೆ, ಮ.3.50ಕ್ಕೆ, ಕಾಟೇರ (ಕ): ಮ.12.15ಕ್ಕೆ, ರಾ.7ಕ್ಕೆ, ರಾ.10.25ಕ್ಕೆ.
ಸ್ಕ್ರೀನ್ 2	ಅಯಲಾನ್ (ತ): ಬೆ.10ಕ್ಕೆ, ಸಂ.4.05ಕ್ಕೆ, ಮೇರಿ ಕ್ರಿಸ್‌ಮಸ್ (ತ): ಮ.1.10ಕ್ಕೆ, ಮೇರಿ ಕ್ರಿಸ್‌ಮಸ್ (ಹಿಂ): ರಾ.7.15ಕ್ಕೆ, ಅಬ್ರಾಹಂ ಓಜ್ಲರ್ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಕ್ಯಾಪ್ಟನ್ ಮಿಲ್ಲರ್ (ಕ): ಬೆ.9.55ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಮ.1ಕ್ಕೆ, ರಾ.10.20ಕ್ಕೆ, ಹನುಮಾನ್ (ತೆ): ಸಂ.4.05ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 4	ಕಾಟೇರ (ಕ): ಬೆ.9.35ಕ್ಕೆ, ಗುಂಟೂರು ಕಾರಂ (ತೆ): ಮ.1ಕ್ಕೆ, ರಾ.7.15ಕ್ಕೆ, ರಾ.10.25ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಸಂ.4.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಗುಂಟೂರು ಕಾರಂ (ತೆ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಮೇರಿ ಕ್ರಿಸ್‌ಮಸ್ (ಹಿಂ): ಬೆ.8.55ಕ್ಕೆ, ಕಾಟೇರ (ಕ): ಬೆ.11.50ಕ್ಕೆ, ಸಂ.6.50ಕ್ಕೆ, ರಾ.10.30ಕ್ಕೆ, ಅಯಲಾನ್ (ತ): ಮ.3.30ಕ್ಕೆ.
ಸ್ಕ್ರೀನ್ 3	ಕಾಟೇರ (ಕ): ಬೆ.8.50ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಮ.12.25ಕ್ಕೆ, ರಾ.10.10ಕ್ಕೆ, ಕ್ಯಾಪ್ಟನ್ ಮಿಲ್ಲರ್ (ಕ): ಮ.3.45ಕ್ಕೆ, ಮೇರಿ ಕ್ರಿಸ್‌ಮಸ್ (ಹಿಂ): ರಾ.7.05ಕ್ಕೆ.
ಸ್ಕ್ರೀನ್ 4	ಸೈಂಧವ್ (ತೆ): ಬೆ.9.10ಕ್ಕೆ, ಮ.3.35ಕ್ಕೆ, ಹನುಮಾನ್ (ತೆ): ಮ.12.10ಕ್ಕೆ, ರಾ.10ಕ್ಕೆ, ಅಯಲಾನ್ (ತ): ಸಂ.6.40ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, ಡಂಕಿ (ಹಿಂ): ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ನೆರು (ಮ): ರಾ.10.10ಕ್ಕೆ, ಸಲಾರ್ –1 (ಮ): ಸಂ.6.35ಕ್ಕೆ, ಸಲಾರ್–1 (ಹಿಂ): ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, ಸಲಾರ್–1 (ಕ): ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, ಸಲಾರ್– 1(ತೆ): ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಚಳಿಗಾಲದ ರೇಸುಗಳು



8ನೇ ದಿನ, ಬುಧವಾರ 17–1–2024

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಪಣಜಿ ಪ್ಲೇಟ್–1200 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ಕಂಟ್ರೀಸ್ ಫೇಮ್ 2. ಡಿ ಥರ್ಟಿನ್ ಟ್ವೆಲ್ 3. ಕಂಟ್ರೀಸ್ ಮೇಜರ್

II. ಸಂಕ್ರಾಂತಿ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಶಿವಾಲಿಕ್ ಸೌಂಡ್ 2. ಸ್ಟೆಪ್ ಅಪ್ ಗರ್ಲ್ 3. ದಿ ಏಂಜಲ್ ಪವರ್

III. ಮೌರಿಶಿಯಸ್ ಪೆರೆಲ್ ಪ್ಲೇಟ್–1200 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1 ಫೆಸೆಟ್ಸ್ ಆಫ್ ಲೈಫ್ 2. NRI ಮಿಲೆನಿಯಮ್ 3. ರಿಯಲ್ ಶೋ

IV. ಸ್ಕೈಲೈನ್ ಪ್ಲೇಟ್ ಡಿ2–1400 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1. ಮೈಲೋಸ್ 2. ಡಿಮ್‌ಡ್ ಟು ಫೈರ್ 3. ಸ್ಕ್ವೇರ್ ಕಟ್

V. ಏರ್‌ಫೋರ್ಸ್ ಟ್ರೋಫಿ–1600 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಮ.4.00ಕ್ಕೆ
1. ಗ್ಯಾಮ 2. ಕವರೋಜ್ಜಿ 3. ಫೆರೆಟ್ಟಿ

VI. ಕಾರ್ಕಳ ಪ್ಲೇಟ್–1200 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1 ಸ್ಪಿರಿಚಿಯಲ್ ಫೋರ್ಸ್ 2 ಗೈಡಿಂಗ್ ಫೋರ್ಸ್ 3. ಗೋಲ್ಡ್ ಕ್ರೆಸ್ಟ್

VII. ಸ್ಕೈಲೈನ್ ಪ್ಲೇಟ್ ಡಿ1–1400 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1 ಲಕ್ಕಿ ಪಾಯಿಂಟ್ 2 ಅತುಲ್ಯ 3. ಸ್ಪಾರ್ಕ್‌ಲಿಂಗ್ ನೈಟ್

ದಿನದ ಅತ್ಯುತ್ತಮ........................	: ಮೈಲೋಸ್
ಡಬ್ಬಲ್........................	: ಶಿವಾಲಿಕ್ ಸೌಂಡ್, ಗ್ಯಾಮ
ಜಾಕ್‌ಪಾಟ್........................	: 3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್........................	: 4, 5, 6 ಮತ್ತು 7
I ಟ್ರಿಬಲ್........................	: 2, 3 ಮತ್ತು 4
II ಟ್ರಿಬಲ್........................	: 5, 6 ಮತ್ತು 7
ಎಕ್ಸ್‌ಆಕ್ಟ್........................	: 1 ರಿಂದ 7

ಟಿಪ್‌ಸ್ಟರ್ ಪಿಜೆಸಿ

ನಿರಂಜನ್ ನಿಧನ



ಹುಣಸೂರು, ಜ.16– ನಗರದ ಚೆಸ್ಕಾಂ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ನೌಕರ ಹಾಗೂ ಇಲ್ಲಿನ ಎನ್.ಎಸ್.ಕಾಲೋನಿ ವಾಸಿ ನಿರಂಜನ್(32) ಮಂಗಳವಾರ ಹೃದಯಾಘಾತದಿಂದ ನಿಧನರಾದರು. ಮೃತರು ಓರ್ವ ಸಹೋದರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಗರದ ತಾಲೂಕು ಕಚೇರಿ ಪಕ್ಕದಲ್ಲಿರುವ ರುದ್ರಭೂಮಿಯಲ್ಲಿ ಮಂಗಳವಾರ ಸಂಜೆ ನೆರವೇರಿತು.





ಸ್ಥಾಪನೆ: 1916 ನೋಂದಣಿ ಸಂಖ್ಯೆ :937, ಆರ್.ಸಿ.ಎಸ್.31/01-11-1916

" ಒಂದುನೂರ ಏಳು ವರ್ಷಗಳನ್ನು ಪೂರೈಸಿರುವ ಗೃಹ ನಿರ್ಮಾಣ ಸಹಕಾರ ಸಂಸ್ಥೆ "

ದಿ ಮೈಸೂರು ಸಿಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ಲಿ.,
ಚಾಮರಾಜ ಜೋಡಿ ರಸ್ತೆ, ಮೈಸೂರು–24.

ದೂರವಾಣಿ: 0821–2448947 Email:tmcchsltd@gmail.com

ಪ್ರಕಟಣೆ

ನಮ್ಮ ಸಂಸ್ಥೆಯು ಸ್ವೀಕರಿಸುತ್ತಿರುವ ಖಾಯಂ ಠೇವಣಿ, ಪುನರ್ ತೊಡಗಿಸುವ ನಗದು ಠೇವಣಿ ಮತ್ತು ರೆಕರಿಂಗ್ ಠೇವಣಿಗಳಿಗೆ ಈ ಕೆಳಕಂಡಂತೆ ಆಕರ್ಷಕ ಬಡ್ಡಿದರವನ್ನು ನಿಗದಿಪಡಿಸಿರುತ್ತೆ.

ಅವಧಿ	ಖಾಯಂ ಠೇವಣಿ	ಪುನರ್ ತೊಡಗಿಸುವ ನಗದು ಠೇವಣಿ	ರೆಕರಿಂಗ್ ಠೇವಣಿ
181 ದಿವಸ ಮತ್ತು ಮೇಲ್ಪಟ್ಟು 1 ವರ್ಷದ ಒಳಗೆ	6.00	6.00	--------
1 ವರ್ಷ ಮತ್ತು ಮೇಲ್ಪಟ್ಟು 22 ತಿಂಗಳ ಒಳಗೆ	8.00	8.00	7.00
22 ತಿಂಗಳ ಅವಧಿಗೆ	9.00	9.00	8.00

(**ವಿಶೇಷ ಸೂಚನೆ:** 60 ವರ್ಷ ಮತ್ತು ಮೇಲ್ಪಟ್ಟ ಹಿರಿಯ ನಾಗರೀಕರಿಗೆ, ಅಂಗವಿಕಲರಿಗೆ ಮತ್ತು ಸಂಘ–ಸಂಸ್ಥೆಗಳಿಗೆ, ಒಂದು ವರ್ಷ ಮತ್ತು ಮೇಲ್ಪಟ್ಟ ಅವಧಿಗೆ ತೊಡಗಿಸುವ ಖಾಯಂ ಠೇವಣಿ ಮತ್ತು ಪುನರ್ ತೊಡಗಿಸುವ ನಗದು ಠೇವಣಿಗಳಿಗೆ ಮೇಲೆ ನಮೂದಿಸಿರುವ ಬಡ್ಡಿದರದ ಜೊತೆಗೆ ಶೇಕಡ 0.50 ರಷ್ಟು ಹೆಚ್ಚಿನ ಬಡ್ಡಿಯನ್ನು ನೀಡಲಾಗುವುದು.)

ಅದಲ್ಲದೆ ಸಂಸ್ಥೆಯು ರೂ.15,00,000–00ಗಳ ವರೆಗೆ ನಗಾಧಾರ ಸಾಲವನ್ನು ಮಂಜೂರು ಮಾಡುತ್ತಿದ್ದು, ಪ್ರತಿ ಗ್ರಾಂ ಶುದ್ಧ ಚಿನ್ನಕ್ಕೆ ರೂ.4,000–00ಗಳನ್ನು ನಿಗದಿಪಡಿಸಿದ್ದು, ಬಡ್ಡಿದರ ಶೇಕಡ 8–00 ಮತ್ತು ಯಾವುದೇ ಪ್ರಾಸಂಗಿಕ ಶುಲ್ಕವಿರುವುದಿಲ್ಲ. ಆಸಕ್ತರು ಈ ಯೋಜನೆಗಳ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಕೋರಲಾಗಿದೆ.

ದಿನಾಂಕ: 13–01–2024

ಆಡಳಿತ ಮಂಡಳಿಯ ಅಪ್ಪಣೆಯ ಮೇರೆ,
ಸಹಿ/– ಬಿ.ಎಸ್.ಶ್ರೀನಾಥ್, ಕಾರ್ಯದರ್ಶಿ,
ಮೊ :9945228842